REGISTERED NO. M. 1393. ೨೪ ಪುಟಗಳು. ಈ ಪ್ರತಿ ಒಂದಾಣೆ



ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಕಾಕೇಷ್ವಾಂಗಲನಾಯುಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಶಸ್ತ್ರಸ್ತದ್ವದಮೀಷು ಸಂನ್ಯವಹೃತಿಪ್ರಾಗಲ್ಭ್ಯಮಾತ್ಕೋಽನ್ವಹಂ
ಜೀಯಾದ್ವಿಶ್ವಜನೀನನೀತ್ಯಭಿಧಯಾ ಶ್ರೀಕಂಠಕಂಠೀರವಃ ॥

KANTEERAVA
THE ONLY KANARESE
BI-WEEKLY.

ನರಕುಲಗಳೊಳಾರ್ಯವಂಶವು, ಧರೆಯ ದೇಶಗಳೊಳಗೆ ಭಾರತ
ವತಸುತನಗಳೊಳಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆ।ರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ಜುಲಾಯಿ ತಾರೀಕು ೭ನೇ ಮಂಗಳವಾರ ಸಂಚಿಕೆ ೨೯.

VOL. XVIII MANGALORE, TUESDAY, JULY 7, 1936. NO. 29.

ಅಮೃತಾಂಜನ

(Regd.)

ತಲೆನೋವು, ತಲೆನೋವು, ಉಳುಕು, ಕುತ್ತಿಗೆ, ಭುಜ, ಹಲ್ಲುನೋವು ಮುಂತಾದ ಎಲ್ಲಾ ನೋವುಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಚೀನೆ, ಪಕ್ಷವಾತ, ನೊಡಿನು ನೆಗೆದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ದೌಷಧ.

ಅಮೃತಾಂಜನ ಡಿಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕೊಚ್ಚಿಕಾರ್ ಬ್ರದರ್ಸ್ ಮದರಾಸು ಶಾಖಾ ಕಾರ್ಯದರ್ಶಿಗಳು

ಮತ್ತು

ಬೊಂಬಾಯಿ ನಗರ ಮತ್ತು ಅವರ ಉಪನಗರಗಳಿಗೆ ಚೀಫ್ ಏಜಂಟರು

13-12-1935—ನಮ್ಮ ರಜತೋತ್ಸವ ವರುಷ.

——ಪ್ರಕಟಣೆ.——

ಪುತ್ತಿಯಾರದಲ್ಲಿ, ತಾಲೂಕು ಆಫೀಸು ರಸ್ತೆಯಲ್ಲಿ, ಪುತ್ತಿಯಾರಾ ಪೋಸ್ಟಾಫೀಸಿನ ಎದುರುಗಡೆಯಲ್ಲಿರುವ "ಸೌಮ್ಯಾಲಯಂ" ಎಂಬ ಹೊಸ ಬಂಗಲೆಯನ್ನು ನಾವು ಪಡಕೊಂಡು, ನಮ್ಮ ಕಲ್ಲಿಕೋಟೆ ಬ್ರಾಂಚ್ ಆಫೀಸನ್ನು ಅಲ್ಲಿ ತಾ. 14-3-36ರಲ್ಲಿ ತೆರೆದಿರುವೆವೆಂದು ನಮ್ಮ ಯಾವತ್ತೂ ಕೆಲಸಗಾರರಿಗೂ, ಏಜಂಟರಿಗೂ ಪೊಲಿಸಿದಾರರಿಗೂ ತಿಳಿಸಲು ಸಂತೋಷಪಡುತ್ತೇನೆ. ನಮ್ಮ ಮಲಬಾರು ಜಿಲ್ಲಾ ಏಜಂಟರಾದ ಮಿ. ಸಿ. ಶಂಕರನ್ ನಾಯರರ ಆಫೀಸು, ಹಜೂರು ರಸ್ತೆಯಲ್ಲಿದ್ದುದು ಮೊಕೂಫು ಮಾಡಲ್ಪಟ್ಟು, ಈ ಹೊಸ ಬ್ರಾಂಚ್ ಆಫೀಸಿನಲ್ಲಿಯೇ ಸಮ್ಮಿಲನವಾಗುವುದು. ಈ ಹೊಸ ಆಫೀಸು ಅನುಕೂಲ ಸ್ಥಳದಲ್ಲಿದ್ದು, ವಿಶಾಲವಾಗಿ ಸೌಕರ್ಯಗಳುಳ್ಳುದಾದ್ದರಿಂದ, ದಿನೇ ದಿನೇ ಮಲಬಾರು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ನಮ್ಮ ವಿಮಾಕಾರ್ಯದ ದೆಸೆಯಿಂದ ಈ ಹೊಸ ಕಟ್ಟಡವನ್ನು ಪಡೆಯುವ ಆವಶ್ಯಕತೆ ಕಂಡಿದ್ದು, ನಮ್ಮ ಪೊಲಿಸಿದಾರರಿಗೆ ಮತ್ತಷ್ಟು ಒಳ್ಳೆಯದಾಗಿ ನಮ್ಮ ಕಾರ್ಯಸೇವೆಯನ್ನು ಸಲಿಸಲನುಕೂಲವಾಗುವುದೆಂಬ ಭರವಸೆ ಇದೆ. ನಮ್ಮ ಆಶ್ರಯದಾತರೂ ಹಿತಚಿಂತಕರೂ ಆದಷ್ಟು ತ್ವರ್ಯದಲ್ಲಿ "ಸೌಮ್ಯಾಲಯ"ವನ್ನು ಸಂದರ್ಶಿಸಬೇಕಾಗಿ ವಿನಂತಿ. ಎಲ್ಲ ಪತ್ರವ್ಯವಹಾರವನ್ನೂ ಹಣಪಾವತಿಗಳನ್ನೂ ಚೆಕ್ಕುಗಳನ್ನೂ ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕುದು.

ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್,
ಬೊಂಬೇ ಲೈಫ್ ಆಫೀಸು,
ಪುತ್ತಿಯಾರ ಪೋಸ್ಟ್ (ಕಲ್ಲಿಕೋಟೆ—ಮಲಬಾರು)

ನಮ್ಮ ಕಂಪೆನಿಯೊಂದಿಗೆ ವ್ಯವಹಾರನಿರುವವರ ಸೌಕರ್ಯಕ್ಕಾಗಿ ನಮ್ಮ ಟೆಲಿಗ್ರಾಫ್ ವಿಳಾಸವನ್ನು "Kochikar—Calicut" ಎಂದು ರಿಜಿಸ್ಟರ್ ಸಹ ಮಾಡಿಸಿರುವೆವು.

ಸಿ. ಶಂಕರನ್ ನಾಯರ್, ಮಲಬಾರ್ ಜಿಲ್ಲಾ ಏಜಂಟ್,
ಇವರ ಸವಿನಯ ಆಮಂತ್ರಣ.

ಕೊಚ್ಚಿಕಾರ್ ಬ್ರದರ್ಸ್,
ತಾ. 1—3—1936.

ESTD:—1906.

THE CANARA BANKING CORPORATION UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed	Rs. 3,50,000—0—0
Paid up	Rs. 2,88,840—0—0
Reserve and other funds	Rs. 3,72,337—0—0
Deposits	Rs. 29,50,717—0—0.

Fixed deposit rates up to 5% p. a.

16/6/1936.

Head Office:— UDIPI.

Branches:—1. Udipi, 2. Coondapoor, 3 Car Street—Mangalore, 4. Shimoga, 5. Madras. 6. Bunder—Mangalore, 7. Mercara and 8. Virarajendrapet.

ಲಕ್ಷ್ಮೀ ಕವಚ.

ಬಡತನದಿಂದ ಕಷ್ಟಪಡುತ್ತಿರುವವರು ಈ ರಕ್ಷಾಯಂತ್ರವನ್ನು ಧರಿಸತಕ್ಕದ್ದು. ಇದನ್ನು ಧರಿಸುವುದರಿಂದ, ದುಡ್ಡುಕಾಸಿನ ತಾಪತ್ರಯಗಳು ದೂರವಾಗುವುವು; ಮತ್ತು ದಿನದಿನಕ್ಕೂ ವೃದ್ಧಿಗತಿಯು ಸಂಭವಿಸುವುದು. ಅಲ್ಲದೆ, ಸಾಲದ ಮೂಲವಾದ ತೊಂದರೆಗಳ ಪರಿಹಾರವೂ, ಸಂಸಾರದಲ್ಲಿ ಐಕ್ಯವೂ, ಪ್ರಯತ್ನಿಸಿದ ಕಾರ್ಯಗಳಲ್ಲಿ ಜಯವೂ, ಶತ್ರುಗಳೊಡನೆ ರಾಜಿಯೂ, ಕೈಕೊಂಡ ಎಲ್ಲಾ ಕೆಲಸಗಳಲ್ಲಿಯೂ ಜಯವೂ, ಅಧಿಕಾರಿಗಳ ಅನುಗ್ರಹವೂ ಇನ್ನೂ ಅನೇಕ ಉಪಕಾರಗಳನ್ನೆಸಗುವ ಉಪಯೋಗಕರಗಳಾದ ಫಲಿತಾಂಶಗಳೂ ಸಿದ್ಧಿಸುವುವು. ವರ್ತಕವರ್ಗವೂ, ಕಸುಬುದಾರರೂ, ಇಬ್ಬರೂ ಈ ರಕ್ಷಾಯಂತ್ರವನ್ನು ಧರಿಸುವುದರಿಂದ, ತಮ್ಮ ತಮ್ಮ ವೃತ್ತಿಗಳಲ್ಲಿ ಅತಿಶಯವಾದ ಅಭಿವೃದ್ಧಿಯನ್ನು ಪಡೆಯುವರು. ಈ ರಕ್ಷಾಯಂತ್ರಗಳನ್ನು ಧರಿಸುವವರು, ತಮ್ಮ ಕಾಗದದಲ್ಲಿ, ಸ್ಪಷ್ಟವಾಗಿ, ತಮ್ಮ ಸಂಪೂರ್ಣವಾದ ಹೆಸರುಗಳನ್ನೂ, ಅಂದಾಜಿನ ವಯಸ್ಸನ್ನೂ ನಮೂದಿಸತಕ್ಕದ್ದು.

ಚಾರ್ಜಿನ ವಿವರ.

ಲಕ್ಷ್ಮೀ ಕವಚ	ರೂ. 5—0—0
ವಿ. ಪಿ. ಪಾರ್ಸೆಲು	ರೂ. 0—5—0

ಹನುಮಂತ ಉಪಾಸಿ ವಿ. ಕೆ. ಸತಗೋಪಾಚಾರಿಯರ್,

ಹನುಮಾನ್ ಜ್ಯೋತಿಷ್ಯ ಆಶ್ರಮ, ತಿರುತ್ತಣ್ಣಿ, ದ. ಇಂಡಿಯಾ.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Pomona Sprayers

Here is a very useful Sprayer for Agriculturists, landholders, farmers, for spraying chemicals to the infected trees even to the height of 80 ft. from the ground level. It is strongly built so as to give a satisfactory service for many



years and is imported from Germany specially to meet the needs of Estate owners for spraying chemicals to the infected trees.

Price each Sprayer Rs. 33—0—0
Spray Controller „ 7—8—0

BASEL MISSION BOOK DEPOT,
MANGALORE.

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ **"ಕಾಫಿ ಕಲ್ಲರ್"** ಸೀರೆಗಳನ್ನೇ ಉಪಯೋಗಿಸಿರಿ!
ಕಡಿಮೆ ಬೆಲೆಗೆ-ತರತರದ ಬಣ್ಣದ-ನಮೂನೆವಾರು ಅಂಚಿನ-ಸೀರೆಗಳು!
ಒಮ್ಮೆ ಬಂದು ನಮ್ಮ ಅಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಪೈ ಬ್ರದರ್ಸ—ಉಡುಪಿ.
ದಿ ಕರ್ನಾಟಕ ಡ್ರಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್
ಏಜಂಟರು:—**ಸೂಜಿಕರ್ಲರ್ ಬ್ರದರ್ಸ್—ಮಂಗಳೂರು.**

VASANTHI HARMONIUMS FOR MELODY AND DURABILITY.

ಶುದ್ಧ ಮತ್ತು ಮಂಜುಳ ಧ್ವನಿಯಿಂದ ಕೂಡಿರುವ ವಸಂತಿ ಹಾರ್ಮೋನಿಯಂನ್ನು ನಿಮ್ಮ ಗೃಹಗಳಲ್ಲಿ ಉಪಯೋಗಿಸಿ, ಸಂಗೀತಸುಖವನ್ನು ಪಡೆಯಿರಿ. ಸಿಂಗಲ್, ಡಬ್ಬಲ್, ಟ್ರಿಬ್ಲ್, ಪೊರ್ಟಬ್ಲ್, ಕಾಲಿನ ಫೊಲ್ಡಿಂಗ್ ವಗೈರೆ ಎಲ್ಲಾ ತರದ ಹಾರ್ಮೋನಿಯಂಗಳು ತಯಾರಿ ಸಲ್ಪಡುವುವು.

ವಸಂತಿ
ಹಾರ್ಮೋನಿಯಂ ವರ್ಕ್ಸ್,
ಹಂಪನಕಟ್ಟೆ, ಮಂಗಳೂರು.



MUSIC IS THE CHARM OF LIFE

and Vasanthi Harmoniums supply that charm.

VASANTHI HARMONIUM WORKS,
Hampankatta, Mangalore.

Specially constructed in our workshop. Well Tuned & Fitted to withstand Indian Climate.

Proprietor:—

ATTAVAR BABOO.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶಾರೀರಕ ಯೋಗ್ಯತೆಯು ರಮ್ಯವಾದ ಅನುಭವವಾಗಿದೆ ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ, ಬಿ. ಪಿ. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

GOVT. SOAP FACTORY, BANGALORE.

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ- ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/-ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಪೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3- 0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಪ್ರಸಿದ್ಧ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತವಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಬೇಗದಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ಮೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್
ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ನಿ.

The Central Mutual Life Assurance Society, Ltd., BOMBAY.

MUTUAL means Policyholders, own

Insure with for safety through

——> **The Pioneer General Insurance** AGENCY OF **West Coast, Mangalore.**

DIAMOND POLICY

offers unique advantages.

Investment consistant with saftey.

ASK FOR PROSPECTUS.

ಈ ವಾರದ ಕಥೆ:—

ಅನಂತಯ್ಯನ ಅದೃಷ್ಟ.

(ಶ್ರೀ। ಯಂ. ಆರ್. ಶಾಸ್ತ್ರಿ, ಮಂಗಳೂರು)

ಅನಂತಯ್ಯ ತನ್ನ ಇಪ್ಪತ್ತನೆಯ ವರ್ಷದಲ್ಲಿ ಎಫ್. ಎ. ಪಾಸಾಗಿ ಉಪಾಧ್ಯಾಯರ ತರಬೇತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಬಳಿಕ ಊರಿನ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಿದರು. ಅವರಿಗೆ ತಿಂಗಳಿಗೆ ೫೦/— ರೂಪ್ಯಾ ಸಂಬಳ ಸಿಗುತಿತ್ತು. ಇದರಿಂದ ಯಾವ ಕಷ್ಟವೂ ಇಲ್ಲದೆ ಅವರ ಜೀವನ ಆಗುತಿತ್ತು. ೧೯೨೪ನೆ ಇಸವಿಯಲ್ಲಿ ಮಹಾತ್ಮಾಗಾಂಧಿಯವರ ಅಸಹಕಾರ ಚಳವಳವು ತಲೆಯೆತ್ತಿದಾಗ ಅವರು ಉಪಾಧ್ಯಾಯವೃತ್ತಿಯನ್ನು ಕೈಕೊಂಡು ಮೂವತ್ತು ವರ್ಷಗಳು ಕಳೆದು ಹೋಗಿದ್ದವು. ಅಷ್ಟರ ವರೆಗೆ ಅವರ ಜೀವಿತದಲ್ಲಿ ಯಾವ ವಿಶೇಷ ಸಂಗತಿಯೂ ನಡೆದದ್ದಿಲ್ಲ. ಎಲ್ಲ ಆ ಬಳಿಕವೇ.

ಅಸಹಕಾರ ಚಳವಳದ ಕಾಲದಲ್ಲಿ ರಾಷ್ಟ್ರಧ್ವಜಗಳ ಹಾರಾಟ, ಮುಂದಾಳುಗಳ ಭಾಷಣ, ಚರಕಗಳ ತಿರುಗಾಟ, ಇವುಗಳಿಂದ ಅನಂತಯ್ಯನ ಮನಸ್ಸು ಪಲ್ಲಟವಾಯಿತು. ಮೊದಲೇ ಅವರು ಸ್ವಾತಂತ್ರ್ಯಾಭಿಮಾನಿಗಳು. ಯಾರಿಗೂ ಬಗ್ಗಿ ನಡೆಯದ ಗುಣ ಅವರದು. ಅವರ ಹೃದಯದ ಸ್ವಾತಂತ್ರ್ಯ ಬೀಜಕ್ಕೆ ಈಗ ನೀರೆರೆದಂತೆ ಆಯಿತು. ಹಲವರು ದೇಶಕ್ಕಾಗಿ ಹೋರಾಡುತ್ತಿರುವರು. ಮಾತೃಭೂಮಿಯ ಬಂಧವಿಮೋಚನೆಗಾಗಿ ತಮ್ಮ ದೇಹವನ್ನು ಸವೆಯಿಸುತ್ತಿರುವರು. ಈ ಕಾಲದಲ್ಲಿ ಸುಖದಿಂದ ಜೀವನ ಮಾಡಿಕೊಂಡಿರುವುದೇ? ಹಾಗೆ ಮಾಡಿದರೆ, ಈ ದೇಶದಲ್ಲಿ ಹುಟ್ಟಿ ಏನು ಪ್ರಯೋಜನವಾಯಿತು?— ಎಂಬಿವೇ ಮೊದಲಾದ ಹಲವು ಭಾವನೆಗಳು ಅವರ ಹೃದಯದಲ್ಲಿ ಮೊಳೆದೋರಿದವು. ಶಾಲೆಯಲ್ಲಿ ಕಲಿಸಲು ಮನಸ್ಸಿಲ್ಲ. ಪುಸ್ತಕ ಹಿಡಿದರೆ, ದೇಶವು ತನ್ನನ್ನು ಕೂಗಿ ಕರೆಯುತ್ತಿರುವಾಗ, ತಾನು ಹೀಗೆ ಮಾಡುವುದು ಸರಿಯೇ? ಎಂಬ ಪ್ರಶ್ನೆ ಅವರ ಅಂತರಂಗವನ್ನು ಕೊರೆಯುವುದು. ಎರಡು ರಾತ್ರೆ ಇದೇ ವಿಷಯವನ್ನು ಯೋಚಿಸಿದರು. ಒಂದು ಕಡೆ ತಾಯಿನಾಡಿನ ಕರೆ. ಇನ್ನೊಂದು ಕಡೆ ತನ್ನ ಹಾಳು ಮಾಸ್ತರಿಕೆ. ಇವುಗಳಿಡೆಯಲ್ಲಿ ಅವರ ಮನಸ್ಸು ತೂಗುತೊಟ್ಟಿಲಾಯಿತು. ಪರತಂತ್ರರಾಗಿ ಬಾಳುವು ದಕ್ಕಿಂತ ಸ್ವತಂತ್ರರಾಗಿ ಸಾಯುವುದು ಎಷ್ಟೋ ಲೇಸೆಂತ ಅವರಿಗೆ ಕಂಡಿತು. ಇಂತಹ ಸುಸಂಧಿ ಇನ್ನೆಂದಿಗೂ ಬರಲಿಕ್ಕಿಲ್ಲವೆಂದು ಗ್ರಹಿಸಿ, ಕೊನೆಗೆ ನಿರ್ಧರಿಸಿದರು—ಉಪಾಧ್ಯಾಯವೃತ್ತಿಗೆ ರಾಜಿನಾಮೆ ಕೊಡುವುದು ಎಂತ.

ಮರುದಿನ ಅನಂತಯ್ಯ ತಾನು ಬರೆದ ರಾಜಿನಾಮೆಯನ್ನು ಹೆಡ್ಮಾಸ್ತರರಿಗೆ ಕೊಟ್ಟರು. ಅವರಿಗೆ ಅದನ್ನು ನೋಡಿ ಬಹಳ ವ್ಯಸನವಾಯಿತು. ಅನಂತಯ್ಯನಲ್ಲಿ ಅವರ ಪ್ರೀತಿ ಬಹಳ. ಆದ್ದರಿಂದ ಅವರನ್ನು ಕರೆದು, ಹಿಂದುಮುಂದು ನೋಡದೆ ಧುಮುಕುವುದು ಸರಿಯಲ್ಲವೆಂತ ಎಚ್ಚರಿಸಿದರು. 'ಸ್ವಾತಂತ್ರ್ಯದ ಹೋರಾಟವೆಂದರೆ ನಾಲ್ಕು ದಿನಗಳಲ್ಲಿ ಮುಗಿಯುವ ಆಟವಲ್ಲ. ಅದಕ್ಕಾಗಿ ದೇಹಾಂತ್ಯದ ತನಕ ಇರುವ ಈ ಜೀವನೋಪಾಯವನ್ನು ಬಿಟ್ಟುಬಿಡುವುದೇ?' ಎಂತ ಕೇಳಿದರು.

ಆಗ ಅನಂತಯ್ಯ ಕೊಟ್ಟ ಉತ್ತರ ಇಷ್ಟೆ— 'ಮಾತೃಭೂಮಿಯ ಬಿಡುಗಡೆಗಾಗಿ ನನ್ನ ಅಣ್ಣತಮ್ಮಂದಿರು ರಾತ್ರಿಹಗಲು ಪ್ರಯತ್ನಿಸುತ್ತಿದ್ದಾರೆ. ನಾನು ಮಾತ್ರ ಸುಖದಿಂದಿರಬೇಕೇ? ಇದು ನನ್ನ ಮನಸ್ಸಾಕ್ಷಿಗೆ ವಿರೋಧ. ಆದ್ದರಿಂದ ನನ್ನ ಯೋಚನೆಯನ್ನು ಬಿಟ್ಟುಬಿಡಿ. ನಾನು ಖಂಡಿತವಾಗಿಯೂ ಹೋಗುತ್ತೇನೆ. ತಡೆಯಬೇಡಿ. ನನ್ನನ್ನು ಕ್ಷಮಿಸಿರಿ.' ಎಂದರು. ಹೆಡ್ಮಾಸ್ತರರ ಯಾವ ಉತ್ತರವನ್ನೂ ನಿರೀಕ್ಷಿಸದೆ ಅಲ್ಲಿಂದ ಹೊರಟುಹೋದರು. ಗೇಟಿನ ಹತ್ತಿರ ಬಂದವರೇ, ತಾನು ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ಮಾಡಿದ, ಮೂವತ್ತು ವರ್ಷ ಹಲವು ಹುಡುಗರಿಗೆ ವಿದ್ಯಾದಾನ ಮಾಡಿದ ತನ್ನ ಶಾಲೆಗೆ ಮನಸ್ಸಿನಲ್ಲಿಯೇ ನಮಸ್ಕರಿಸಿದರು. ಮತ್ತೆ ಹಿಂತಿರುಗಿ ನೋಡದೆ ಹೊರಟುಹೋದರು. ಅವರ ಸಂಸಾರದಲ್ಲಿ ಇಷ್ಟರ ತನಕ ಇದ್ದ ಸುಖ, ಶಾಂತಿ, ಇವುಗಳಿಗೆ ಇಲ್ಲಿಗೆ ಕೊನೆಯಾಯಿತು.

ಅನಂತಯ್ಯ ಅಲ್ಲಿಂದ ಹೊರಟವರು, ಖಾದಿ ಅಂಗಡಿಗೆ ಹೋಗಿ, ತನ್ನ ಹೆಂಡತಿಗೆ ಎರಡು ಸೀರೆ; ಎರಡು ರವಕೆ; ತನಗೆ ಮತ್ತು ಮಕ್ಕಳಿಗೆ ಬೇಕಾದ ಬಟ್ಟೆಗಳು; ಇವುಗಳನ್ನೆಲ್ಲ ಕೊಂಡು ಕೊಂಡು ಮಧ್ಯಾಹ್ನ ಸಮಯಕ್ಕೆ ಮನೆಗೆ ಬಂದರು. ಹೆಂಡತಿಗೆ ಗಂಡನ ಕೈಯ ಗಂಟನ್ನು ಕಂಡು ವಿಚಿತ್ರವೆನಿಸಿತು. ಆಕೆ 'ಶಾಲೆಗೆ ಹೋಗಲಿಲ್ಲವೇ?' ಎಂತ ಕೇಳಿದಳು.

ಅನಂತಯ್ಯ 'ಎಲ್ಲ ಮತ್ತೆ ಹೇಳುತ್ತೇನೆ. ನಿನ್ನ ಸೀರೆಯನ್ನು ಬಿಚ್ಚಿಹಾಕಿ ಇದನ್ನು ಉಟ್ಟುಕೋ.' ಎಂದು ಹೇಳುತ್ತ, ಗಂಟನ್ನು ಬಿಚ್ಚಿ ಒಂದು ಸೀರೆಯನ್ನು ತೆಗೆದುಕೊಟ್ಟರು. ತಾನು ಹೇಳದೇ ಗಂಡನು ಸೀರೆ ತಂದುದರಿಂದ ಆಕೆಗೆ ಆದ ಸಂತೋಷಕ್ಕೆ ಮಿತಿಯಿಲ್ಲ. ಆದರೆ ದೊರಗು ಸೀರೆಯನ್ನು ನೋಡಿ, ಏನೋ ವಿಶೇಷ ವಿರಬಹುದೆಂದು ಸಂದೇಹಪಟ್ಟಳು. ಆದರೂ ಸೀರೆಯನ್ನು ಉಟ್ಟುಕೊಂಡಳು. ಅನಂತಯ್ಯ ಖದ್ದರ್ ಬಟ್ಟೆಗಳನ್ನು ಮಕ್ಕಳಿಗೆ ತೊಡಿಸಿ, ತಾನೂ ತೊಟ್ಟುಕೊಂಡು, ಟೊಪ್ಪಿಯನ್ನು ತಲೆಗೇರಿಸಿದರು. ಮನೆಯವರಿಗೆ ಇವೆಲ್ಲ ಅಪೂರ್ವವೆನಿಸಿತು.

ತರುವಾಯ ಅನಂತಯ್ಯ 'ನಮಗೆ ಪರದೇಶಿ ವಸ್ತ್ರ ಬೇಡ. ನಮ್ಮ ವಸ್ತ್ರವೇ ನಮಗೆ ಇರುವಾಗ ಇನ್ನೊಬ್ಬರದೇಕೆ? ಪೆಟ್ಟಿಗೆಯಲ್ಲಿರುವ ಆ ಸೀರೆಗಳನ್ನೆಲ್ಲ ಇಲ್ಲಿ ತಾ.' ಎಂದರು. ಹೆಂಡತಿ— 'ಇದ್ದದ್ದು ಹಾಗೇ ಇರಲಿ. ನೀವು ಕೈಕಾಲು ತೊಳೆದುಕೊಂಡು ಊಟಕ್ಕೆ ಬನ್ನಿರಿ.' ಎಂದಳು.

ಅನಂತಯ್ಯ 'ಪರದೇಶಿ ವಸ್ತ್ರಗಳನ್ನು ತೀರಿಸಿಯೇ ಊಟ ಮಾಡುವುದು.' ಎಂದರು.

ಹೆಂಡತಿ ಉಪಾಯವಿಲ್ಲದೆ ಹೆಚ್ಚು ಬೆಲೆ ಬಾಳುವ ವಸ್ತ್ರಗಳನ್ನೆಲ್ಲ ತಂದು ಗೆಂಡನ ಮುಂದೆ ಇಟ್ಟಳು. ಅನಂತಯ್ಯ ತನ್ನ ಮನೆಯಲ್ಲಿರುವ ಎಲ್ಲ ಪರದೇಶಿ ವಸ್ತ್ರಗಳನ್ನೂ ಅಂಗಳದಲ್ಲಿ ರಾಶಿಹಾಕಿ ಹೋಮ ಮಾಡಿದರು. ಹೆಂಡತಿಗೆ ಹೊಸ ಸೀರೆಯನ್ನು ನೋಡಿ ಉಂಟಾದ ಆನಂದಕ್ಕಿಂತ ಹೆಚ್ಚು ದುಃಖ ಆಗ ಆಯಿತು. ಆದರೆ ಮಾಡುವುದೇನು? ಎಲ್ಲವನ್ನೂ ನೋಡುತ್ತ ನಿಂತಳು.

ಅಂದಿನಿಂದ ಅನಂತಯ್ಯನ ಮನೆಯ ರೀತಿಯೇ ಬೇರೆಯಾಯಿತು. ಕನ್ನಡಿಯ ಚಿತ್ರಗಳಿಂದ ಚಿತ್ರಗಳನ್ನು ತೆಗೆದು, ಆ ಸ್ಥಳದಲ್ಲಿ ಪ್ರಸಿದ್ಧ ದೇಶಭಕ್ತರ ಚಿತ್ರಗಳನ್ನು ಸೇರಿಸಿದರು. ಪರದೇಶಿ ವಸ್ತುಗಳು, ಹುಡುಕಿದರೂ ಅವರ ಮನೆಯಲ್ಲಿ ಸಿಕ್ಕದಂತಾಯಿತು. ಅನಂತಯ್ಯ ಒಂದು ಚರಕವನ್ನು ತೆಗೆದುಕೊಂಡು ಮನೆಯವರೊಡನೆ ನೂಲು ಬಿಡುವಂತೆ ಹೇಳಿದ್ದು ಮಾತ್ರವಲ್ಲದೆ, ಮನೆಮನೆಗೆ ಹೋಗಿ ಹಾಗೇ ಮಾಡಬೇಕೆಂತ ಬೋಧಿಸಿದರು. ಅಲ್ಲಲ್ಲಿ ಭಾಷಣಗಳನ್ನು ಕೊಟ್ಟರು. ಖದ್ದರ್ ಬಟ್ಟೆಗಳನ್ನು ಮಾರಾಟ ಮಾಡಿದರು. ಕಾಂಗ್ರೆಸ್ಸಿಗೆ ದ್ರವ್ಯಸಹಾಯ ಮಾಡಿದರು. ಮದುವೆ ಮೊದಲಾದ ಶುಭಕಾರ್ಯಗಳಾಗುವಲ್ಲಿ ಬ್ರಾಹ್ಮಣರಿಗೆ ದಕ್ಷಿಣೆ ಸಿಕ್ಕಿದ ಕೂಡಲೇ ದೇಶಕ್ಕೆ ಸಹಾಯ ಮಾಡಬೇಕೆಂದು ಖದ್ದರ್ ಟೊಪ್ಪಿಯನ್ನು ಬಿಡಿಸಿ ಹಿಡಿಯುವರು. ಕೆಲವರು ಉದಾರ ಮನಸ್ಸಿನಿಂದ ಕೊಡುವರು. ಕೆಲವರು 'ಇದೊಂದು ದೆವ್ವ, ನಾವು ದಕ್ಷಿಣೆಗೆ ಹೋದಲ್ಲಿ ಬೆನ್ನು ಹಿಡೀತದೆ.' ಎಂದು ಮನಸ್ಸಿನಲ್ಲಿ ಬೈಯುತ್ತ, ಟೊಪ್ಪಿಯಲ್ಲಿ ಹಣವನ್ನು ಹಾಕುವರು. ಅನಂತಯ್ಯ ಯಾರ ಮಾತುಗಳಿಗೂ ಲಕ್ಷ್ಯಮಾಡುತಿದ್ದಿಲ್ಲ. ತನ್ನ ಕರ್ತವ್ಯವನ್ನು ತಾನು ಮಾಡುತಿದ್ದರು.

ಒಮ್ಮೆ ಎದ್ದ ಬಿರುಗಾಳಿ ನಿಂತಿತು. ತೆರೆಗಳು ಅಡಗಿದವು. ಸ್ವಾತಂತ್ರ್ಯಸಂಗ್ರಾಮವು ರೂಪಾಂತರಗೊಂಡಿತು. ಚರಕಗಳು ಮೂಲೆಗೆ ಬಿದ್ದವು. ಭಾಷಣಗಳು ಕಡಿಮೆಯಾದವು. ಎಲ್ಲರ ಉತ್ಸಾಹವೂ ಸ್ವಲ್ಪ ಮಟ್ಟಿಗೆ ತಣ್ಣಗಾಯಿತು. ಅನಂತಯ್ಯ ಸುಲಭದಲ್ಲಿ ಜಯಸಂಪಾದನೆ ಆಗಬಹುದೆಂತ ತಿಳಿದಿದ್ದರು. ಈಗ ತಾನೇನು ಮಾಡುವುದು? ಜೀವನಕ್ಕೇ ಕಷ್ಟವಾಯಿತು. ಮಾಸ್ತರಿಕೆಯಿಂದ ಕೂಡಿಟ್ಟ ಸ್ವಲ್ಪ ಹಣ ಎಷ್ಟು ಕಾಲ ಬರಬಹುದು? ಅದರಲ್ಲೂ ತನ್ನದು ದೊಡ್ಡ ಸಂಸಾರ. ಬಂಧುಬಾಂಧವರ ಸಹಾಯ ಎಂದಿಗೂ ದೊರೆಯುವಂಥದ್ದಲ್ಲ. ದೊರೆತರೂ ಅನಂತಯ್ಯನ ನಿರಾವಲಂಬನದ ಚಿತ್ತವೃತ್ತಿಗೆ ಅದು ಹಿಡಿಯಲಿಕ್ಕಿಲ್ಲ. ಹೀಗಾಗಿ ಜೀವನೋಪಾಯದ ಯೋಚನೆ ಬಲವಾಯಿತು. ಹೆಂಡತಿಯ ನಗನಾಣ್ಯಗಳನ್ನು ಮಾರಿ ಒಂದೆರಡು ತಿಂಗಳು ಕಾಲಕ್ಷೇಪ ಮಾಡಿದರು. ಮುಂದೇನು ಗತಿ?

ಅನಂತಯ್ಯ ಐವತ್ತು ವರುಷದ ಮುದುಕ—ಉದ್ಯೋಗಕ್ಕಾಗಿ ಬೀದಿ ಬೀದಿ ಅಲೆಯ ತೊಡಗಿದರು. ಹಲವು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಯುವಕರಿಗೇ ಕೆಲಸ ಸಿಗದ ಕಾಲವಿದು. ಮುಂದಕ್ಕಾದರೂ ದೊರೆಯಬಹುದೆಂಬ ಆಶೆಯಿಂದ ಧರ್ಮಾರ್ಥವಾಗಿ ಕೆಲಸ ಮಾಡುವ ಜನರೇ ಹೆಚ್ಚು. ಇಂತಹ ಕಾಲದಲ್ಲಿ ಈ ಮುದುಕನಿಗೆ ಎಲ್ಲಿಂದ ಕೆಲಸ ಸಿಗಬೇಕು?

ಅನಂತಯ್ಯ ತನ್ನ ಹಿಂದಿನ ಶಾಲಾಧಿಕಾರಿಗಳಲ್ಲಿ ಕೆಲಸ ಕೊಡಬೇಕೆಂತ ಬೇಡಿದರು. ತಾನಾಗಿ ಬಿಟ್ಟುಹೋದವನಿಗೆ ಎಂದಿಗೂ ಕೊಡಲಾಗುವುದಿಲ್ಲವೆಂದು ಅವರು ತಿರಸ್ಕರಿಸಿದರು. ಅನಂತಯ್ಯನಿಗೆ ದಿಕ್ಕೇ ತೋರದು. ದಿನಕ್ಕೆ ಒಂದು ಊಟಕ್ಕಾದರೂ ಗತಿಯಿಲ್ಲ. ಮನೆಗೆ ಹೋದರೆ ಹೆಂಡತಿಮಕ್ಕಳ ಬಾಡಿದ ಮೋರೆ ನೋಡಿದರೆ, ಚೂರಿಯಿಂದ ಎದೆಯನ್ನು ತಿವಿದಂತಾಗುವುದು. ಇನ್ನು ಶ್ರೀಮಂತರ ಮನೆಯಲ್ಲಿ ಒಂದೆರಡು 'ಟ್ಯೂಶನ್' ಸಿಕ್ಕುತ್ತದ್ದೋ, ನೋಡೋಣವೆಂದು ಎರಡು ಮೂರು ದಿನ ಊರೆಲ್ಲ ಸುತ್ತಾಡಿದರು. ಹಿಂದು ಮನೆಯವರು—'ನಾಳೆ ಬನ್ನಿ.' ಎಂದರು. ಅನಂತಯ್ಯ ಮರುದಿನ ಪುನಃ ಹೋದರು. ಯಜಮಾನನು ಮರುದಿನ ಬಾರೆಂದನು. ಅನಂತಯ್ಯನಿಗೆ ಸಿಟ್ಟು ಬಂತು. 'ಇದ್ದರೆ ಉಂಟೆನ್ನಿ. ನಾಳೆ ನಾಳೆ ಎಂತ ಕುಣಿಸೋದು ಬೇಡ' ಎಂದರು. ತನ್ನಲ್ಲಿ ಹೀಗೆ ಮಾತಾಡುತ್ತಿರುವ ಅನಂತಯ್ಯನನ್ನು ಕಂಡು ಯಜಮಾನನಿಗೆ ಆಶ್ಚರ್ಯವಾಯಿತು. ಆದರೂ ಅವರನ್ನು, ತನ್ನ ಮಕ್ಕಳಿಗೆ ಕಲಿಸಲು ಉಪಾಧ್ಯಾಯರಾಗಿ ೧೫ ರೂಪಾಯಿ ಸಂಬಳಕ್ಕೆ ಇಟ್ಟುಕೊಂಡನು. ಒಂದೆರಡು ತಿಂಗಳು ಈ ಹದಿನೈದು ರೂಪಾಯಿಗಳಲ್ಲಿ, ಅರೆಹೊಟ್ಟೆಯುಂಡು ಅನಂತಯ್ಯನ ಸಂಸಾರದ ಪೋಷಣೆಯಾಯಿತು. ಅಷ್ಟರಲ್ಲಿ, ತನ್ನ ಮಕ್ಕಳು ಪರೀಕ್ಷೆಯಲ್ಲಿ ಪಾಸಾದುದರಿಂದ ಯಜಮಾನನು 'ಟ್ಯೂಶನ'ನ್ನು ನಿಲ್ಲಿಸಿದನು. ಅನಂತಯ್ಯನ ಅವಸ್ಥೆ ಪುನಃ ಮೊದಲಿನಂತೆಯೇ ಆಯಿತು. ಇನ್ನೆಂದಿಗೂ ಪರಾಧೀನ ವೃತ್ತಿ ತನಗೆ ಬೇಡವೆಂತ ಅವರು ನಿಶ್ಚೈಸಿದರು.

ಸ್ವತಂತ್ರವಾಗಿ ಜೀವಿಸುವ ಬಗೆ ಹೇಗೆ? ಅನಂತಯ್ಯ ಹಿಂದೆ ಮಾರುವಾಗ ಉಳಿದಿದ್ದ ಹೆಂಡತಿಯ ಒಂದು ಜತೆ ಬೆಂಡೋಲೆಯನ್ನು ಮಾರಿದರು. ಸಿಕ್ಕಿದ ೨೦೦ ರೂಪ್ಯಾಗಳಿಂದ ಒಂದು ಚಿಕ್ಕ ಅಂಗಡಿಯನ್ನಿಟ್ಟರು; ವ್ಯಾಪಾರ ಮಾಡಿದರು. ದೊಡ್ಡ ಅಂಗಡಿಗಳಿಂದ ಸಾಲ ಮಾಡಿ ಸಾಮಾನು ತಂದರು. ಹೀಗೆ ವ್ಯಾಪಾರ ಕೆಲವು ಕಾಲ ನಡೆಯಿತು.

ವ್ಯಾಪಾರವೆಂದರೆ ಎಲ್ಲರಿಂದಲೂ ಆಗಲಿಕ್ಕಿಲ್ಲ. ಸತ್ಯ, ಆತ್ಮಸಾಕ್ಷಿ, ಸ್ವಾವಲಂಬನ, ಇಂಥ ಉದಾತ್ತಗುಣಗಳುಳ್ಳವರು ವ್ಯಾಪಾರದಲ್ಲಿ ಉದ್ಧಾರವಾದಾರೇ? ಮರುವರ್ಷ ಧನಲಕ್ಷ್ಮೀ ಪೂಜೆ ಬರುವಾಗ ಅನಂತಯ್ಯನಿಗೆ ೪೦೦ ರೂಪ್ಯಾ ಸಾಲ ನಿಂತಿತು. ಅವರು ಸಾಮಾನು ತರುತ್ತಿದ್ದ ಅಂಗಡಿಗಳಿಂದ ಅಂಗಡಿ ಪೂಜೆಯ ಕಾಗದಗಳು ಬರತೊಡಗಿದವು. ದೀಪಾವಳಿ ದಿನ ಸಾಲ ತೀರಿಸದಿದ್ದರೆ ಊರಲ್ಲಿ ನಿಲ್ಲುವುದು ಹೇಗೆ? ಮನೆಯಲ್ಲಿ ನಾಲ್ಕಾರು ಮಣ್ಣಿನ ಮಡಕೆಗಳಲ್ಲದೆ ಬೇರೇನೂ ಇಲ್ಲ. ಸಾಲಗಾರರ ಬಲೆಯಿಂದ ತಾನು ಈ ಜನ್ಮದಲ್ಲಿ ಪಾರಾಗಲಾರೆನೆಂದು ಅನಂತಯ್ಯನಿಗೆ ಖಚಿತವಾಯಿತು. ಆದ್ದರಿಂದ ಅವರು ಹೆಚ್ಚು ವ್ಯಸನಪಡಲಿಲ್ಲ. ದೀಪಾವಳಿ ದಿನ ತನ್ನ ಅಂಗಡಿಗೆ ಬಾಗಿಲು ಮುಚ್ಚಿ, ಮನೆಯಲ್ಲೇ ನಿಂತರು.

ಅನಂತಯ್ಯ ಧನಲಕ್ಷ್ಮೀ ಪೂಜೆಯನ್ನು ಆಚರಿಸದಿದ್ದರೂ ಅದು ಕಳೆದೇ ಹೋಯಿತು. ಆದರೆ, ಅದು ಕಳೆದ ಬಳಿಕ ಆ ಊರಿನಲ್ಲಿ ಅನಂತಯ್ಯನನ್ನು ಯಾರೂ ನೋಡಲಿಲ್ಲ.

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP YOU TO SAVE MONEY SENSIBLY.

THE PALAI CENTRAL BANK, LTD,
(INCORPORATED IN TRAVANCORE.)
BUNDER ROAD, MANGALORE.
London Agents— Lloyds Bank, Ltd.
New York— National City Bank of New York.

ವರ್ಷಾಂತರಗಳ ಪ್ರಯತ್ನವೂ, ಸಾಹಸವೂ ತಾಜಾ ವಜ್ರಗಳ ಬದಲು ಈ ಯೋಗ್ಯ ಸಾಧನವನ್ನು ಕಲ್ಪಿಸಿದೆ.

MODERN DIAMONDS

ಅದರ ಅದ್ವಿತೀಯವಾದ ಸೌಂದರ್ಯವೂ ಕಣ್ಣನ್ನು ಕೊರೈಸುವ ಬಿಳಿ ಪ್ರಕಾಶವೂ ಕೂಡಲೇ ಚಿತ್ತವನ್ನು ಆಕರ್ಷಿಸುತ್ತದೆ.

ಶ್ರೀಮತಿ ಸರೋಜಿನಿದೇವಿಯವರ ಅಭಿಪ್ರಾಯ:

"ಮೊಡರ್ನ್ ಡಾಯಮಂಡ್ಸ್"ಗಳು ವೈಜ್ಞಾನಿಕ ಚಾತುರ್ಯದ ಬಹಳ ನಾಜೂಕಾದ ಮಾದರಿಗಳಾಗಿವೆ... ಇವುಗಳಲ್ಲಿ ಕಣ್ಣುಗಳನ್ನು ಸೆಳೆಯುವ ಪ್ರಕಾಶದ ಶುಭ್ರತೆಯಿದೆ. ಎಲ್ಲಿ ಹೆಂಗಸರು ವಜ್ರಗಳನ್ನು ಧಾರಾಳವಾಗಿ ಉಪಯೋಗಿಸುವರೋ ಮುಖ್ಯವಾಗಿ ಆ ದಕ್ಷಿಣದಲ್ಲಿ ಕಲಾ ವಿಜಯವಾದ "ಮೊಡರ್ನ್ ಡಾಯಮಂಡ್ಸ್"ಗಳು ವಿಸ್ತಾರವಾಗಿಯೂ, ಸುಲಭವಾಗಿಯೂ ಮಾರಿಹೋಗುವದೆಂದು ನಾನು ಸಂಬುತ್ತೇನೆ.

ನೀವು ಅಪೇಕ್ಷಿಸಿದಲ್ಲಿ ನಮ್ಮ ಸಚಿತ್ರ ಮಾಹಿತಿ ಪತ್ರವನ್ನೂ ಪ್ರಶಂಸಾ ಪತ್ರಗಳ ಪ್ರತಿಯನ್ನೂ ಅತ್ಯಾನಂದದಿಂದ ಕಳುಹಿಸಿಕೊಡುವೆವು.

C. C. Acharyulu & Son,

Jewellers for over a century,
63, Ponnappa Chetty Street,
Post Box No. 543, Park Town, Madras.

ಒರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ
ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು 1874. ಹೆಡ್ ಆಫೀಸು—ಬೊಂಬಯಿ.

1935ನೇ ಇಸವಿಯ ವರದಿಯ ಸಾರಾಂಶ.

ಹೊರಡಿಸಲಾದ ಹೊಸ ವಿಮಾಪತ್ರಗಳು	ರೂ.	8,89,89,149
ವಾರ್ಷಿಕ ಉತ್ಪನ್ನ	,,	3,49,16,412
ಜಾರಿಯಲ್ಲಿರುವ ವಿಮಾಪತ್ರಗಳು	,,	59,25,32,038
ಒಟ್ಟಿಗೆ ತೆತ್ತ 'ಕ್ಲೈಮು'ಗಳು	,,	17,43,21,855
ಫಂಡ್ ಹೆಚ್ಚಿದ ಮೊತ್ತ	,,	17,01,62,491

ಇಂಡಿಯದ ಪ್ರಾಮುಖ್ಯ ಜೀವವಿಮಾ ಕಾರ್ಯಾಲಯವಾದ

ಒರಿಯಂಟಲ್

ಸಂಸ್ಥೆಯ ಜನಪ್ರೀತಿಯನ್ನೂ, ಅದರ ದೃಢವಾದ ಸ್ಥಿತಿಯನ್ನೂ ಈ ಮೇಲಿನ ಅಂಕೆಸಂಖ್ಯೆಗಳು ಸ್ಪಷ್ಟೋಕ್ತಿಗಳಿಂದ ವಿಶದಗೊಳಿಸುತ್ತಿವೆ.

ಜನಪ್ರೀಯವಾಗಿ ಮತ್ತೂ ಅಭಿವೃದ್ಧಿ ಪಡೆಯುತ್ತಿರುವ

ಭಾರತೀಯ ಜೀವವಿಮಾ ಕಾರ್ಯಾಲಯದಲ್ಲಿ

ನಿಮ್ಮ ಜೀವನವನ್ನು ವಿಮೆ ಇಳಿಸಲು

ವಿಳಂಬ ಮಾಡಬೇಡಿ.

ಹೆಚ್ಚಿನ ವಿವರಕ್ಕೆ ಬರೆಯಿರಿ:—

ಶಾಖಾ ಕಾರ್ಯದರ್ಶಿಗಳು, ಒರಿಯಂಟಲ್ ಲ್ಯಾಫ್ ಆಫೀಸ್, ಒರಿಯಂಟಲ್ ಬಿಲ್ಡಿಂಗ್ಸ್, ಬೆಂಗಳೂರು ಇವರಿಗೆ

ಅಥವಾ ಕಂಪೆನಿಯ ಈ ಕೆಳಗಿನ ಯಾವುದಾದರೊಂದು ಕಾರ್ಯಾಲಯಕ್ಕೆ

ಆಗ್ರಾ	ಕೊಲೊಂಬೊ	ಲಾಹೋರ್	ಪೇಶಾವರ
ಅಜ್ಮೀರ್	ಡಾಕ್ಕಾ	ಲಕ್ನೋ	ಪೂನಾ
ಅಹಮ್ಮದಾಬಾದ್	ಢಿಲ್ಲಿ	ಮದ್ರಾಸ್	ರಾಯಿಪುರ
ಅಲ್ಲಹಾಬಾದ್	ಗೌಹತಿ	ಮ್ಯಾಂಡಲೇ	ರಾಜಶಾಹಿ
ಅಂಬಾಲ	ಗುಂಟೂರು	ಮಧುರಾ	ರಾಂಚಿ
ಅಮೃತಸರ	ಜಲಗಾಂ	ಮಡಿಕೇರಿ	ರಂಗೂನು
ಬಾರೇಲಿ	ಜಲಪೈಗುರಿ	ಮೊಂಬಾಸಾ	ರಾವಲ್ಪಿಂಡಿ
ಬಳ್ಳಾರಿ	ಜೋಧ್ಪುರ	ಮುಲ್ತಾನ್	ಸಿಂಗಾಪೂರ್
ಕಲ್ಕತ್ತಾ	ಜಬಲ್‌ಪೂರ್	ಮೈಸೂರು	ಸಕ್ಕೂರ್
ಕಲ್ಲಿಕೋಟೆ	ಕರಾಚಿ	ನಾಗ್ಪುರ	ತ್ರಿಚಿನಾಪಳ್ಳಿ
ಕೊಯಂಬತ್ತೂರು	ಕೌಲಾಲಂಪೂರ್	ಪಾಟ್ನಾ	ತ್ರಿವೆಂದ್ರಮ್
			ವಿಶಾಖಪಟ್ಟಣ,

ಡಿ. ಪಾಸ್ ಎಂಡ್ ಸನ್ಸ್, ಏಜಂಟ್ಸ್,
ಮಂಗಳೂರು, ದ. ಕ.



ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ



ಡಿ. ಗೋಪಾಲಾಚಾರ್ಲುರವರ
ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ ವಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು:—
ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—**ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,**
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶೋಕ್

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾತಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ದಿಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸ್ಟೇಟ್ ರಾಂಜೋಡ್‌ಲಾಲ್, ಕಟ್ಟೆಯ ಸಿಮೆಂಟ್ ಮತ್ತೂ ಇಂಡ ಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜೆ. ವಿ. ಪಾವ ಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರೆರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜೆ. ಎಸ್. ಮುರಾಠೇ, ಎಂ. ಏ., ಎ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ' ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವ ಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚುತಿರಬೇಕೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ಸಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,
9, Forbes Street, Fort, BOMBAY. Raikhad, AHMEDABAD.

ಅಥವಾ ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ವರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ

ದ್ರಾಕ್ಷಾಮೃತ

ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀಯಂತ್ರಗಳಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ಸಪ್ಪನವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ಸಪುಂಸಕತ್ವ ಇದ್ದರೆ ಅದು ಹೋಗಿ ಪುಸು ಯವ, ಸವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟುಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಪ್ರಮಾಣ:—ಸಸಿಕನಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ.
೧ ಡಜನ್ ಬಾ. ಬೆಲೆ ೧೩ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಷ್ಟ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು—ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ.
ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ—ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕು ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊಅರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

MODERN PRINTIN G AT MODERATE RATESI

CONSULT

The Saraswathi Printing Works, Limited,

CANTONMENT, MANGALORE.

ಕನ್ನಡ ಅಕ್ಷರ ಲಿಪಿ ಸುಧಾರಣೆ.

(ಗು. ಮು. ನಾಡಗೌಡ ಶಿವಣಗಿ.)

(ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಗೊತ್ತುಮಾಡಿದ ಅಕ್ಷರ ಸಂಸ್ಕರಣ ಸಮ್ಮೇಲನಕ್ಕೆ ಕಳಿಸಿದ ಲೇಖವು.)

ಕನ್ನಡ ಅಕ್ಷರಗಳಲ್ಲಿ ಸುಧಾರಣೆಯನ್ನು ಮಾಡಬೇಕೆಂದು ಕೆಲವು ಮಹನೀಯರು ಬಯಿಸಿ ತಮ್ಮ ವಿಚಾರಗಳನ್ನು ಸಾಹಿತ್ಯ ಪರಿಷತ್ತಿಗೆ ನಿವೇದಿಸಿರುವರು. ಸಾಹಿತ್ಯ ಪರಿಷತ್ತಿನವರಾದರೂ ಲಿಪಿ ಸುಧಾರಣೆಯ ಸಲುವಾಗಿ ಒಂದು ಸಮ್ಮೇಲನವನ್ನು ಏರ್ಪಡಿಸಿರುವರು. ಇದರಲ್ಲಿ ಕನ್ನಡಿಗರೆಲ್ಲರೂ ವಿಚಾರವಿನಿಮಯವನ್ನು ಮಾಡಿ ವಿಶಾಲ ಕರ್ನಾಟಕಕ್ಕೆ ಮಾನ್ಯವಾಗುವಂಥ ನಿರ್ಣಯವನ್ನು ಮಾಡುವದು ಅವಶ್ಯವಾಗಿದೆ. ಇದು ಬಹಳ ಬಿಗಿಯಾದ ಕೆಲಸವು. ಇದಕ್ಕೆ ಕನ್ನಡಿಗರೆಲ್ಲರ ಸಹಕಾರವು ಅವಶ್ಯವು.

ಕನ್ನಡ ಅಕ್ಷರಗಳ ಸುಧಾರಣೆಯನ್ನು ಮಾಡುವ ಕೆಲಸದಲ್ಲಿ ಪ್ರಾಮುಖ್ಯವಾಗಿ ಪ್ರಾಥಮಿಕ ಶಿಕ್ಷಕರು ಕನ್ನಡ ಮುದ್ರಣಾಲಯದವರು. ಕನ್ನಡ ಟಾಯಿಪರಾಯಿಟರರು ತಮಗಾಗುವ ಅನುಭವ ಆಪತ್ತುಗಳನ್ನು ಪರಸ್ಪರರಿಗೆ ತಿಳಿಸಿ ಸುಗಮವಾದ ಪದ್ಧತಿಯನ್ನು ನಿಷ್ಕರ್ಷಿಸಿ ಅದನ್ನು ಮಹಾಜನಗಳ ಮುಂದೆ ಇರಿಸಿ ಒಪ್ಪಿಗೆ ಪಡೆದುಕೊಂಡು, ಬಳಿಕೆಯಲ್ಲಿ ತರುವದಕ್ಕೆ ಪ್ರಯತ್ನಿಸುವರೆಂದು ನಂಬಿದ್ದೇನೆ.

ಮುದ್ರಣಾಲಯ, ಟಾಯಿಪರಾಯಿಟರ ಮತ್ತು ಪ್ರಾಥಮಿಕ ಶಿಕ್ಷಕ ಇವರೆಲ್ಲರಿಗೆ ತಮ್ಮ ತಮ್ಮ ಉದ್ಯೋಗಗಳಲ್ಲಿ ಯಾವ ಯಾವ ತೊಂದರೆಗಳು ಒದಗುವವು, ಅವುಗಳ ನಿವಾರಣೆಗಾಗಿ ಯಾವ ರೀತಿಯಿಂದ ಅಕ್ಷರಗಳಲ್ಲಿ ಮಾರ್ಪಾಡು ಮಾಡಬೇಕೆಂಬುನದನ್ನು ಈ ವರೆಗೆ ಸಂಘಟಿತ ರೀತಿಯಿಂದ ಪ್ರಯತ್ನಿಸಿದ್ದು ಕಂಡುಬರುವುದಿಲ್ಲ. ಆದರೂ ಮುದ್ರಣಾಲಯದವರು ಮಾತ್ರ ತಮಗಾಗುವ ತೊಂದರೆಗಳ ನಿವಾರಣೆಗಾಗಿ ಕೆಲವು ದಿವಸಗಳ ಹಿಂದೆ ಒಂದರ್ಧಲೇಖವನ್ನು ಪ್ರಕಟಿಸಿದಂತೆ ಸ್ಮರಣದಲ್ಲಿ ಅದೆ.

ಈ ಲೇಖನದಲ್ಲಿ, ಈಗಿನ ಅಕ್ಷರಗಳ ರಚನಾಕ್ರಮದಿಂದ ಪ್ರಾಥಮಿಕ ಶಿಕ್ಷಕರಿಗೆ ಯಾವ ಯಾವ ಅಡಚಣಿಗಳು ಬರುವವು, ಅವುಗಳ ನಿವಾರಣೆಯನ್ನು ಯಾವ ರೀತಿಯಿಂದ ಮಾಡಲಿಕ್ಕೆ ಶಕ್ಯವದೆ, ಎಂಬುದನ್ನಷ್ಟೇ ಚರ್ಚಿಸಲಾಗಿದೆ. ಯಾಕೆಂದರೆ ನಾನು ಶಿಕ್ಷಕನಿದ್ದು ನನಗೆ ಬಂದ ಅನುಭವಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಈ ಪದ್ಧತಿಯು ಮುದ್ರಣಾಲಯ ಮತ್ತು ಟಾಯಿಪರಾಯಿಟರರಿಗೆ ತಾರಕವೋ ಮಾರಕವೋ ನಾನರಿಯೆ. ಆ ಉದ್ಯೋಗಗಳಲ್ಲಿ ನನಗೆ ಅನುಭವವಿಲ್ಲ. ಅವರು ತಮ್ಮ ತಮ್ಮ ತೊಂದರೆಗಳನ್ನೂ ಪ್ರಕಟಿಸಿದಲ್ಲಿ, ಮತ್ತೆ ಈ ಪದ್ಧತಿಯಲ್ಲಿ ಕೆಲಮಟ್ಟಿಗೆ ತಿದ್ದುಪಡಿಯನ್ನು ಮಾಡಬಹುದು.

ಅಕ್ಷರಗಳ ತಿದ್ದುಪಡಿಯನ್ನು ಮಾಡುವಾಗ ಕೆಳಗಿನ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಾಗಿದೆ.

(೧) ಪೂರ್ವಪರಂಪರೆಯಲ್ಲಿ ಮಹದಂತರವು ಆಗದಂತೆ ನೋಡಿಕೊಳ್ಳಲಾಗಿದೆ.

(೨) ಅಕ್ಷರಗಳ ಸಂಖ್ಯೆಗಳು ಕಡಿಮೆಯಾಗುವಂತೆ ಆಲೋಚಿಸಿದೆ.

(೩) ಈಗ ಮಾರ್ಪಾಡು ಮಾಡಿದ ಹೊಸ ಅಕ್ಷರಗಳನ್ನು ನೋಡಿದ ಕೂಡಲೇ ಜ್ಞಾನವಾಗುವಂತೆ ಅವುಗಳ ರಚನಾಕ್ರಮವಿದೆ.

(೪) ಅಕ್ಷರಗಳ ಸೌಂದರ್ಯಕ್ಕೆ ಭಂಗಬಾರದಂತೆ ಎಚ್ಚರ ಪಟ್ಟಿದೆ.

ಮಕ್ಕಳಿಗೆ ಶಿಕ್ಷಣವನ್ನು ಕೊಡುವಾಗ ನಮಗೆ ಕೆಲವು ತೊಂದರೆಗಳು ಒದಗುವವು ಎಂಬುದನ್ನು ಲಕ್ಷ್ಯದಲ್ಲಿ ತಂದು ಕೆಳಗಿನಂತೆ ಅಕ್ಷರಗಳಲ್ಲಿ ತಿದ್ದುಪಡಿಯನ್ನು ಮಾಡಬೇಕೆಂದು ಪ್ರಯತ್ನಿಸಿದ್ದೇನೆ. ಯಾವ ಪ್ರಕಾರದ ತೊಂದರೆಗಳು ಬರುವವು, ಅವನ್ನು ಇದೇ ರೀತಿಯಿಂದ ಯಾಕೆ ದೂರ ಮಾಡಿಕೊಳ್ಳಬೇಕು ಇವೆಲ್ಲ ಪ್ರಶ್ನೆಗಳು ಶಿಕ್ಷಣಕ್ಕೆ ಸಂಬಂಧಿಸಿದವು. ಅವನ್ನೆಲ್ಲ ಚರ್ಚಿಸುತ್ತ ಹೋದರೆ ಲೇಖವು ವಿಸ್ತಾರವಾಗುವದೆಂದು ಆ ವಿಷಯದ ಚರ್ಚೆಯನ್ನು ಇಲ್ಲಿ ಮಾಡಿಲ್ಲ.

ಸ್ವರಗಳು:—ಇವುಗಳಲ್ಲಿ ಹ್ರಸ್ವ, ದೀರ್ಘವೆಂದು ಎರಡು ಪ್ರಕಾರಗಳುಂಟು. ಹ್ರಸ್ವಸ್ವರಗಳಲ್ಲಿ ಯಾವ ತಿದ್ದುಪಡಿಯೂ ಅವಶ್ಯವಿಲ್ಲ. ದೀರ್ಘಸ್ವರಗಳಲ್ಲಿ ಹೆಚ್ಚುಕಡಿಮೆಯನ್ನು ಮಾಡುವದು ಅವಶ್ಯವದೆ. ಹ್ರಸ್ವಸ್ವರದ ಮುಂದೆ ಒಂದು ದೀರ್ಘವನ್ನು ಬರೆದರೆ ಅದೇ ಜಾತಿಯ ದೀರ್ಘಸ್ವರವಾಗುವದು. ಹೀಗೆ ಮಕ್ಕಳಿಗೆ ಬೋಧಿಸಲಿಕ್ಕೆ ಒಳ್ಳೇ ಅನುಕೂಲವಾಗುವದು.

ಉದಾ:—ಅ ಇ ಉ ಋ ಎ ಒ ಹೀಗೆ ದೀರ್ಘಸ್ವರಗಳನ್ನು ಬರೆಯಬೇಕು. ಇನ್ನು ಉಳಿದ ದೀರ್ಘಸ್ವರಗಳಾದ ಐ. ಔ. ಗಳನ್ನು ಇದ್ದಂತೆ ಇಟ್ಟುಬಿಟ್ಟರೆ ಒಳಿತಾಗುವದು. ಇದರಿಂದ ಅ. ಈ ಊ. ಋೂ. ಏ. ಓ. ಈ ಆರು ಅಕ್ಷರಗಳನ್ನು ಕಲಿಸುವ ಅವಶ್ಯವಿಲ್ಲ. ಅಲ್ಲದೆ ಯಾವದೊಂದು ಅಕ್ಷರವನ್ನು ಎಳೆಸು ಅಂದಾಗ ದೀರ್ಘಕೊಡಬೇಕು, ಎಂಬುವದನ್ನೂ ಮಕ್ಕಳಿಗೆ ಒಮ್ಮೆ ಹೇಳಿಬಿಟ್ಟರೆ ಚೆನ್ನಾಗಿ ನೆನಪಿನಲ್ಲಿಡುವರು. ಇದರಿಂದ ಕಲಿಸಲಿಕ್ಕೆ ಸುಲಭವಾಗುವದು ಅದಕ್ಕಾಗಿ ಸ್ವರಗಳ ರಚನೆಯು ಕೆಳಗಿನಂತೆ ಇರಬೇಕು.

ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ

ವ್ಯಂಜನ:—ವ್ಯಂಜನಗಳಲ್ಲಿ ವರ್ಗೀಯ, ಅವರ್ಗೀಯ ಎಂದು ಎರಡು ಭೇದಗಳಿರುವವು. ವರ್ಗೀಯ ವ್ಯಂಜನಗಳಲ್ಲಿ ಅಲ್ಪಪ್ರಾಣ ಮಹಾಪ್ರಾಣ ಅನುನಾಸಿಕಗಳೆಂದು ಮೂರು ವರ್ಗಗಳಿರುವವು. ಅಲ್ಪಪ್ರಾಣದ ಕೆಳಗೆ ನಾವು ಒಂದು ನೆಟ್ಟಗಿನ ಗೆರೆಯನ್ನು ಎಳೆದರೆ ಕೆಲವು ಮಹಾಪ್ರಾಣವಾಗುವವು.

ಉದಾ:—ಪ ಫ ಬ ಭ ಡ ಢ ದ ಧ.

ಕೆಲವು ಮಹಾಪ್ರಾಣಗಳು ಅಲ್ಪಪ್ರಾಣದಿಂದ ಭಿನ್ನ ಇರುವವು.

ಉದಾ:—ಕ ಖ. ಗ ಘ. ಚ ಛ. ಜ ಝ. ಟ ಠ. ತ ಥ.

ಒಟ್ಟು ಹತ್ತು ಮಹಾಪ್ರಾಣಗಳು. ಅವುಗಳ ವಿವರವು ಕೆಳಗಿನಂತೆ ಅದೆ.

ಅಲ್ಪಪ್ರಾಣ:—ಕ ಗ ಚ ಜ ಟ ಡ ತ ದ ಪ ಬ

ಮಹಾಪ್ರಾಣ:—ಖ. ಘ. ಛ. ಝ. ಠ. ಢ ಥ ಧ ಫ ಭ

ಈ ಹತ್ತು ಮಹಾಪ್ರಾಣಗಳಲ್ಲಿ ಎಂಟು ಮಹಾಪ್ರಾಣಗಳಿಗೆ ಅವುಗಳ ಬುಡದಲ್ಲಿ ಒಂಥು ನೆಟ್ಟಗಿನ ಗೆರೆಯನ್ನು ಎಳೆದದೆ. ಖ ಡ ಈ ಎರಡು ಅಕ್ಷರಗಳಿಗೆ ಮಾತ್ರ ನೆಟ್ಟಗಿನ ಗೆರೆಯಿಲ್ಲ. ಈ ಹತ್ತು ಮಹಾಪ್ರಾಣಗಳಲ್ಲಿ ನಾಲ್ಕು ಅಲ್ಪಪ್ರಾಣಗಳನ್ನು ಬರೆದು ಅವುಗಳ ಕೆಳಗೆ ಒಂದೊಂದು ನೆಟ್ಟಗಿನ ಗೆರೆಗಳನ್ನು ತೆಗೆದರೆ ಮಹಾಪ್ರಾಣಗಳಾಗುವವು. ನಾಲ್ಕು ಭಿನ್ನ ಅಕ್ಷರಗಳ ಕೆಳಗೆ, ನೆಟ್ಟಗಿನ ಗೆರೆಯನ್ನು ತೆಗೆದದೆ. ಖ ಠ ಈ ಎರಡು ಮಹಾಪ್ರಾಣಗಳು ಅಲ್ಪಪ್ರಾಣದಿಂದ ಭಿನ್ನ ಇರುವವು. ಈ ಎಲ್ಲ ವರ್ಗೀಯ ವ್ಯಂಜನಗಳಲ್ಲಿಯ ಅಲ್ಪಪ್ರಾಣ ಮತ್ತು ಮಹಾಪ್ರಾಣಗಳಲ್ಲಿ ಒಂದು ತರದ ಸಮಾನತೆಯನ್ನುಂಟುಮಾಡಬೇಕಾದರೆ ಎಲ್ಲ ಅಲ್ಪಪ್ರಾಣದ ಕೆಳಗೆ ನೆಟ್ಟಗಿನ ಗೆರೆಯನ್ನು ತೆಗೆದು ಮಹಾಪ್ರಾಣಾಕ್ಷರಗಳು ನಿರ್ಮಾಣ ಮಾಡಿದರೆ ಒಂದು ಸಾಮಾನ್ಯ ನೇಯಮದಿಂದ ಅಕ್ಷರಗಳನ್ನು ಕಲಿಸಲಿಕ್ಕೆ ಅನುಕೂಲವಾಗುವದು.

ಉದಾ:—ಕ ಕ ಗ ಗ ಜ ಚ ಚ ಜ ಜ ಞ
ಟ ಟ ಡ ಡ ಣ ತ ತ ದ ದ ನ
ಪ ಫ ಬ ಭ ಮ

ಮಹಾಪ್ರಾಣಗಳಲ್ಲಿ ಹೀಗೆ ಸುಧಾರಣೆಯನ್ನು ಮಾಡಿದರೆ ಖ, ಘ, ಛ, ಝ, ಠ, ಢ, ಈ ಆರು ಮಹಾಪ್ರಾಣಾಕ್ಷರಗಳನ್ನು ಕಲಿಸುವ ತೊಂದರೆಯು ದೂರಾಗುವದು. ಒಂದು ಸಾಮಾನ್ಯ ನಿಯಮನವನ್ನು ತಿಳಿಸಿಯಾಗಲೀ ಅಥವಾ ಒಂದು ಸಾಮಾನ್ಯ ನಿಯಮವನ್ನು ಮಕ್ಕಳ ಬಾಯಿಯಿಂದ ಹೊರಡಿಸಿಯಾಗಲೀ ಕಲಿಸಲಿಕ್ಕೆ ಸುಲಭವಾಗುವದು.

ಮಹಾಪ್ರಾಣಗಳ ಕೆಳಗೆ ಒಂದು ನೆಟ್ಟಗಿನ ಗೆರೆಯನ್ನು ತೆಗೆಯಬೇಕಾದರೆ, ಆ ಅಕ್ಷರದ ಬುಡದಲ್ಲಿ, ಒಂದು ಗಂಟು ಇದ್ದರೆ ಅಕ್ಷರಗಳು ಸುಂದರವಾಗಿ ಕಾಣುವವು. ಹೀಗೆ ಮಾಡುವದರಿಂದ, ಕ ಗ ತ ಈ ಮೂರು ಅಕ್ಷರಗಳು ಸುಂದರವಾಗಿ ಕಾಣುವದಿಲ್ಲ ಆದರೂ ನಾವು ಸೌಲಭ್ಯದ ದೃಷ್ಟಿಯಿಂದ ಈ ಪದ್ಧತಿಯನ್ನು ಬಳಿಕೆಯಲ್ಲಿ ತರಬೇಕು. ಅನುನಾಸಿಕ ಮತ್ತು ಅವರ್ಗೀಯ ವ್ಯಂಜನಗಳಲ್ಲಿ ಹೆಚ್ಚುಕಡಿಮೆ ಮಾಡುವ ಅವಶ್ಯವಿಲ್ಲ.

ಗುಣಿತಾಕ್ಷರಗಳು:—ಕಳೆದ ೨೦—೨೫ ವರ್ಷಗಳಿಂದೀಚಿಗೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರಾಭ್ಯಾಸವನ್ನು ಹೊಸ ಪದ್ಧತಿಯಿಂದ ಕಲಿಸಲಿಕ್ಕೆ ಪ್ರಾರಂಭಿಸಿದೆ. ಮೊದಲು ಮೂಲಾಕ್ಷರಗಳನ್ನು ಕಲಿಸಿದ ಮೇಲೆ ಅವುಗಳಿಗೆ ಸ್ವರಚಿಹ್ನಗಳನ್ನು ಸೇರಿಸಿ ಕಲಿಸುವ ಪದ್ಧತಿಯು ಬಳಿಕೆಯಲ್ಲಿ ಬಂದಿದೆ ಈ ಪದ್ಧತಿಯು ಫಲಕಾರಿಯಾಗತೊಡಗಿದೆ. ಸ್ವರಾಕ್ಷರಗಳನ್ನು ಯಾವ ಪ್ರಕಾರ ತಿದ್ದುಪಡಿಯನ್ನು ಮಾಡಿರುವದೋ ಅದೇ ತತ್ವವನ್ನು ಅನುಸರಿಸಿ ಸ್ವರಗಳ ಗುರ್ತುಗಳನ್ನು ಕಲ್ಪಿಸಿ ಗುಣಿತಾಕ್ಷರಗಳನ್ನು ಬರೆಯಬೇಕು.

ಸ್ವರಚಿಹ್ನ:—ಅ ಇ ಈ ಉ ಊ ಎ ಏ ಐ ಒ ಓ ಔ
ಾ ಿ ೀ ು ೂ ೆ ೇ ೈ ೊ ೋ ೌ
ೃ ೂ ೋ

ಈ ಚಿಹ್ನಗಳನ್ನು ವ್ಯಂಜನಗಳಿಗೆ ಸೇರಿಸಿ ಗುಣಿತಾಕ್ಷರಗಳ ರಚನೆಯನ್ನು ಕೆಳಗೆ ಬರೆದಂತೆ ಕಲ್ಪಿಸಬೇಕು.

ಉದಾ:—ಕ ಕೇ ಕಿ ಕೀ ಕು ಕೂ ಕೆ ಕೇ ಕೈ ಕೊ ಕೋ ಕೌ

ಈ ಪದ್ಧತಿಯಿಂದ ಹ್ರಸ್ವದೀರ್ಘಾಕ್ಷರಗಳ ಕಲ್ಪನೆಯನ್ನು ಮಕ್ಕಳಿಗೆ ಬಹಳ ಸುಲಭರೀತಿಯಿಂದ ತಿಳಿಸಿಕೊಡಲಿಕ್ಕೆ ಬರುವದು ಹೀಗೆ ಗುಣಿತಾಕ್ಷರಗಳಲ್ಲಿ ಮಾರ್ಪಾಡು ಮಾಡುವದರಿಂದ ಎಷ್ಟೋ ಅಕ್ಷರಗಳನ್ನು ಕಡಿಮೆಮಾಡಿದಂತಾಗುವದು.

ಒತ್ತಕ್ಷರಗಳು:— ಪ್ರಚಲಿತ ಇರುವ ಒತ್ತಕ್ಷರಗಳಲ್ಲಿ ಮೂರು ವರ್ಗಗಳಿರುವವು.

(೧) ಅಕ್ಷರಗಳಂತೆ ಇರುವಂಥ ಒತ್ತುಗಳು.

(೨) ತಲೆಕಟ್ಟು ಇಲ್ಲದಂಥ ಒತ್ತುಗಳು.

(೩) ಭಿನ್ನವಾದ ಒತ್ತುಗಳು. ೧—೨ ನೇ ವರ್ಗದ ಒತ್ತುಗಳನ್ನು ಇದ್ದಂತೆ ಇಡಬೇಕು. ಮೂರನೇ ವರ್ಗದಲ್ಲಿ ತನಮಯರಲ ಈ ಆರು ಅಕ್ಷರಗಳ ಒತ್ತುಗಳು ಬರುವವು. ಇವುಗಳಲ್ಲಿ ಮೊದಲಿನ ಐದು ಅಕ್ಷರಗಳ ಒತ್ತುಗಳನ್ನು ತಲೆಕಟ್ಟು ತೆಗೆದು ಒತ್ತುಗಳನ್ನಾಗಿ ಉಪಯೋಗಿಸಬೇಕು. ಲಕಾರದ ಒತ್ತನ್ನು 'ಲ' ದಂತೆ ಉಪಯೋಗಿಸಬೇಕು. ಹೀಗೆ ಮಾಡುವದರಿಂದ ಎಲ್ಲ ಒತ್ತುಗಳನ್ನು ಸುಲಭವಾಗಿ ಕಲಿಸಲಿಕ್ಕೆ ಬರುವದು. ಹಾಗು ಒಂದು ಸಾಮಾನ್ಯ ನಿಯಮದಿಂದ ಬದ್ಧವಾಗುವವು. ಇದರಿಂದ ಅಕ್ಷರಗಳ ಸೌಂದರ್ಯಕ್ಕಾದರೂ ಕೊರತೆ ಬರುವುದಿಲ್ಲ.

ಅರ್ಕಾವಳಿ:—ಅರ್ಕಾವಳಿಯನ್ನು ಉಪಯೋಗಿಸುವ ಪದ್ಧತಿಯು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿದೆ. ಮೈಸೂರು ಸೀಮೆಯಲ್ಲಿ ಅರ್ಕಾವಳಿಯನ್ನು ಕಡಿಮೆ ಪ್ರಮಾಣದಿಂದ ಉಪಯೋಗಿಸುವರು. ಅರ್ಕಾವಳಿ ಇಲ್ಲದೆ ಕೆಲಸ ಸಾಗುವದು. ಅದನ್ನು ಕಲಿಸುವದಾದರೂ ತೊಂದರೆಯ ಕೆಲಸವು. ಆದ್ದರಿಂದ ಅರ್ಕಾವಳಿಯನ್ನು ತೆಗೆದುಹಾಕಬೇಕು. ಇದರಿಂದ ನಮಗೆ ಯಾವ ಪ್ರಕಾರದ ಹಾನಿಯೂ ಇಲ್ಲ. ಉದಾ:—ಮೂರ್ಗ, ಮೂರ್ಗ, ದರ್ಪಣ, ದರ್ಪಣ ಮುಂತಾದವು.

ಈ ಪ್ರಕಾರ ಅಕ್ಷರಗಳಲ್ಲಿ ತಿದ್ದುಪಡಿಯನ್ನುಂಟು ಮಾಡಿದರೆ ಅಕ್ಷರಗಳ ಸಂಖ್ಯೆಯು ಕಡಿಮೆಯಾಗುವದು. ಸೌಂದರ್ಯದಲ್ಲಿ ಕೊರತೆಯಾಗುವದಿಲ್ಲ. ಶಿಕ್ಷಣ ಕೆಲಸದಲ್ಲಿ ಸುಲಭವಾಗುವದು. ಆದ್ದರಿಂದ ಈ ಪ್ರಕಾರ ಅಕ್ಷರಗಳಲ್ಲಿ ತಿದ್ದುಪಡಿಯಾದೀತೆಂದು ನಂಬಿದ್ದೇನೆ.

ಕರ್ಣಾಟಕ ವೈಭವ-

ಪ್ರಕಟಣೆ.

ಉಡ್ಪಿ ತಾಲೂಕು ಆರೂರು ಗ್ರಾಮದಲ್ಲಿರುವ ಕಿನ್ನಿ ಅನಂತಯ್ಯ ಯಾನೆ ಸುಬ್ರಾಯರ ಮಗ ಕಿನ್ನಿ ಶ್ರೀನಿವಾಸರಾಯನು ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ:—

ಹಾಲೀ ಮದ್ರಾಸ್ ಟೌನ್ ಬ್ರಾಡ್ವೆಯಲ್ಲಿರುವ ಉಡ್ಪಿ ತಾಲೂಕು ಬಡಾನಿಡಿಯೂರು ಲಿಂಗು ಮಂಜುನಾಥಯ್ಯನವರ ಮಗ ಡಾಕ್ಟರ್ ಬಿ. ವೆಂಕಟ್ರಾಯರು, ಅವರ ಮಗ ವ. ಲಿಂಗು ಸುಬ್ಬಣ್ಣಯ್ಯನ ದತ್ತಿದ ಮಗ ಮೈನರ ಮಾಧವರಾಯನಗೋಸ್ಕರ ಗಾರ್ಡಿಯನಾಗಿ ತನ್ನ ಹೆಸರಲ್ಲಿ 'ದಿ ಆರೂರು ಬೇಂಕ್, ಉಡ್ಪಿ,' ಈ ಬೇಂಕಿನಲ್ಲಿ ತಾ. 16—9—1933ರಲ್ಲು ರೂ. 1551—14—0ನ್ನು ಫಿಕ್ಸೆಡ್ ಡಿಪೋಜಿಟ್ಟಾಗಿಟ್ಟು ಪಡೆದ ನಂಬ್ರ 1498/16—9—33ನೇ ರಶೀದಿ 1 ಮತ್ತು ತಾ. 25—1—1935ರಲ್ಲು ರೂಪ್ಯಾ 111-2-4 ನ್ನು ಫಿಕ್ಸೆಡ್ ಡಿಪೋಜಿಟ್ಟಾಗಿಟ್ಟು ಪಡೆದ ನಂಬ್ರ 1550/25—1—35ನೇ ರಶೀದಿ 1 ಕೂಡಾ 2 ರಶೀದಿಗಳನ್ನು ಅವುಗಳ ಬಾಬ್ತು ಅಂದರೆ 1498/16—9—33ನೇ ರಶೀದಿಯ ಬಾಬ್ತು ತಾ. 16—9—35ರ ವರೆಗಿನ ಒಂದು ವರ್ಷದ ಬಡ್ಡಿಯನ್ನೂ ಮತ್ತು ನಂ. 1550/25—1—35ನೇ ರಶೀದಿಯ ತಾರೀಕಿನಿಂದ ಒಂದು ವರ್ಷದ ಬಡ್ಡಿಯನ್ನೂ ಪಡೆದು ಶರಾ ಬರೆಯಿಸುವರೆ ನನಗೆ ಕಳುಹಿಸಿರುತ್ತಾರೆ. ಸದ್ರಿ 2 ರಶೀದಿಗಳ ಬಾಬ್ತು ಮೇಲ್ಕಾಣಿಸಿದಂತೆ ಬಡ್ಡಿಯನ್ನು ನಾನು ಪಡೆದು ಸದ್ರಿ 2 ರಶೀದಿಗಳಲ್ಲಿಯೂ ತಾರೀಕು 7—4—1936ರಲ್ಲು ಬೇಂಕಿನವರು ಶರಾ ಬರೆದಿರುತ್ತಾರೆ. ಈ ಪ್ರಕಾರ ಆಜ್ಞೆಯ ತಾ. 7—4—1936ರಲ್ಲು ಬರೆದ ಶರಾ ವಿನಹಾ ಅನಂತರ ಸದ್ರಿ 2 ರಶೀದಿಗಳಲ್ಲಿಯೂ ಬೇರೆ ಯಾವ ತರದ ಪಾವತಿ ಶರಾ, ಎಸ್ಸಾಯನ್‌ಮೆಂಟ್ ವಗೈರೆ ಏನೊಂದೂ ಬರೆದದ್ದಾಗಲೀ ಮಾಡಿದ್ದಾಗಲೀ ಇಲ್ಲ. ಅನಂತರ ಸದ್ರಿ 2 ರಶೀದಿಗಳನ್ನು ನಾನು ನನ್ನ ಅಂಗಿಜೇಬಿನಲ್ಲಿಟ್ಟುಕೊಂಡು ಮಂಗಳೂರು ಅತ್ತಕಡೆ ಪ್ರಯಾಣ ಮಾಡುವಾಗ್ಗೆ ಸದ್ರಿ 2 ರಶೀದಿಗಳೂ ನನ್ನ ಬೇರೆ ರಿಕಾರ್ಡಿನೊಂದಿಗೆ ಕಾಣೆಯಾಗಿರುತ್ತವೆ. ಆದುದರಿಂದ ಆ 2 ರಶೀದಿಗಳು ಯಾರಿಗಾದರೂ ಸಿಕ್ಕಿದ್ದರೆ ಅವುಗಳನ್ನು ನನ್ನ ಮೇಲಿನ ಎಡ್ರೆಸಿಗೆ ಕಳುಹಿಸಿಕೊಡಬೇಕು. ಈ ವಿನಹಾ ಸದ್ರಿ ರಶೀದಿಗಳು ಯಾರಿಗಾದರೂ ಸಿಕ್ಕಿ ಅವುಗಳ ಮೇಲಣ ಏನಾದರೂ ಸೃಷ್ಟಿನಿ ಪಾವತಿ, ಎಸ್ಸಾಯನ್‌ಮೆಂಟ್ ವಗೈರೆ ಮಾಡಿದರೆ ಅಂಥಾ ಪಾವತಿಗಳು—ಎಸ್ಸಾಯನ್‌ಮೆಂಟುಗಳು ಸದ್ರಿ ವೆಂಕಟ್ರಾಯರಿಗಾಗಲೀ ವ ಅವರ ಕಡೆಯಿಂದ ನನಗಾಗಲೀ ಸಹಾ ಬದ್ಧವಾಗತಕ್ಕವುಗಳಲ್ಲ. ಮತ್ತು ಅಂಥಾ ಪಾವತಿಗಳೂ ಎಸ್ಸಾಯನ್‌ಮೆಂಟುಗಳೂ ಶಿಂಧುವಲ್ಲ. ಆ ಎರ್ಡು ರಶೀದಿಗಳ ಬಾಬ್ತು ಅವುಗಳಲ್ಲಿ ಬರೆದ ತಾ. 7—4—1936ನೇ ಶರಾ ಪ್ರಕಾರ ಬಡ್ಡಿ ಮಾತ್ರ ನನಗೆ ಬಂದದ್ದು ವಿನಹಾ ಅನಂತರದ ಒಡಿವ ಅಸ್ಲು ಐವಜು ಪೂರಾ ಬೇಂಕಿನ ಲೆಕ್ಕ ಪ್ರಕಾರ ಬರತಕ್ಕದ್ದು ಬಾಕಿ ಇರುತ್ತದೆ. ಈ ಸಂಗತಿಯನ್ನು ಬೇಂಕಿನವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ನಾನು ಅಲಾಹಿದಾ ತಿಳಿಸಿರುತ್ತೇನೆ.

ಮೊಕ್ಕಾಂ:—ಆರೂರು,
ತಾ. 1-7-1936.

ಕಿನ್ನಿ ಶ್ರೀನಿವಾಸರಾವ್.

2, 3-7

ಹೊಸ ಪುಸ್ತಕ.

೧. **ನನ್ನ ಗೃಹಿಣಿ**:-(ಸೋಸಲ) ಪುಟ ೧೫೦; ಬೆಲೆ ೧೦ ಆಣೆ.
೨. **ಚೋದ್ಯಪುರದ ಚೋಜಿಗರಾಯ**:—(ಪೊಲಿಟಿಕಲ್) ಪುಟ ೪೩೨; ಬೆಲೆ ೨ ರೂ.
೩. **ಮೋಜಿನ ಜೀವನ**:—(ಡಿಟೆಕ್ಟಿವ್) ಪುಟ ೨೨೪; ಬೆಲೆ ೧—೪—೦ ರೂ.

ಇವುಗಳ ಹೊರತು ನಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೆದಾರಿ ನಾವೆಲ್ಲುಗಳೂ, ಚರಿತ್ರೆ, ನಾಟಕ, ಪಾರಮಾರ್ಥಿಕ ಪುಸ್ತಕಗಳೂ ದೊರೆಯುತ್ತಿವೆ.

ಶ್ರೀ ಶೇಷಾಚಲ ಪ್ರೆಸ್ಸು,
ಪೋಸ್ಟು ಆನಂದವನ, (ಜಿ. ಧಾರವಾಡ.)

ಸೂಚನೆ:- ಆರ್ಡರು ಕಳುಹಿಸುವವರು 'ಕಂಠೀರವ' ಪತ್ರಿಕೆಯ ಹೆಸರು ಬರೆಯಬೇಕು.

ತೊನ್ನಿಗೆ ಅದ್ಭುತ ಔಷಧಿ

(ರಿಜಿಸ್ಟರ್ಡ್)

ಗುಣ ದೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಠ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ ಮತ್ತು ಮೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜೆಕ್ಶನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಠ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:— **ನಾನು ನಮ್ಮ ಅತ್ಯಾಶ್ಚರ್ಯ ಕುಷ್ಠರೋಗ ನಿರ್ಮೂಲಿನಿ** ಯನ್ನು ಇಬ್ಬರು ಕುಷ್ಠರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧ ಇಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಠ ರೋಗದ ಪೊಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಬೇಕು.
ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರಿ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಪೇರ್, ಆರ್. ಎಸ್. ಪೋಸ್ಟ್.

ಬಿಳೇ ತೊನ್ನು—

ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮಂದಿ ಪಡೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidiya Raj Akhila Kishori Ram,
No. 223, P. O., Katri Sarai. (GAYA).

8, 11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಆರ್. ಮಾರ್ಟಿನ್ಸ್‌ರ

ಆಸ್ತಮೊಡಾಯನ್

ಈ ಪಮ್ಮು ಔಷಧವು ಬಹಳ ಕಾಲದಿಂದ ಉಬ್ಬಸವಿದ ಮತ್ತು ಆತಿ ಭಯಂಕರವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ಎಕೆನೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶ ಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಕಟ್ಟಿ ಮಾಡುತ್ತದೆ. ಈ ಔಷಧದ ಪೂರ್ಣ ಗುಣಾಪೇಕ್ಷೆಯಾದರೆ ಒಂದೇ ಬಾಟ್ಲಿ ಮುಸ್ಸು ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ತೆಗೆದುಕೊಂಡವರಿಗೆ ಮೇಲೆ ವಿವರಿಸಿದ ಕಾಯಿಲೆಗಳು ಪುನಃ ಹಿಡಿಸುವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0 12 ಬಾಟ್ಲಿಗಳಿಗೆ ಕ್ರಯ ರೂ. 13—8—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೇಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.

Head Office: **MADRAS.** { ESTABLISHED: 1906. } Branch for Karnatak: **UDIPI,**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.

A policy in United India will give you the maximum benefits.

For particulars apply to:—

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

THE TRAVANCORE NATIONAL BANK, LIMITED.

Head Office: ALLEPPEY.
London Agents: MIDLAND BANK LTD.

Bombay Office:—25-27, Church Gate Street, Fort, BOMBAY. MADRAS OFFICES: (1) 164, Broadway, (2) 183, Mount Road, (3) Luz-Corner, Mylapore & (4) Vepery (No. 1, Purasawalkam High Road).

BRANCHES EVERYWHERE IN SOUTH INDIA.

We have pleasure to announce that this Bank is now in a position to handle business on the following centres also:—

AGRA	CALCUTTA	HYDERABAD (Deccan)	LUCKNOW
AHMEDABAD	CAWNPORE	HYDERABAD (Sind)	RAICHUR
AMINABAD (Lucknow)	DACCA	JAMNAGAR	RANGOON
AMRITSAR	DELHI	KARACHI	SAMBHAR LAKE
AURANGABAD	GORAKHPORE	LAHORE	SECUNDERABAD

SURAT and other centres in Northern India.

ENQUIRIES SOLICITED.

Alleppey, 10th January 1936. **K. C. Eapen, B. A.,** Managing Director.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. **ಕೋಲನ್ ವಾಟರ್** (ರಿ. ನಂ. ೧೪೭೭) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯೌಷಧ.

೨. **ಮುಸ್ಕ್ ಲವೆಂಡರ್**—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾಪ ಸೆಂಟು.

೩. **ಅನಂಸ್ಟ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ಯಿಲಿಯಂಟಾಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. **ದ್ರಾಕ್ಷಾಸವ**—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ್ಮು, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮುವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಆರಾಮೇತಿಹಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಪೈನ್-ಹಂಟರ್**—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳ ಗೋಸ್ಕರ ಕುಡಿಯತಕ್ಕ ಔಷಧ.

೯. **ರತ್ನಾಂಜನ ಪೇನ್ ಬಾವ್**—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. **ಕ್ರೀಸೋರಿಂಗಾ**—ಕಪ್ಪು ಆಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. **ಹಿಟ್ಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—

K. R. GURU, *Managing Director.*

ಮಿಠಿ-ಮಿಠಿ-ಮಿಠಾಯಿ

(ಮಳೆಗಾಲದ ಸಾಹಿತ್ಯ)

ಬಹು ದಿನಗಳಿಂದಲೂ—ನಮ್ಮಪ್ಪ ಮಳೆಗಾಲದಲ್ಲಿ ತುಪ್ಪ ತಿಂದು ಜಡರು ಹತ್ತಿ ಸತ್ತಾಗಿನಿಂದಲೂ—ನನಗೊಂದು ಆಸೆ. ಏನೂ ಅಂತ. ಬಟ್ಟೇಪಾಡಿಗೇನಾದರೂ, ಕ್ರಾಪ್, ವೆಸ್ಲಿನ್ ಖರ್ಚಿಗಾದರೂ, ಒಂದು ಕಸಬು ಮಾಡಬೇಕೂ ಅಂತ. ಸರಿ; ಹುಡುಗಾಟ; ಏನೇನೋ ಮಾಡಿದೆ. ಕಟ್ಟಿಗೆ ಯಾಪಾರ ಮಾಡಿದೆ; ಕಾಫಿ ಹೊಟೆಲ್ ಇಟ್ಟೆ; ಯಾವುದರಲ್ಲೂ ಗಿಟ್ಟಲಿಲ್ಲಾ. ಎಲ್ಲಾ 'ಲೋಸ್.' ಅಪ್ಪ ಮಾಡಿಟ್ಟದ್ದೆಲ್ಲಾ ಕರಗಿತು. ಮೇಲಾಗಿ, ನನ್ನ ಕರದು, ವರದಕ್ಷಿಣೆ ಕೊಟ್ಟು, ವಿಧವೆಯಾದ ಹೆಣ್ಣು ಕೊಡೋ ಮುತ್ಸಾಳರೂ ಊರಲ್ಲಿ ಯಾರೂ ಸಿಕ್ಲಿಲ್ಲಾ. ಅಂತೂ ಕಸುಬೆಲ್ಲಾ ಉಸುಬಿನ ಮನೆಯಾಯ್ತು. ಉಪವಾಸಕ್ಕೆ ಯಾರ್ಯಾರಿಗೆ ದಿನಾ ಬಂತು. ಏನು ಘೂಡೋಣ, ಹೇಳ್ರಿ!

ಹಾಗೇ ಒಂದು ದಿನ, ಒಂದು ಯೋಚನೆ ಬಂತು. ಒಂದು 'ಇನ್‌ಸ್ಪಿರೇಶನ್'; ಜತೇಲಿ 'ಪರ್‌ಸ್ಪಿರೇಶನ್' ಬೇರೆ. ಇರಲಿನ್ನಿ. ಮನುಷ್ಯನಿಗೆ ಒಳ್ಳೇದಾಗೋ ಕಾಲಕ್ಕೆ, ಅವೆರಡೂ, ರಾಹು-ಕೇತುಗಳಂತೆ ಒಟ್ಟಿಗೆ ಬರ್ತಾವೆ ಎಂತ, ನಮ್ಮ ಗಿಡ್ಡ ಮೇಸ್ಟ್ರು, ಪರೀಕ್ಷೇ ದಿನ ಹೇಳ್ತಾ ಇದ್ದರು. ಅದನ್ನೇ ನಂಬಿಕೊಂಡು ನನಗೂ ಏನೋ ಒಳ್ಳೆದಾಗಿ ಹೋಗೋ ಕಾಲ ಅಂದ್ಕೊಂಡೆ. ಯೋಚನೆ ಮುಂದೆ ಸಾಗಿತು. ರೈಲ್ ಬಿಟ್ಟ ಹಾಗೆ.

ಯೋಚನೆ ಅಂದ್ರೆ, ನಿಮಗೆ ಹೇಳದೆ ಇರುವಂತಾದ್ದೇನೂ ಅಲ್ಲಾ ಅನ್ನಿ. ಅದೂ ಕಸುಬಿನ ಯೋಚನೆಯೇ. ಎಲ್ಲಾ ಕಸ್ಬೂ ಆಯ್ತು. ಸರಿ; ಇನ್ನೊಂದು ಪೇಪರು ಮಾಡೋಣಾ ಅಂತ. ಊರಿಗೊಂದು ಪತ್ರಿಕೆ, ಕೇರಿಗೊಂದು ಪತ್ರಿಕೆ, ಜಾತಿಗೊಂದು ಪತ್ರಿಕೆ, ಪ್ರೆಸ್ಸಿಗೊಂದು ಪತ್ರಿಕೆ ಹೀಗೆ ನೂರಾರು ಪತ್ರಿಕೆ ನಡೆಯುತ್ತೆ. ಅದೇನು ಲಾಭವಿಲ್ಲದೆ ನಡೆಯುತ್ತೆಯೇ? ಕೈಯಿಂದ ಹಾಕ್ತಾರೆಯೇ? ಅಂದ ಮ್ಯಾಲೆ, ನಾನೂ ಒಂದು ಪತ್ರಿಕೆ ಏತಕ್ಕೆ ನಡಿಸಬಾರದ್ರಿ? ಕೊನೇ ಪಕ್ಷ ಆ ಪತ್ರಿಕೆಗಳಿಗೆ circulation ಬೇಕಾದಷ್ಟು ಇದ್ದರೆ, ನನಗೆ blood circulation ಆದ್ರೂ ಚೆನ್ನಾಗಿ ಇರಲಾರದೇ?

ಆದ್ರೆ ಎಲ್ಲಾರೂ ಮಾಡಿದ ಹಾಂಗೇ ನನ್ನ ಪತ್ರಿಕೆ ಹೊರಟರೆ ಉಪಯೋಗವಿಲ್ಲ. ನನ್ನ ಪತ್ರಿಕೆ ರೀತಿ, ನೀತಿ, ಭೀತಿ, ಖ್ಯಾತಿ ಎಲ್ಲಾ ಬ್ಯಾರೇ ಆಗಿರಬೇಕರಿ. ಯೆಲ್ಲಾರ ಪತ್ರಿಕೆ ಬದ್ಕೋದಕ್ಕೆ ಹುಟ್ಟುತಾವೆ. ನನ್ನ ಪತ್ರಿಕೆಗೆ ಆ ಆಶೇನೇ ಇಲ್ಲ. ನನ್ನ ಪತ್ರಿಕೆ ಹುಟ್ಟೋದೇ ಸಾಯೋಕೆ. ಅದು ಹುಟ್ಟಿ ಸತ್ತರೂ ಸರಿ; ಸತ್ತು ಹುಟ್ಟಿದರೂ ಸರಿ; ಹುಟ್ಟುವಾಗಲೇ ಸತ್ತಿದ್ದರೂ ಸರಿ; ಸಾಯುವಾಗಲೇ ಹುಟ್ಟಿದ್ದರೂ ಸರಿ. ಅಂತೂ ಹುಟ್ಟುಸಾವುಗಳ ಮುಲಾಜು ನನಗಿಲ್ಲ; ನನ್ನ ಪತ್ರಿಕೆಗೂ ಇಲ್ಲ. ಮಿಸ್ಟರ್ ಕೃಷ್ಣನೇ ಹೇಳಿದ್ದಾನೆ ಗೀತೇಲಿ—'ಪುನರಪಿ ಜನನಂ, ಪುನರಪಿ ಮರಣಂ' ಅದ್ರಿಂದ ನನ್ನ ಪತ್ರಿಕೆಗೆ ಸ್ಮಶಾನಭೂಮಿಯಲ್ಲೇ ಬಾಣಂತಿಗೃಹ! ಇರಲಿ.

ನೋಡಿ. ಈ ನನ್ನ ಪತ್ರಿಕೆಗೆ ಒಂದು ಹೆಸರಿಡಬೇಕಾದರೆ, ಎಷ್ಟು ಕಷ್ಟವಾಯಿತು, ಅಂತೀರಾ! ಕಂಸನ ತಮ್ಮ ಕುಂಭಕರ್ಣನಾದರೂ, ತನ್ನ ಅಶ್ವಮೇಧ ಯಾಗ ಮಾಡಲು ಅಷ್ಟು ಕಷ್ಟವಾಗಿರಲಿಕ್ಕಿಲ್ಲ! ನನಗೆ ಅಷ್ಟು ಕಷ್ಟವಾಯಿತು! ನನಗೆ ಸರಿಯಾದ ಹೆಸರು ಸಿಕ್ಕದೆ, ದೊಡ್ಡ ಪರೀಕ್ಷೆ ಪ್ಯಾಸು ಮಾಡಿದ ಒಬ್ಬ ಕೂಷ್ಮಾಂಡ ಮರ್ಕಟ ಪಂಡಿತರಲ್ಲಿಗೆ ಹೋದೆ. ಕೇಳಿದೆ. 'ಚರಿತ್ರೆ' ಎಂತ ಇಡು, 'ಭೂಗೋಳಾ' ಎಂತ ಇಡು ಅಂದರು. ಅದು ಬ್ಯಾಡ; ಹುಡುಗರ ಪುಸ್ತಕದ ಹೆಸರು ಯಾಕೆ ಅಂದೆ. ಆ ಮೇಲೆ, ಇನ್ನೂ ಕೆಲವು ಹೆಸರು ಹೇಳಿದರು. 'ಲಂಬೋದರ' 'ಕುಕ್ಕುಟಾಸುರ' 'ಅವಿವೇಕ ದರ್ಪಣ' 'ಮಹಾ ಮಾರೀಚ' 'ಶೂರ್ಪನಖ ಸುಂದರೀ' 'ದೋಸೆ ಹಲ್ವಾ' 'ಲಾಡೂ ಸಾಂಬಾರು' 'ಚಂಬು ಚೆರಿಗೆ'—ಯಾವುದೂ ಸರಿಬೀಳಲಿಲ್ಲ. ಕೊನೆಗೆ ನಾನೇ ೧೮ ರಾತ್ರಿ ೧೮ ಹಗಲು ಮೌನವ್ರತವಾಚರಿಸಿ, ಸ್ವಪ್ನದಲ್ಲಿ ಮಹಾಂಕಾಳಿ ಪ್ರತ್ಯಕ್ಷವಾಗಿ ಪ್ರಸಾದರೂಪವಾಗಿ ಕೊಟ್ಟ ಆ 'ವಿಚಿತ್ರ-ಚಿತ್ರ-ಪತ್ರಾವಳಿ' ಎಂಬ ಹೆಸರಿಟ್ಟೆ.

ಇನ್ನು ನಮ್ಮ ಪೇಪರಿಗೆ ಪುಟ ಸಂಖ್ಯೆ ಇಷ್ಟು ಅಂತ ನಿಷ್ಕರ್ಷೆ ಇಟ್ಟಿಲ್ಲ. ಊಟ ಮಾಡಿ ಬಿಸಾಡಿದ ಪತ್ರಾವಳಿ ಎಲೆ ಸಿಕ್ಕಷ್ಟು; ಅವನ್ನು ಅಚ್ಚು ಹಾಕಿ ಬಿಸಾಡುವುದೇ. ಅಚ್ಚಿನ ಶಾಯಿಗೆ ಬಣ್ಣವಿಲ್ಲ. ಅಕ್ಷರಗಳು ಕಣ್ಣಿಗೆ ಕಾಣವು. ದುರ್ಬಿನಿಟ್ಟೇ ಓದಬೇಕು. ಹೊರಡುವ ದಿನ ಗೊತ್ತಿಲ್ಲ. ಅಮಾವಾಸ್ಯೆಯಂದು ಮುಹೂರ್ತ. ಅದು ತಪ್ಪಿದರೆ, ಮತ್ತೆ ಪೇವರು ಮರುವರ್ಷ ಗ್ರಹಣದ ಅಮಾವಾಸ್ಯೆ ಅರ್ಧರಾತ್ರಿ. ಈ ಪತ್ರಾವಳಿಗಳು ಅಚ್ಚಾದ ಕೂಡಲೇ, ಆಕಾಶಮಾರ್ಗವಾಗಿ ಸಮುದ್ರದೊಳಗಿಂದ ಹಾರಿ ಬಂದು, ವಾಚಕರ ಬಚ್ಚಲ ಮನೆಯ ಮೋರಿಯಲ್ಲಿ ಬೀಳುವುವು. ಚಂದಾ ಹಣಕ್ಕೆ ನಮ್ಮಲ್ಲಿ ಪೀ. ಪೀ. ಸಿಸ್ಟಂ ಇಲ್ಲ; ವಸೂಲಿಗೆ ಆಳೂ ಇಲ್ಲ; ದೇವರ ಕಾಣಿಕೆಯ ಡಬ್ಬಿಯಿಂದ ಕದ್ದು, ಕಾಫಿ ಹೋಟಲಿಗೆ ಹಾಕಿದರೆ, ಸಿನೆಮಾ ನೋಡಿದರೆ, ನಮಗೆ ಚೆಂದಾ ಚೆಂದಾಗಿ ಬಂದ ಹಾಗೆ. ಅಷ್ಟೇ.

ನಮ್ಮ ಪತ್ರಿಕೆಯ ಭಾಷೆ ಒಂದಲ್ಲ; ಇಂಗ್ಲೀಷ್, ಹಿಂದುಸ್ಥಾನಿ, ಕೊಂಕಣಿ, ತುಳು, ಕನ್ನಡ, ತಮಿಳು, ಮಲೆಯಾಳ—ಇತ್ಯಾದಿ ಸಮಯಕ್ಕೆ ಯಾವ ಶಬ್ದ ಸಿಕ್ಕಿತೋ, ಆ ಶಬ್ದದಿಂದ ವಾಕ್ಯ ಪೂರ್ಣವಾಗಿ, ಪತ್ರಿಕೆ ತುಂಬುತ್ತದೆ. ವ್ಯಾಕರಣದ ಭಯವಿಲ್ಲ. ನೋಕರ್ಣದ ದರ್ಶನವಾದರೆ ಸಾಕು. ಒಟ್ಟಿನಲ್ಲಿ 'ಚತುರ್ದಶ ಭುವನಂಗಳಿಗೂ' ತಿಳಿಯದ ಶೈಲಿ ನಮ್ಮದು; ಡಿಕ್ಷನರಿಗಳ ಹೊರಿಗಳಿದ್ದರೂ ತಿಳಿಯಲಾರದ ಸರಳ ಭಾಷೆ ನಮ್ಮದು.

ಜಾಹೀರಾತು—ಎಲ್ಲವನ್ನೂ ಸ್ವೀಕರಿಸಲಾಗುವುದಿಲ್ಲ. ಗುಣವಾಗುವ ಔಷಧಗಳು ಈ ಪತ್ರಿಕೆಗೆ ಅಗತ್ಯವಿಲ್ಲ. ಭವಿಷ್ಯ ನಿಜವಾಗುವ ಜೋಯಿಸರ ಪ್ರಕಟಣೆ ನಮಗೆ ಬೇಕಿಲ್ಲ. ಸನ್ನಿಪಾತಕ್ಕೆ ವಾತಕಷಾಯವನ್ನು ಕೊಡುವ ವೈದ್ಯರು, ಸಕ್ಕರೆನೀರಿನಿಂದ ಚನನ ಪ್ರಾಶ ತೈಲವನ್ನು ಮಾಡಬಲ್ಲ ಪಂಡಿತರು, ದಿವಾಳಿಯಾಗಲು ತಯಾರಾದ ಬೇಂಕುಗಳು, ಸತ್ತವರನ್ನು ಇನ್ಶೂರ್ ಮಾಡುವ ವಿಮಾಸಂಸ್ಥೆಗಳು, ನೀರು ಹೊರಗೆ ಹೋಗದ ಕೊಡೆಗಳು, ನಡೆಯದ ಅಲಾರಂ ಟೈಂಪೀಸುಗಳು, ನುಸಿಗಳು ಚೆನ್ನಾಗಿ ಕಚ್ಚುವ ಫರದೆಗಳು,—ಇತ್ಯಾದಿಗಳನ್ನು ಪುಕ್ಕಟೆಯಾಗಿ ಸ್ವೀಕರಿಸಲಾಗುವುವು.

ಬಾತ್ಮೀದಾರರು ಈ ಪೇವರಿಗೆ ಸುರ, ನರ, ಕಿನ್ನರ, ಕಿಂಪುರುಷ, ವಾನರ, ಜಾಂಬವಂತರಲ್ಲಿ ಯಾರೂ ಆಗಬಹುದು. ಆದ್ರೆ, ಅವರು ತಮ್ಮ ನಿಜವಾದ ಹೆಸರನ್ನು ಕೊಡದೆ, ಕಳ್ಳ ಹೆಸರನ್ನು ಕೊಡತಕ್ಕದ್ದು ವಿಧಾಯಕ. ಅವುಗಳಲ್ಲಿ ಕೆಲವು ಹೀಗಿರಬಹುದು—'ಬಕಮಾರಿ' 'ಹೊಟ್ಟೆಬಾಕ' 'ಮಂಡೇಮಾರಿ' 'ಕೂಳುಪಾಂಡಿ' 'ಬದ್ಮಾಷಿ'; 'ಬೀರ್ ಬಹದೂರ್' ವ, ತಿ. ಸಾ. (ತಿಂದು ಸಾಯುವವ) ಫಸ್ಟ್ ಕ್ಲಾಸ್ ರೋಗ್ (ಒಳ್ಳೇ ಸಂಪನ್ನ) 'ಸಾಡೇಸಾತ್', ಎಸ್. ಒ. ಎಸ್. ಏ.(ಸನ್ ಒಫ್ ಸ್ಟುಪಿಡ್ ಏಸ್) ಸೆಕೆಂಡ್ ಹ್ಯಾಂಡ್ ಹಸ್ಬೆಂಡ್=ಹೆಂಡತಿ ಬಿಟ್ಟವನ, ಧ. ಸಿ. ಚೆ. ಬಾ. ಒ.=ಧರ್ಮಕ್ಕೆ ಸಿಕ್ಕಿದರೆ ಚೆನ್ನಾಗಿ ಬಾಟ್ಲಿ ಒಡೆಯುವವ, ಎಸ್. ಬಿ. ಪಿ. ಬಿ. ತಿ.=ಸೇಟರ ಬೆನ್ನಿಗೆ ಪಂಥೇರು ಬೆಣ್ಣೆ ತಿಕ್ಕುವವ, ಅಪಷ್ಟೋತ್ರ,—ವಗೈರೆ. ಬಾತ್ಮಿ ಸಂಪೂರ್ಣ ಇಂಗ್ಲೀಷಿನಲ್ಲಿ, ಯಾರಿಗೂ ತಿಳಿಯದ, ಯಾಕೆ? ಬರೆದವರಿಗೇ ಅರ್ಥವಾಗದ, ನೊಣ ಹಿಡಿದು ತಿನ್ನುವ ಭಂಡುಬೈಗಳ ಶೈಲಿಯಲ್ಲಿ ಬರೆದು ಕಳುಹಿಸುವುದು ಪ್ರಿಫರ್ಡ್. ಅಂಥಾ ದಿವ್ಯ ಲೇಖನಗಳನ್ನು ಅಗತ್ಯವಾಗಿ ಸಂತೋಷದಿಂದ ಸ್ವಾಹಾಕರಿಸಿ ಮತ್ತೂ ಕೂಡಾ ಸ್ವಾಗತ+ಈ+ಕರಿಸಿ, ನಮ್ಮ ಪೇಪರಿನ ನೊಗಕ್ಕೆ ಸೇರಿಸಿ, ಛಾಪೆಗೆ ಕಳುಹಿಸಲ್ಪಡುತ್ತೇವೆ. ನಮ್ಮ ಪೇಪರು ಹುಟ್ಟುವಂಥದ್ದೇ, mean tactics, Treachery, Back-biting ವಗೈರೆಗಳನ್ನು ಪ್ರೋತ್ಸಾಹಿಸುವ ಬಾತ್ಮಿಗಳನ್ನು ಪ್ರಕಟಿಸಿ, ಲೋಕೋದ್ಧಾರ, ಸಮಾಜೋಧ್ಧಾರ, ಥಿಯಾಸಫಿಯ ಗದಾಧರ, ಲೆಡ್ ಬೀಟರಿನ ತತ್ವ ಪ್ರಚಾರಗಳನ್ನು ನಡೆಸಲಿಕ್ಕಾಗಿಲ್ಲಪಡುತ್ತದೆ. ಇದಕ್ಕೆ ಕೆಲವು 'ಸ್ಯಾಂಪಲ್ ಬಾತ್ಮಿ'ಗಳನ್ನು ಮುಂದಿನಿಂದಲೂ, ಹಿಂದಿನಿಂದಲೂ ಕೊಡಲಾಗುತ್ತದೆ. ಅದು ಮೇಲ್ಪಂಕ್ತಿ ಎಂದು ತಿಳಿದಿರತಕ್ಕದ್ದು.

ಮಧ್ಯದಲ್ಲಿ ಹೇಳಲು ಮರೆತ ಸಂಗತಿಗಳನ್ನು ನೆನಪಾದ ಹಾಗೆ, ಮುಂದಿನ ಸಂಚಿಕೆಯಲ್ಲಿ ತಿಳಿಸಲ್ಪಡುವರು.

'ತ್ರಿಶಂಕುಸ್ವರ್ಗನಿವಾಸಿ.'

ಗೋವಿಂದರಾಜಮೂರ್ತಿ.

[ಸಮುದ್ರಮುಖನ ರಾಧಾವಿಲಾಸ ಬಿಲ್ಲಹಬ್ಬ ಮೊದಲಾದ ಯಕ್ಷಗಾನ ಕಾವ್ಯಗಳನ್ನೂ ಅನೇಕಾನೇಕ ಭಕ್ತಿರಸಪೂರಿತವಾದ ತುಂಡು ಪದ್ಯಗಳನ್ನೂ ನೂರಾರು ವರ್ಷಗಳ ಹಿಂದೆ ರಚಿಸಿ ಮೆರೆದ ಮೂಲ್ಕೀ ನಿವಾಸಿ ಮಧುರಕವಿ ವಾಸುದೇವ ಪ್ರಭುಗಳ ಸಣ್ಣ ಕೃತಿಯಿದೊಂದು. ತಿರುಪತಿ ಹೆಬ್ಬೆಟ್ಟದ ಬುಡದ ದೇವಳದಲ್ಲಿ ಒಡನೀಳ ಒರಗಿ ರಂಜಿಸುವ ಗೋವಿಂದರಾಜಮೂರ್ತಿಯ ಕುರಿತಾಗಿದೆ. ಭಾವನಾಧ್ವನಿಗಳು ಅಗಾಧವಾಗಿವೆ. M. NARASING RAO.]

(ಧಾಟಿ—ಅರು ಹಿತವರು ನಿನಗೆ ಮೂರು ಮುಂದಿಗಳೊಳಗೆ.)

ಏಕೆ ನೀನಿಲ್ಲಿ ಪವಡಿಸಿದೆ ಜಗದೀಶಾ ।
ಶ್ರೀಕಾಂತ ಗೋವಿಂದರಾಜಪಟ್ಟಣದೊಳಗೆ ॥ ಪಲ್ಲ ॥

ಧಣಿ:—ಯಾರದು ಕರೀತಾ ಇರೋದು?
ಟೈಪಿಸ್ಟ್ ಗರ್ಲ್:—ಮಿಲ್ ಮಾಲೀಕರು.
ಧಣಿ:—ಏನಂತೆ?
.....ಆ ಮುದಿಗೂಬೆ ಇದೆಯೇ ಎಂತ ಕೇಳ್ತಾರೆ!

ಚೆಲುವ ಕ್ಷೀರಾರ್ಣವದೊಳಲೆಗಳಲದಾಡಿ ಘಳು- ।
ಘಳಿಸಿ ಭೋರ್ಗರೆವ ಘೋಷವನು ಕೇಳ್ದೂ ॥
ಬಲು ಕರ್ಕಶಧ್ವಾನವಳಲಿಸಲಿದೇಕಾಂತ- ।
ನಿಳಯವಿಹುದೆಂದು ಬಂದಿಲ್ಲಿ ಮಲಗಿದೆಯಾ ॥ ೧ ॥
ನರಕಾಸುರನ ತರುಣನುರವಣಿಸಿ ಧುರದೊಳಗೆ ।
ನರಗೆ ಗುರಿಯಿಡೆ ದ್ಹಾಡೆಯ ವರಾಹನಾ ॥
ಭರದೊಳೆದೆಯೊಡ್ಡುತಲಿ ಫಲುಗುಣನನುಳುಹಿ ನಿ- ।
ನ್ನುರಕೆ ನೋವೆಂದು ನೀನೊರಗಿ ಮಲಗಿದೆಯಾ ॥ ೨ ॥
ಅನುಗಾಲ ಬಲಿಯ ಬಾಗಿಲ ಕಾದು ಕಾದುದಕ- ।
ವನು ಕೊಟ್ಟ ಪಡಿ ಸಾಲದೆನುತ ಕನಲೀ ॥
ತನಗರ್ಜುನನು ಸಾರಥ್ಯಕ್ಕೆಗಿತ್ತ ಸಂಬಳವ- ।
ದಿನಿತಲಾ ಎಂದುರೆ ವ್ಯಸನಿಸಿ ಮಲಗಿದೆಯಾ ॥ ೩ ॥
ಮುಪ್ಪಡರಿದಬಲೆ ಕುಬ್ಜೆಯ ಸೋಂಕೆ ನೀನಿಳೆಯೊ- ।
ಳಿಪ್ಪ ಜನರೆಲ್ಲ ಖೋಯೆಂದು ನಗುತಾ ॥
ಚಪ್ಪಾಳೆಯಿಕ್ಕಲಾ ನಾಚಿಕೆಯ ತೋರಿ ನ- ।
ಮ್ಮಪ್ಪ ತಿಮ್ಮಪ್ಪನೆಡೆಗೊಪ್ಪಿ ಮಲಗಿದೆಯಾ ॥ ೪ ॥
ಜಲದೊಳಾಡುತ ಗಿರಿಯ ನೆಗಹಿ ಬೆನ್ನುಳುಕಿ ಭೂ- ।
ಲಲನೆಯನು ಪೊತ್ತುತಂದಾಲಸ್ಯವೋ ॥
ಖಳನುರವ ಸೀಳಿಯಿಳೆಯಳೆದು ಪದನಖದಿ ನೀ- ।
ರಿಳಿಯಲೋಸುಗ ಛಲದಿ ನೆಲಸಿ ಮಲಗಿದೆಯಾ ॥ ೫ ॥
ಜಡಿದು ಕ್ಷತ್ರಿಯರ ನಟ್ಟಡವಿ ತಿರಿಗಿದ ದಣಿವೊ ।
ಕುಡಿದ ವಿಷವಡರಿ ಭ್ರಮಿಸಿದ ಭಾವವೋ ॥
ಬಿಡದೆ ಸ್ತ್ರೀಯರ ವ್ರತವ ಕೆಡಿಸಿ ಮ್ಲೇಚ್ಛರನು ಸೆದೆ- ।
ಬಡಿಬಡಿದು ಬೇಸರವ ಪಡೆದು ಮಲಗಿದೆಯಾ ॥ ೬ ॥
ಸುಗುಣನಿಧಿ ಭಕತರೇನೆಂದಡಪರಾಧವನು ।
ಬಗೆಗೊಳದೆ ಪಾಲಿಸುವೆನೆಂದಾಡಿದೇ ॥
ಖಗಗಮನ ಮಲಗಿ ಯುಗಯುಗವಾಯ್ತು ಬೇಗನೇ- ।
ಳಗಲದಿರ್ದಿನ್ನ ರಕ್ಷಿಸು ರಮಾರಮಣಾ ॥ ೭ ॥

ಸ್ವೀಕಾರ

ವಿಮಾ-ವಾಣಿಜ್ಯ:—ಜನ್ಮೋತ್ಸವ ಸಂಚಿಕೆ—ವ್ಯವಸ್ಥಾಪಕ—ಸಂಪಾದಕ—ಶ್ರೀ. ಜೆ. ವಿ. ದೊಡ್ಡ ವೀರಪ್ಪ—ಬಿಡಿ ಪ್ರತಿ ೪ ಆಣೆ—ಕನ್ನಡದಲ್ಲಿ ವಿಮಾ, ಬ್ಯಾಂಕಿಂಗ್ ಇತ್ಯಾದಿ ವಾಣಿಜ್ಯ ವಿಚಾರವಾಗಿ ಮಾಸಲಾಗಿರಿಸುವ ಮಾಸಪತ್ರಿಕೆಯೆಂದರೆ ಇದೊಂದೇ. ಶ್ರೀ. ದೊಡ್ಡ ವೀರಪ್ಪನವರು ಕಳೆದ ಒಂದು ವರ್ಷದಿಂದ ಈ ಮಾಸಪತ್ರಿಕೆಯನ್ನು ಬಹಳ ಪರಿಶ್ರಮದಿಂದ ನಡೆಸಿಕೊಂಡು ಬರುತ್ತಿದ್ದು ದ್ವಿತೀಯ ಸಂಪುಟದ ಪ್ರಥಮ ಸಂಚಿಕೆಯಿದನ್ನು ಶ್ರೀಮನ್ಮಹಾರಾಜರ ಜನ್ಮದಿನೋತ್ಸವದಂದೇ ವಿಶೇಷ ಸಂಚಿಕೆಯನ್ನಾಗಿ ಹೊರಡಿಸಿರುವರು. ಸಂಚಿಕೆಯಿದು ಸುಮಾರು ೨೦೦ ಪುಟಗಳನ್ನುಳ್ಳದಾಗಿದ್ದು, ಮಹಾರಾಜರು, ಯುವರಾಜರು ಮೊದಲಾದವರ ಭಾವಚಿತ್ರಗಳಿಂದಲೂ, ಮಹಾಪುರುಷರ ಸಂದೇಶಗಳಿಂದಲೂ, ಕರ್ನಾಟಕದ ಅನುಭವಸ್ಥ ಲೇಖಕರನೇಕರ, ವಿಮಾ ಬ್ಯಾಂಕಿಂಗ್ ವಿಚಾರಗಳ ಮೇಲಣ ಲೇಖನ, ಕವಿತೆ, ಕಥೆಗಳಿಂದಲೂ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಶ್ರೀ. ಸಿ. ರಾಜಗೋಪಾಲಾಚಾರಿಯವರ ವಿಚಾರಪರವಾದ ಲೇಖನಗಳಿಂದಲೂ, ಕೆಲವು ಪ್ರಸಿದ್ಧ ವಿಮಾ ಮತ್ತು ಬ್ಯಾಂಕಿಂಗ್ ಸಂಸ್ಥೆಗಳ ವಿಚಾರ-ವಿಮರ್ಶೆಗಳಿಂದಲೂ ಕೂಡಿಯುತ್ತದೆ. ಸರ್ವ ಪ್ರಕಾರದಿಂದಲೂ ಪ್ರಯತ್ನವಿದು ಶ್ಲಾಘನೀಯವಾಗಿದ್ದು ಕನ್ನಡಿಗರ ಉದಾರಾಶ್ರಯಕ್ಕೆ ಪಾತ್ರವಾಗಿದೆ. ಕರ್ನಾಟಕ ಪತ್ರಿಕಾ ಪ್ರಪಂಚದ ಅಭೂತಪೂರ್ವವಾದ ನವಸಾಹಸವನ್ನು ಕೈಕೊಂಡಿರುವ ಶ್ರೀ. ದೊಡ್ಡ ವೀರಪ್ಪನವರು ಆರ್ಥಿಕ ಸ್ವರಾಜ್ಯಸಂದೇಶವೂ ನಾಡಿನಲ್ಲೆಲ್ಲಾ ಚೆನ್ನಾಗಿ ಹರಡಬೇಕೆಂದು ಹಾರೈಸುತ್ತಿರುವ ಅವರ ಮಹದುದ್ದೇಶವೂ ಕೃತಾರ್ಥವಾಗಲೆಂದು ಆಶಿಸುತ್ತೇವೆ.

DIAMONDS! DIAMONDS!
BEST BRILLIANCY!

K. R. K. SHET,

Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟ್ಯಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನನ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನನ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತ್ಞಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಕನ್ನಡಿಗರೇ!

ಬೊಂಬಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?

ವೆಲ್ಕಂ ಹೊಟೆಲ್

(ಸ್ಥಾಪನೆ:—1912.)

(MADRAS BRAHMINS' LODGE.)

(ಜನರಲ್ ಪೋಸ್ಟಾಫೀಸಿನ ಬಳಿ)

ಫ್ರಿಯರ್ ರೋಡ್, ಫೋರ್ಟ್, ಬೊಂಬೈ.

ತಾರಿನ ಪತ್ರೆ:—"ಕಾಣೆವೂರ್" ಟೆಲಿಫೋನ್:—21386.

ಇದು ನಮ್ಮ 'ಸಿಲ್ವರ್ ಜುಬಿಲಿ' ವರ್ಷ! ಅಂದ ಬಳಿಕ ಹೆಚ್ಚಿನ ಪ್ರಶಂಸೆಗೆಡೆಯಿಲ್ಲ. ಸುಗ್ರಾಸ ಭೋಜನ, ಉತ್ಕೃಷ್ಟ ತಿಂಡಿ-ತೀರ್ಥಗಳು, ವಾಸಕ್ಕೆ ಸ್ವಚ್ಛವಾದ ಕೋಣೆಗಳು, ಬಲು ಶುಲಭ ದರ, ಹಣಕ್ಕೂ ಮಿಕ್ಕಿದ ಗುಣ—ಇವುಗಳು ಬೇಕೆಂದಿದ್ದರೆ ಈ ಸ್ಥಳವನ್ನೆಂದಿಗೂ ಮರೆಯಬೇಡಿರಿ.

ಪ್ರತ್ಯಕ್ಷಫಲ ಪಂಚ ಸಿದ್ಧಿ

ಇದು ರಾಯಚೂರು ಭೀಮಾವಧೂತರು

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಶಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಿ ಮಾಡಿಕೊಂಡು ಬರೆದಿರುವರು.

೧-ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ ಮಂತ್ರ ಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳ ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨-ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು, ವ್ಯಾಪಾರ ವೃದ್ಧಿ, ದಾರಿದ್ರ್ಯ ನಿವಾರಣ, ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩-ನೇದು ಜ್ಯೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜ್ಯೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪-ನೇದು ಔಷಧ ಪ್ರಕರಣದಲ್ಲಿ ಯಾವಯಾವ ಗಿಡಮೂಲಿಕೆಗಳಿಂದ ಯಾವಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಕಾ ಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿವಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ, ಗ್ರಹಪೀಡಾ ನಿವಾರಣ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವೈರಿ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನೂ ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನು ದೇವತೆಗಳೂ, ದ್ರವ್ಯಗಳೂ ವೈದ್ಯರೂ, ಜ್ಯೋತಿಷ್ಯರೂ, ಮಾಂತ್ರಿಕರೂ, ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾ ಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರಾ ಕಡಿಮೆ ಮಾಡಿ ಇರುವೆವು. ಬೆಲೆ ಎರಡು ರೂಪಾಯಿ, ಟಪಾಲು ಹಾಸಲು ಸೇರಿ. ಸಮ್ಮ ವಿಳಾಸ:—

ಕೆ. ಸುಬ್ರಮಣ್ಯ ಪ್ರಭು,
ಶ್ರೀ ವೆಂಕಟೇಶ್ವರ ಬುಕ್ ಡಿಪೋ, ಬಳ್ಳಾರಿ.





WANTED

In the South Kanara District young and ambitious men on very liberal terms, to represent the BHARAT INSURANCE COMPANY, LTD., LAHORE. An excellent opportunity to earn a decent living.

Apply to:—

DUTT & CO., *Chief Agents,* KARWAR.

ಕಳೆದ ವಾರ

ಕೊತ್ತು ಬಂದ ಹಾಗೆ ಹೊತ್ತುಕೊಳ್ಳುವವರಲ್ಲಿ,

'ಮದ್ರಾಸ್ ರಾಜನೀತಿ'ಯ ಶ್ರೀ. ಸಾಂಬಮೂರ್ತಿಗಳೂ ಒಬ್ಬರೆನ್ನುವ ಹಾಗಿದೆ. ಇವರು, ಸ್ವತಂತ್ರಪಕ್ಷದ ಪ್ರತಿನಿಧಿತ ಅಭಿಮಾನದೇವತೆಗಳು; ಆ ಸ್ವತಂತ್ರ ಪಂಗಡದ ಲೀಗಿನ ಒಬ್ಬ ಪ್ರಮುಖ ಸದಸ್ಯರು. ಅವರೀಗ 'ಕಾಂಗ್ರೆಸ್, ಅಧಿಕಾರ ಪದವಿಗಳನ್ನು ಅಗತ್ಯವಾಗಿಯೂ ಸ್ವೀಕರಿಸಬೇಕು' ಎಂದು ವಕಾಲತು ನಡೆಯಿಸುತ್ತಿದ್ದಾರೆ. ಅದಕ್ಕೆ ಅವರ ಕಾರಣಗಳೆರಡು. (೧) ಇದರಿಂದ, ಬಿರುದುಗಳಿಂದ ಅಲಂಕೃತರಾದ ಮಹಾ ಪುರುಷರು, ಸಭಾಸದನಗಳ್ಳೊಳಗೆ ನುಗ್ಗಿ, ವ್ಯಕ್ತಿಪರವಾದ ಲಾಭಕ್ಕಾಗಿ ಅವರು ಅಧಿಕಾರವನ್ನು ಆಕ್ರಮಿಸುವ ಈ ಹವ್ಯಾಸವು ತಪ್ಪುತ್ತದೆ. (೨) ಪ್ರಕೃತದ ರಾಜ್ಯರಚನೆಗೆ 'ಡೆಮೊಕ್ರೆಟಿಕ್' ಎಂಬ ನಾಮಕರಣ ಮಾಡಿ, ಅದನ್ನು ನಮ್ಮ ಕತ್ತಿಗೆ ಕಟ್ಟುವಲ್ಲಿ, ಸರಕಾರದ ದೂರದೃಷ್ಟಿಯೋಗತವು ಎಷ್ಟು ಮಟ್ಟಿಗೆ ಟೊಳ್ಳಾಗಿದೆ ಎಂದು ಇದರಿಂದಲೇ ಜಗತ್ಪ್ರಪಂಚವು ತಿಳಿದುಕೊಳ್ಳುವ ಹಾಗಾಗುತ್ತದೆ. ಆಗಲಿ; ಸಾಂಬಮೂರ್ತಿಗಳ ವಾದವೇನೋ, ಅವರ ಮಟ್ಟಿಗೆ ಸರಿಯಾದುದೇ ಸೈನ್ಹೋಣ. ಅವರೆನ್ನುವಂತೆ, ಈ ಶಾಲು-ಕಂಬಳಿ, ಹಾರ-ತುರಾಯಿಗಳ ಬಿರುದು ಬಹುಮಾನಗಳಿಂದ ಮೈಯುಬ್ಬಿ ಹೋದವರು, ನ್ಯಾಯವಿಧಾಯಕ ಸಭೆಗಳ ಹೆಬ್ಬಾಗಿಲಿನಿಂದ ಎಷ್ಟೋ ದೂರವಿರಬೇಕೆಂಬುದನ್ನು, ಅವರಂತಹವರೇ ಕೆಲವರೊಪ್ಪಬಹುದಾದರೂ, ವ್ಯಕ್ತಿಪರವಾದ ಲಾಭಕ್ಕಾಗಿ ಅಧಿಕಾರವನ್ನು ಪಡೆಯುವಂತೆ, ಸಭೆಗಳೊಳಗೆ ನುಗ್ಗಲು ಪ್ರಯತ್ನಿಸುವವರು ಈ ಶಾಲು-ಕಂಬಳಿಯವರು ಮಾತ್ರವೇ? ಅಷ್ಟೇ ಅಲ್ಲ; 'ಅಧಿಕಾರಪದವಿಗಳನ್ನು ಕಾಂಗ್ರೆಸ್ಸಿನವರು ಸ್ವೀಕರಿಸುವುದರಿಂದ, ಹೊಸ ಸುಧಾರಣೆಗಳು ಜಳ್ಳೆಂದು' ಪ್ರಪಂಚವಾದರೂ ಹೇಗೆ ತಿಳಿಯಬೇಕು? ಅದಕ್ಕೆ ಬದಲು, ದೇಶಾಭಿಮಾನಿಗಳೇ ಆದ ಕಾಂಗ್ರೆಸ್ಸಿನವರ ಈ ಅಧಿಕಾರಸ್ವೀಕಾರದಿಂದ, ಆ ಸ್ವೀಕಾರಕ್ಕಾಗಿ ಅವರು ಕೋರುತ್ತಿರುವ ಆತುರ, ಉದ್ವೇಗಗಳಿಂದ, ಆ ಸುಧಾರಣೆಗಳಲ್ಲಿ ಏನೋ ಸಾರವಿದೆ, ಸತ್ವವಿದೆ, ಸ್ವಾರಸ್ಯವಿದೆ ಎಂದೇ ಬಾಹ್ಯ ಪ್ರಪಂಚವು ತಿಳಿದುಕೊಳ್ಳುವಂತಾಗದೇ?

* * * * *

ಊರಲ್ಲಿ ಯಾರಾದರೂ ಮೋಟರ್ ಕಾರ್

ತೆಗೆದುಕೊಳ್ಳುತ್ತಾರೆಂದು ಆದರೆ, ಏಮೆ ಮಾಡಿಸುವವರು ಸಿಕ್ಕಿದರೆ ಹಲವು ಕಂಪೆನಿಗಳ ಏಜೆಂಟರು, ತಮ್ಮ ತಮ್ಮ ಕಂಪೆನಿಗಳ, ಪದಾರ್ಥಗಳ, 'ಅನಂತ ಕಲ್ಯಾಣಗುಣಗಳ ಸಹಸ್ರನಾಮ ಪಾರಾಯಣ'ವನ್ನು ಕಿವಿ ಕಿವುಡಾಗುವ ವರೆಗೂ ಮಾಡಿ, ತಮ್ಮ ಗಿರಾಕಿಗಳನ್ನು ಹಗಲಿರುಳೂ ಪೀಡಿಸಿ ದಣಿಸುವಂತೆ, ನಮ್ಮ ಹಲವು ಧಾರ್ಮಿಕ ಕಂಪೆನಿಗಳ ದಲಾಲ್—ಏಜೆಂಟ್—ಪುರೋಹಿತರುಗಳೂ, ಅಂಬೇಡ್ಕರ್ ಮಹಾರಾಯರಿಗೆ 'ನೀವೆಲ್ಲ ನಮ್ಮ ಮಠದ ಗಿರಾಕಿಯಾಗಿರಿ; ನಿಮಗೆ ಬೇಕಾದ ಧಾರ್ಮಿಕ ಸಾಮುಗ್ರಿಗಳು ನಮ್ಮಲ್ಲೇ ಬಹಳ ಕಡಿಮೆ ಬೆಲೆಗೆ ಮಾರಾಟಕ್ಕಿವೆ' ಎಂದು ಖಂಡಿಗಟ್ಟಲೆ ಬೆಣ್ಣೆ ಸವರುತ್ತ, ಅವರೂ ದಣಿದು, ಅಂಬೇಡ್ಕರರವರನ್ನೂ ದಣಿಸಿರುವುದಾದರೂ, ಇದುವರೆಗೂ, ಈ ದೊಡ್ಡ, 'ರಖಂ ಗಿರಾಕಿ' ಯಾವ ವ್ಯಾಪಾರೀ ಏಜೆಂಟರ ಕೈಗೂ ಬೀಳದಿದ್ದುದು ತುಂಬ ಆಶ್ಚರ್ಯ. ಇಟೆಲಿಯ ಬೌದ್ಧ ಸನ್ಯಾಸಿಗಳೊಬ್ಬರು ಗಾಳಿ ಹಾಕಿದುದು ಕೂಡ ಗಾಳಿಗೇ ಹೋದುದು ಆಶ್ಚರ್ಯ! ಈ ಸಂದರ್ಭದಲ್ಲಿ, ಈ ದೊಡ್ಡ 'ರಖಂ ಗಿರಾಕಿ'ಯ 'ಕೇನ್‌ವಾಸಿ'ಗೆ ಹೊರಟ, ಆ ಧಾರ್ಮಿಕ ಕಂಪೆನಿಗಳೆಲ್ಲಕ್ಕೂ 'ಅಖಂಡ ವಿಜಯ' ಉಂಟಾಗಲೆಂದು ನಾವು ಹಾರೈಸುವಾಗ, ನಾವಿಲ್ಲಿ ಒಂದು ಚಿಕ್ಕ ವಿಷಯವನ್ನೂ ಹರಿಜನ ಸಮಾಜದ ಸಮಾಲೋಚನೆಗಾಗಿ ಇಡಲು ಬಯಸುತ್ತೇವೆ. ವಸ್ತುತಃ ಪ್ರಪಂಚದಲ್ಲಿ ಈಗ ಪ್ರಚಲಿತವಾದ ಧರ್ಮಗಳು ಯಾವುದೇ ಇದ್ದರೂ, ಅವು ಪ್ರತಿಯೊಂದಕ್ಕೂ 'ಭೂತಕಾಲ'ವೇ ತಾಯಿಬೇರಾಗಿದ್ದು, ಆ ಪ್ರಾಚೀನ ಕಾಲಪುರುಷನ ಪ್ರೇರೇಪಣೆಯಿಂದಲೇ ಅವು ಉಂಟಾಗಿವೆ. ಈ ಪ್ರಾಚೀನ ಧರ್ಮಗಳ ತತ್ವಸಾಧನೆ ಏನಿದ್ದರೂ, ಅದು ಆಗಿನ, ಆ ಹಳೆಯ ಕಾಲದ ಆತ್ಮಿಕ ಮುಕ್ತಿ, ಸಾಮಾಜಿಕ ಮುಕ್ತಿಗಳನ್ನು ದೊರಕಿಸಿಕೊಡುವುದಕ್ಕೇ ಹುಟ್ಟಿದವುಗಳಾಗಿವೆ. ಅನ್ನುವಾಗ, ನಮ್ಮ ಹರಿಜನ ಬಂಧುಗಳು, ಹಳೆಯುದೇ ಆದ ಯಾವುದಾದರೂ ಧರ್ಮಕ್ಕೆ ಸೇರುವ ಬದಲು, ತಮ್ಮದಾದ ಆ ಪ್ರಾಚೀನ ಹಿಂದೂಧರ್ಮದಲ್ಲಿಯೇ ಇದ್ದು, ಅದರಲ್ಲಿ ಅಗತ್ಯವಿರುವ ಹೊಸ ಏರ್ಪಾಡುಗಳನ್ನು ಮಾಡಿಕೊಂಡು, ಹಿಂದೂಗಳಾಗಿಯೇ ಬದುಕಿ ಬಾಳಲಾರರೇಕೆ?

* * * * *

ಜಾತಿವಾರು ಎವಾರ್ಡ್,—ಸಕ್ಕರೆ ಲೇಪದ ಕಾಸರಕನ ಆ ಗುಳಿಗೆ,

ಇದು ನಮ್ಮ ದೇಶದ ಸಾಧಕಕ್ಕೊಂದು ಬಾಧಕವೆಂಬುದರಲ್ಲಿ ಎರಡು ಅಭಿಪ್ರಾಯವಿಲ್ಲ. ದೇಶದ ಒಗ್ಗಟ್ಟಿಗೆ ಇದೊಂದು ಕೊಡಲಿ. ಆದರೂ, 'ಇಂಪೀರಿಯಲಿಜಮ್ಮಿನ' ಕಾರ್ಖಾನೆಯಲ್ಲಿ ತಯಾರಾದ, ಈ ಕೊಡಲೀ ಯಂತ್ರದ ತೀಕ್ಷ್ಣವಾದ ಆಘಾತದ ಪ್ರಾಬಲ್ಯವನ್ನು, ಮನಸ್ಸು ಮಾಡಿದರೆ, ಕೊಂಚ ತಗ್ಗಿಸಿಕೊಳ್ಳಬಹುದಾಗಿದೆ. ಹಿಂದೂಗಳೂ, ಮುಸಲ್ಮಾನರೂ ಒಂದಾಗಿ, ಉಭಯಸಾಮಾನ್ಯವಾದ ಒಂದು ದೇಶಹಿತಸಾಧನೆಯ ಕಾರ್ಯಕ್ರಮದಂತೆ ಕೆಲಸಮಾಡಲು ಒಪ್ಪುವುದಾದರೆ, ಈ ಕೊಡಲಿ ಏಟಿನ ಗಾಯಗಳು ಅಷ್ಟು ಆಳವಾಗಿ ಬೇರೂರಲಾರವೆಂಬುದು ಖಂಡಿತ. ಈ ಸಂದರ್ಭದಲ್ಲಿ, ಮುಸ್ಲಿಂ ಪಾರ್ಲಿಮೆಂಟರಿಪ್ಲೋರ್ಡಿನ 'ಮೆನಿಫೆಸ್ಟೋ'ವಿಗೆ ಉತ್ತರರೂಪವಾದ ಒಂದು 'ಸ್ಟೇಟ್‌ಮೆಂಟ್'ನ್ನು ಪ್ರಕಟಿಸುವಾಗ, ಸೇಟ್ ಹಾಜಿ ಅಬ್ದುಲ್ಲಾ ಹಾರೂನ್ ರವರೂ ಅದೇ ಮಾತನ್ನೇ ಹೇಳಿದ್ದಾರೆ. ಹಿಂದೂ-ಮುಸ್ಲಿಮರ ಸಂಯುಕ್ತ ಪಂಗಡಗಳನ್ನು ಸ್ಥಾಪಿಸುವುದರಿಂದ, ಮುಸ್ಲಿಮರ ಒಗ್ಗಟ್ಟಿಗೆ ಯಾವ ಅಪಾಯವೂ ಇಲ್ಲವೆಂದಿದ್ದಾರೆ. ಅಪಾಯಕ್ಕೆ ಬದಲು, ತಾಳ್ಮೆಯ ಗುಣವು ಉಭಯತರಲ್ಲಿಯೂ ಹೆಚ್ಚಿ, ಒಬ್ಬರ ಹಕ್ಕುಬಾಧ್ಯತೆಗಳನ್ನು, ಮತ್ತೊಬ್ಬರು ಗೌರವಿಸುವ ಅಭ್ಯಾಸವು ದೇಶದಲ್ಲಿ ಸರ್ವತ್ರ ವೃದ್ಧಿಗೊಳ್ಳುವುದೆಂದೂ ಸೂಚಿಸಿದ್ದಾರೆ. ಮಹಮ್ಮದೀಯ ಮುಖಂಡರೀಗ, ಬೆಕ್ಕಿನ ಬಿಡಾರದಂತೆ, ತಮ್ಮ ಸಮಾಜದವರನ್ನು ಮಾತ್ರವೇ ಒಳಗೊಂಡ ಪ್ರತ್ಯೇಕ ಸಮುದಾಯ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ವಿಶೇಷವಾಗಿ ಕಾರ್ಯಾಸಕ್ತವಾಗಿರುವಾಗ, ಹಾರೂನರವರು ಈ ನುಡಿಗಳಿಂದ ಅವರನ್ನು ಎಚ್ಚರಿಸಿದುದು ಎಷ್ಟು ಶ್ರೇಯಸ್ಕರವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಮಿ. ಜಿನ್ನಾರವರೇ ಮೊದಲಾದ ಮುಸ್ಲಿಂ ಮುಖಂಡರು ಹಾರೂನರವರ ಉಪದೇಶವನ್ನು ಮಥಿಸಿ ನೋಡಲಾರರೇ? ಪ್ರತ್ಯೇಕ ಸಾಮಾಜಿಕ ಸಂಸ್ಥೆಗಳಿಂದಾಗುವ ಅಪಾರ ಹಾನಿಯನ್ನು ತಡೆಗಟ್ಟಲಾರರೇ?

* * * * *

ಲಾರ್ಡ್ ಅಮ್‌ಹರ್ಸ್ಟ್ ಸಾಹೇಬರ ಹೆಸರು—

ನಿಮಗೆ ತಿಳಿದುದಲ್ಲವಾದರೆ, ಈಗ ತಿಳಿದುಕೊಳ್ಳಿ. ಅವರೇ, ಕಲ್ಕತ್ತೆಯ ಉಷ್ಣವನ್ನು ತಿಳಿದು, ತಂಪಾದ ಸಿಮ್ಲವನ್ನು ತಮ್ಮ ಬೇಸಿಗೆಯ ರಾಜಧಾನಿಯನ್ನಾಗಿ ಮಾಡಿಕೊಂಡ ಮೊದಲನೆಯ ಗವರ್ನರ್-ಜನರಲರವರು! ಅವರು, ಒಮ್ಮೆ, ತಮ್ಮ ಸ್ವಂತ ಶಕ್ತಿಸಾಮರ್ಥ್ಯಗಳನ್ನು ತಾವೇ ಕಂಡು ಬೆರಗಾಗಿ, ತಾವೇ ಆತ್ಮಶ್ಲಾಘನೆ ಮಾಡಿಕೊಳ್ಳುವ ಭರದಲ್ಲಿ, 'ಚೀನದ ಚಕ್ರವರ್ತಿಗಳೂ, ನಾನೂ ಮನುಷ್ಯಕೋಟಿಯ ಅರ್ಧ ಪಾಲನ್ನೇ ಆಳುತ್ತಿದ್ದೇವೆ; ಆದರೂ ನನಗೆ ಪ್ರಾತಃಕಾಲದ ಭೋಜನಕ್ಕೆ ಸಮಯವು ದೊರಕುತ್ತದೆ' ಎಂದು ನುಡಿದುಬಿಟ್ಟರು. ನಿಜವಾಗಿಯೂ ಆಶ್ಚರ್ಯವಿದು! ಅತ್ತ ಹಾಗೆ ಆಳಿಕೆ; ಇತ್ತ ಹೀಗೆ ಊಟ. ಏನಿದು! ಆದರೆ, ಇವೆರಡರಲ್ಲಿ ರಾಜ್ಯದಾಡಳಿತೆ ನಡೆಸುವುದು ಆಗ ಕಷ್ಟವಾಗಿದ್ದಿತೋ ಅಥವಾ ಪ್ರಾತಃ ಭೋಜನ ಮಾಡುವುದು ಕಷ್ಟವಾಗಿದ್ದಿತೋ ಹೇಗೆಂಬುದನ್ನು ಸೂಚಿಸಲು, ಆಗಿನ ದಾಖಲೆಗಳೇನೂ ಈಗ ದೊರಕದುದು ನಮ್ಮ ದುರದೃಷ್ಟ. ಹೇಡೂ, ಅನಂತರ ಪಟ್ಟಕ್ಕೆ ಬಂದ ಮತ್ತೊಬ್ಬ ಗವರ್ನರ್ ಜನರಲರ ಪತ್ನಿ, ತನ್ನ ದಿನಚರ್ಯೆಯ ಪುಸ್ತಕದಲ್ಲಿ ಹೀಗೆ ಬರೆದಿಟ್ಟಿದ್ದಾರೆಂದು ತಿಳಿದುಬರುತ್ತಿದೆ. ಏನು? 'ಕೌನ್ಸಿಲಿನ ಮೆಂಬರುಗಳೂ, ಇಲಾಖೆಗಳ ಮುಖ್ಯಾಧಿಕಾರಿಗಳೂ, ವಾರಕ್ಕೆ ಮೂರಾವರ್ತಿ, ಅವರವರ ಮನೆಗಳಲ್ಲಿ ಸೇರಿ 'ಪ್ರಾರ್ಥನಾಕೂಟ'ಗಳನ್ನು ಜರುಗಿಸಿ, ಅನಂತರ ಉಳಿದ ಸಮಯವೆಲ್ಲಾ, ಒಬ್ಬರು ಮತ್ತೊಬ್ಬರ ಮೇಲೆ, ಅಸೂಯಾಪರವಾದ ಟೀಕೆಟಿಪ್ಪಣಿಗಳನ್ನು ಬರೆಯುವಲ್ಲಿಯೇ ಕಳೆಯುತ್ತಿದ್ದರು.' ಹಾಗಾದರೆ, ಇದು ಎಷ್ಟು ಕಷ್ಟಕರವಾದ ಕೆಲಸವೆಂದು ಪ್ರತ್ಯೇಕವಾಗಿ ಹೇಳಬೇಕೇ? ನಿಜವಾಗಿಯೂ, ನಮ್ಮ ಇಂಡಿಯದ ಸರ್ವಾಧಿಪತಿಗಳ ಪ್ರಾತಃಭೋಜನವನ್ನು ಸಿದ್ಧಗೊಳಿಸುವುದಕ್ಕಾಗಿ, ಸೊಂಟಕಟ್ಟಿ ನಿಂತಿದ್ದ ಆ ೫೦೦ ಮಂದಿ ಸೇವಕರು ಮತ್ತೂ ೧೦೦ ಮಂದಿ ಅಡಿಗೆಯವರಿಂದ ತಯಾರಾದ ಆ ಭೋಜನವನ್ನು ಸವಿದುಣ್ಣುವ ಆ ಮಹತ್ಕಾರ್ಯದಿಂದಲೂ, ಈ ಮಹತ್ಕಾರ್ಯ ದೊಡ್ಡದಲ್ಲವೇ? ನಿಜವಾಗಿಯೂ, ಈ ಚತುರ್ ಶತಮಾನದ ಪರಿವಾರದಿಂದ ತಯಾರಾದ ಆ ಪ್ರಾತಃಭೋಜನವನ್ನುಂಡು ತೇಗಿಯೂ, ಅದರ ಮೇಲೆಯೂ ಒಬ್ಬನು ಏನಾದರೂ ಕೆಲಸ ಮಾಡಲು ಶಕ್ತನಾಗಬೇಕಾಗಿದ್ದರೆ ಆತನು ಬಲಭೀಮಸೇನನೇ ಆಗಿರಬೇಕು—ಸಂದೇಹವೇನು?

ರಾಮದಾಸ ವಜ್ರಕಾಯ ಗುಟಿಕಾ

(STERN-VIGOUR)

ಈ ಔಷಧದಲ್ಲಿ ಬಂಗಾರ, ಕಸ್ತೂರಿ, ಕೇಸರ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಸ್ವಪ್ನೇಂದ್ರಿಯ ಮುಂತಾದ ಧಾತು ವಿಕಾರಗಳನ್ನು ಗುಣಪಡಿಸಿ, ಧಾತುಸ್ತಂಬನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದನವನ್ನು ಕೊಡುವುದು. ಅಲ್ಲದೆ ಅತ್ಯಾಜಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವದು.

ಕ್ರಯ 12 ಗುಳಿಗೆಗಳ ಬಾಟ್ಲಿ 1ಕ್ಕೆ 1—4—0.
50ಕ್ಕೆ 6—8—0.

ಇದಲ್ಲದೆ ನಮ್ಮ ಇತರ ಅನುಭವಸಿದ್ಧ ಔಷಧಗಳ ಪೂರ್ಣಪತ್ರಿಕೆಗಳನ್ನು ನಮ್ಮ ಏಜಂಟರಿಂದ ಪಡಕೊಂಡು ಅನುಭವಿಸಿರಿ.

ದ. ಕ. ಜಿಲ್ಲೆಯ ಎಲ್ಲಾ ಪ್ರಮುಖ ಊರುಗಳಲ್ಲಿ ನಮ್ಮ ಏಜಂಟರಿರುವರು.

ತಯಾರಿಸುವವರು:—
ರಾಮದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.

ಜಿಲ್ಲಾ ಏಜಂಟರು:—
ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.

INSURE WITH
CONFIDENCE
IN
INDIA
EQUITABLE
THE BEST
Life Office of its Age.
(Estd: 1908).
INDIA EQUITABLE INSURANCE CO.
LTD. CALCUTTA.

The MAN behind
the RUPEE

is a power to be reckoned with in every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

ವಿದೇಶ

ಪ್ಯಾಲಸ್ತೈನಿನಲ್ಲಿ ಇಬ್ಬರು ಯುರೋಪೀಯ ಕ್ಯಾಪ್ಟನ್ ಮತ್ತೂ ಕಾರ್ಪರಲ್‌ರುಗಳ ಮೇಲೆ ಗುಂಡು ಹಾರಿಸಿ ಅವರನ್ನು ಗಾಯಗೊಳಿಸಿದುದಕ್ಕಾಗಿ ಹೆಬ್ರೋನ್ ಪ್ರಾಂತದವರು ೨೦೦೦ ಪೌಂಡುಗಳ ದಂಡ ತೆರಬೇಕಾಗಿದೆ.

ಜೆರೂಸಲೇಮಿನ ಮುಸ್ಲಿಂ ವಿದ್ಯಾರ್ಥಿಗಳ ಕಮಿಟಿಯ ಪ್ರೆಸಿಡೆಂಟ್ ಫರೀದ್ ಇಲೋರಿ ಎಂಬಾತನು ಜಾಂಬು ಮಾಡುವಾಗ ಸಿಡಿದು, ಕೈ ಹಾರಿ ಅತನು ಮೃತಪಟ್ಟನು. ಅತನ ಸಹೋದರನನ್ನು, ದಂಗೆಗಾರ ನೆಂದು ನಿರ್ಬಂಧವಾಸದಲ್ಲಿರಿಸಿದ್ದಾರೆ.

ಜಿನೇವದ ಜನಾಂಗ ಸಭೆಯಲ್ಲಿ ಅಬಿಸೀನಿಯದ ಚಕ್ರವರ್ತಿಗಳು ಮಾತಾಡಲು ಎದ್ದಾಗ, ಇಟೆಲಿಯ ಕೆಲವು ಪತ್ರಿಕೆಗಳ ಬಾತ್ಮೀದಾರರು ಗಲಭೆ ಎಬ್ಬಿಸಿದರು. ಈ ಸಂಬಂಧ ಅವರನ್ನು ಪೋಲೀಸ್ ಕೊಠಡಿಗಳಿಗೆ ಸಾಗಿಸಲಾಯಿತು. ಅನಂತರ ಜಿನೇವದಿಂದ ಹೊರತಳ್ಳಲಾಯಿತು.

ಜಿನೇವಾದಲ್ಲಿ ಜನಾಂಗಸಭೆ ನಡೆಯುತ್ತಿದ್ದ ಹಾಗೆ, ಜುಗೋಸ್ಲಾವಿಯದ ಒಬ್ಬ ಫೋಟೋಗ್ರಾಫರ್, ಪ್ರೆಸ್ ಗೆಲರಿಯಲ್ಲಿದ್ದವನು, ಪಕ್ಕನೆ ಗುಂಡು ಹೊಡೆದುಕೊಂಡು ಸತ್ತನು. ಜರ್ಮನಿಯಲ್ಲಿ ಯಹೋದ್ಯರನ್ನು ಸರಿಯಾಗಿ ನಡೆಯಿಸದಿರುವ ಕಾರಿತು ತನ್ನ ನಿಷೇಧವನ್ನು ವ್ಯಕ್ತಗೊಳಿಸಲು ಅವನು ಪ್ರಾಣಹತ್ಯ ಮಾಡಿಕೊಂಡನೆಂದು ತಿಳಿದು ಬರುತ್ತದೆ.

ವಾರ್ಸಾ ಪ್ರಾಂತದ ಸುಂದರಿಯಾದ ೨೦ ವರ್ಷದ ಕೌಂಟಿಸ್ ಮಾರಿಯಾ ರವೊಡೊವೊಸ್ಕಾ ಎಂಬಾಕೆಯನ್ನು ಅಲ್ಲಿನ ತಾಧಿಕ್ ಮಿನಾಕ್ಸಾ ಎಂಬ ವಿದ್ಯಾರ್ಥಿಯು ಅಪಹರಿಸಿ, 'ನನ್ನನ್ನು ಮದುವೆಯಾದರೆ, ಬಿಡುಗಡೆಯಾಗುತ್ತೀ' ಎಂದು ತಿಳಿಸಿರುತ್ತಾನೆ.

ಮೆಡ್ರಿಡ್‌ನಲ್ಲಿ ಫೆಸಿಯಿಸ್ಟರಿಗೂ, ಸೋಶಿಯಲಿಸ್ಟರಿಗೂ ಕೈಕೈ ಹತ್ತಿ ಬಾಂಬುಗಳು ಹಾರಿ, ಒಂದು ಹೊಸ ಕಟ್ಟಡವು ಹಾರಿಹೋಯಿತು. ಎರಡು ಮಂದಿ ಫೆಸಿಯಿಸ್ಟರು ಕೊಲೆಮಾಡಲ್ಪಟ್ಟರು.

ಟೊಕಿಯೋದಲ್ಲಿ ಮಿಲಿಟರಿ ಕಾರ್ಯಭಾರಗಳ ಡೈರೆಕ್ಟರ್ ಜನರ ಅರನ್ನು ಖಡ್ಗಪ್ರಯೋಗದಿಂದ ತಲೆಹಾರಿಸಿದ್ದ ಲೆ॥ ಕರ್ನಲ್ ಸೆಬುರೋ ಎಂಬಾತನನ್ನು ಸರಕಾರದವರು ವಧಿಸಿದರು.

ಸಮ್ಮ ಚಕ್ರವರ್ತಿಗಳ ಪಟ್ಟಾಭಿಷೇಕ ವ.ಹೋತ್ಸವದ ಆಚರಣೆಗಾಗಿ, ಮಹಾಮಾನ್ಯ ಡ್ಯೂಕ್ ಆಫ್ ಯಾರ್ಕ್, ಕೆಂಟರಿಬರಿ ಮತ್ತೂ ಯಾರ್ಕಿನ ಆರ್ಚ್ ಬಿಶಪರು, ಪ್ರಧಾನ ಮಂತ್ರಿ, ಮಂತ್ರಿಮಂಡಲದ ಮುಖ್ಯ ಸದಸ್ಯರು ಇವರೇ ಮೊದಲಾದವರಿಂದ ಕೂಡಿದ, ೪೨ ಮಂದಿ ಪ್ರಮುಖರ ಒಂದು ಸಂಸ್ಥೆಯು ಪ್ರೀವೀ ಕೌನ್ಸಿಲಿನಿಂದ ನೇಮಿಸಲ್ಪಟ್ಟಿದೆ.

ಅಮೆರಿಕದಲ್ಲಿ ಅನಾವೃಷ್ಟಿ. ಗೋಧಿಯ ಬೆಳೆ ಸುಟ್ಟುಹೋಗಿದೆ. ೧೦ ಲಕ್ಷ ಜಾನುವಾರುಗಳನ್ನು ಕೊಂಡು, ಕೊಂದು, ಆದರ ಮಾಂಸವನ್ನು ನಿರುದ್ಯೋಗಿಗಳಿಗೆ ಆಹಾರವಾಗಿ ಕೊಡಬೇಕೆಂದು ಸರಕಾರದ ಯೋಚನೆ. ಇಂದಿನ ದುರ್ಭಿಕ್ಷದಿಂದ ೫೦ ಕೋಟಿ ಪೌಂಡುಗಳಷ್ಟು ನಷ್ಟವಿದೆ ಎಂದೂ, ೧ ಲಕ್ಷ ರೈತರ ಕುಟುಂಬಗಳ ಮೇಲೆ ಈ ದುರ್ಭಿಕ್ಷದ ಪರಿಣಾಮವಾಗುವುದೆಂದೂ ಅಂದಾಜು. ನಿರುದ್ಯೋಗಿಗಳಲ್ಲಿ ೫೦ ಸಾವಿರ ಮಂದಿಗೆ ಫೆಡರಲ್ ಅಧಿಕಾರಿಗಳು ಕೆಲಸ ಒದಗಿಸುವರು. ಮಿಕ್ಕವರನ್ನು ರಿಸೆಟ್ಲ್‌ಮೆಂಟ್ ಸಂಘದವರು ನೋಡಿಕೊಳ್ಳುವರು.

ಆಸ್ಟ್ರೇಲಿಯದಲ್ಲಿ ೧೯೩೫-೩೬ ಬಜೆಟಿನಲ್ಲಿ ಉಳಿತಾಯವಿಷ್ಟು—೩,೫೬೨,೦೦೦ ಪೌಂಡುಗಳು. ಕಳೆದ ೫ ವರ್ಷಗಳಿಂದ ಅಲ್ಲಿ ಉಳಿತಾಯವೇ.

ಆಕ್ಸ್‌ಫಾರ್ಡಿನ ಸೈಂಟ್ ಪೀಟರ್ ಮಂದಿರಕ್ಕೆ ಲಾರ್ಡ್ ನ್ಯೂಫೀಲ್ಡ್‌ರವರು ೫೦ ಸಾವಿರ ಪೌಂಡುಗಳ ದಾನವನ್ನು ಮಾಡಿರುತ್ತಾರೆ. ಹಿಂದೆ ಇವರೇ ಅದಕ್ಕೆ ೨೩ ಸಾವಿರ ಪೌಂಡುಗಳ ದಾನಮಾಡಿದ್ದರು. ಈ ಮಂದಿರವು ೧೯೩೮ರಲ್ಲಿ, 'ಸಾಮಾನ್ಯ ಜನರಿಗೆ ಯುನಿವರ್ಸಿಟಿಯ ವಿದ್ಯಾಭ್ಯಾಸವನ್ನು ದೊರಕಿಸಿ ಕೊಡಲು' ದಿವಂಗತ ಬಿಶಪ್ ಜೆವಾನಿಯವರ ಸ್ಮಾರಕವಾಗಿ ಸ್ಥಾಪಿಸಲ್ಪಟ್ಟಿದ್ದಿತು. ಇದರ ಸ್ಥಾಪನೆಗಾಗಿ ತಗುಲಿದ ವೆಚ್ಚ ಒಟ್ಟಿಗೆ ೧॥ ಲಕ್ಷ ಪೌಂಡು.

ಜನಾಂಗಸಂಘದ ಸಭೆಯಲ್ಲಿ ಇತಿಯೋಪಿಯಕ್ಕೆ ಸಂಬಂಧಪಟ್ಟ ಕೆಲವಂಶಗಳು ನಿರ್ಧಾರವಾದಂತೆ ತೋರುತ್ತದೆ. ಬ್ರಿಟಿಷ್ ವಿದೇಶ ಕಾರ್ಯಭಾರಗಳ ಸೆಕ್ರಟರಿಗಳಾದ ಮಿ. ಎಂತೋನಿ ಏಡನರವರಿಗೂ ಮಾಜೀ ಚಕ್ರವರ್ತಿಗಳವರಿಗೂ ನಡೆದ ಒಂದು ಸಂಭಾಷಣೆಯಲ್ಲಿ, ಕಳೆದು ಹೋದ ಸಾಮ್ರಾಜ್ಯವನ್ನು ಹಿಂದುರಿಗಿ ಕೊಡಿಸುವುದು ಅಸಾಧ್ಯವೆಂತಲೂ, ಅಬಿಸೀನಿಯದ ಸೈನ್ಯವು ಚೆದರಿರುವುದೆಂತಲೂ, ಮಾಜಿ ಸರಕಾರವು ತೀರಿಹೋಗಿರುವುದೆಂತಲೂ, ಚಕ್ರವರ್ತಿಗಳ ಜನಾಂಗವು ಅವ್ಯವಸ್ಥಿತವಾಗಿರುವುದೆಂತಲೂ, ಅಬಿಸೀನಿಯದ ಜನರು ಇನ್ನು ಕೆಲವು ಕುಲಗಳಾಗಿ ಮಾತ್ರ ಇರುವವೆಂತಲೂ ಚಕ್ರವರ್ತಿ ಹೈಲ್ ಸಿಲಾಸಿಯವರಿಗೆ ಸೆಕ್ರಟರಿಗಳು ತಿಳಿಸಿದುದರ ಮೇಲೆ, ಚಕ್ರವರ್ತಿಗಳು 'ಉಳಿಸಿ, ಕಾಪಾಡಿ'ರೆಂದು ಎಷ್ಟು ಪ್ರಾರ್ಥಿಸಿದರೂ ಸೆಕ್ರಟರಿಗಳು ಅಡಾಗುವುದಿಲ್ಲವೆಂದರು. ಬಳಿಕ ಚಕ್ರವರ್ತಿಗಳು ಇತಿಯೋಪಿಯದ ಸರಕಾರವು ಗೋರಿನಲ್ಲಿ ಸ್ಥಾಪಿತವಾಗಿರುವುದೆಂತಲೂ, ಸಾಮ್ರಾಜ್ಯದ ಮಿಲಿಟರಿಯನ್ನು ಯುದ್ಧಕ್ಕಾಗಿ ರಾಸ್ ಇಮ್ಮಾಯವರು ಸಂಗ್ರಹಿಸುತ್ತಿರುವರೆಂತಲೂ, ತಾವು ಎಂದಿಗೂ ಸಿಂಹಾಸನವನ್ನು ಬಿಟ್ಟುಕೊಡೆವೆಂತಲೂ, ಕೊನೆತನಕವೂ ಯುದ್ಧವನ್ನೇ ಮಾಡುವೆವೆಂತಲೂ ಪ್ರಕಟಿಸಿರುವರು. ಸ್ಯಾಂಕ್ಷನುಗಳು ರದ್ದಾಗಬಾರದು, ಇಟೆಲಿಯ ದಿಗ್ವಿಜಯವನ್ನು ಒಪ್ಪಬಾರದು, ತಮಗೆ ಸಾಲ ಕೊಡಿಸಬೇಕು ಎಂಬ ಚಕ್ರವರ್ತಿಗಳ ಅರಿಕೆಗಳ ಕಾರಿತು ವಿಶೇಷ ಫಲವಾಗುವಂತೆ ಏನೂ ತೋರಲಿಲ್ಲ. ಸ್ಯಾಂಕ್ಷನುಗಳು ರದ್ದಾಗುವುದು ಖಂಡಿತ. ಸಾಲವು ದೊರೆಯದು; ದಿಗ್ವಿಜಯದ ಒಪ್ಪಿಗೆಯ ಮಟ್ಟಿಗೂ, ಆಲೋಚನೆ ನಡೆಯುತ್ತಿದೆಯಾದರೂ, ಅದೂ, ಕಾಲಕ್ರಮದಲ್ಲಿ ಇಟೆಲಿಗೆ ಅನುಕೂಲವಾಗಿಯೇ ತೀರ್ಮಾನವಾಗಬಹುದು. ಅಂತೂ ಚಕ್ರವರ್ತಿಗಳ ಆಶೆಯೂ, ಅರಿಕೆಯೂ ಒಂದೂ ನೆರವೇರುವ ಹಾಗೆ ತೋರಲಿಲ್ಲ.

ದಿ ಬೊಂಬೆ ಕಮರ್ಶಿಯಲ್ ಏಜೆನ್ಸಿ.

ಸ್ಪರ್ಧೆ ನಂಬ್ರ 7.

ಪಡೆಯಿರಿ ರೂ. ೨೦೦೦

ಪೋಸ್ಟ್ ಮಾಡುವ ಕೊನೆಯ ತಾರೀಕು 20-7-36. ಉತ್ತರ ತಾ. 28-7-36ರಲ್ಲಿ.

ಮೊದಲನೆ ಬಹುಮಾನವಾದ ರೂ. 7700/— ಸರಿಯಾದ ಉತ್ತರವನ್ನು (ಇದು ಬ್ಯಾಂಕಿನಲ್ಲಿ ಠೇವಣಾತಿಯಾಗಿ ಡಲ್ಪಟ್ಟಿರುವ ಉತ್ತರದೊಡನೆ ಪ್ರತಿಯೊಂದು ವಿಧದಲ್ಲೂ ಸರಿಹೋಲಬೇಕು) ಕಳುಹುವವರಿಗೆ ಕೊಡಲಾಗುವದು. ಸರಿಯಾದ ಉತ್ತರವನ್ನು ಒಬ್ಬರಿಗಿಂತಲೂ ಹೆಚ್ಚಾಗಿ ಕಳುಹಿದಲ್ಲಿ ಅದು ಅವರೊಳಗೆ ಸರಿಯಾಗಿ ಹಂಚಲಾಗುವದು. ತಾ. 12—7—36 ರೊಳಗೆ ಸರಿಯಾದ ಮೂರು ಪ್ರಥಮ ಉತ್ತರಗಳನ್ನು ಕಳುಹುವವರಿಗೆ ರೂ. 300/—ರ ಮೂರು ಬಹುಮಾನಗಳ ಗ್ಯಾರಂಟಿಯಿದೆ. ಎಲ್ಲರಕ್ಕಿಂತಲೂ ಅತ್ಯಧಿಕವಾದ ಉತ್ತರಗಳನ್ನು ಕಳುಹುವವರಿಗೆ ರೂ. 400ರ ವಿಶೇಷ ಬಹುಮಾನವಿದೆ.

	11	

ಏನು ಮಾಡತಕ್ಕುದು:—ಚೌಕದಲ್ಲಿ ಕಾಣುವ ಎಂಟು ಖಾಲಿ ಅಂಕಣಗಳನ್ನು ಪೂರ್ಯದಿಂದ ಇಪ್ಪತ್ತೆರಡರ (0ದಿಂದ 22) ಅಂಕೆಗಳಿಂದ ನಡುವಿನ 11ನ್ನು ಬದಲಾಯಿಸದೆ ಮೇಲಿನಿಂದ ಕೆಳಕ್ಕಾಗಲಿ, ಅಡ್ಡವಾಗಲಿ, ಮೂಲೆಯಿಂದ ಮೂಲೆಗಾಗಲಿ, ಕೂಡಿಸುವಾಗ ಜುಮ್ಲಾ 33 ಬರುವ ಹಾಗೆ, ಒಂದು ಅಂಕೆಯು ಎರಡು ಸಾರಿ ಬಾರದಂತೆ, ಭರ್ತಿ ಮಾಡಬೇಕು.

ನಿಯಮಗಳು: ಪ್ರತಿಯೊಂದು ಉತ್ತರಕ್ಕೆ ಪ್ರವೇಶಧನ ರೂ. 1/—. ಬಹುಮಾನವು ಬಂದ ಉತ್ತರ ಪ್ರಮಾಣದ ಮೇಲೆ ಹೊಂದಿಕೊಂಡಿರುವದು. ಖಾಲಿ ಕಾಗದದ ಮೇಲಣ ಉತ್ತರಗಳೂ ಸ್ವೀಕರಿಸಲಾಗುವುವು. ವ್ಯವಸ್ತೀರ್ಮಾನವು ಕೊನೆಯದೂ, ಎಲ್ಲ ವಿಷಯಗಳಲ್ಲೂ ಕಾನೂನು ಪ್ರಕಾರ ಸಿಂಧುವಾದುದೂ ಆಗಿರುತ್ತದೆ. ಸ್ಥಳೀಯ ಗಳೂ ಮಧ್ಯಾಹ್ನ 12ರಿಂದ 5ರ ವರೆಗೆ ಸ್ವೀಕರಿಸಲಾಗುವುವು. ಉತ್ತರದೊಡನೆ, ಒಂದಾಣೆಯ ಟಪ್ಪಾಲು ಚೀಟನ್ನು ಹಚ್ಚಿಸಿ ವಿಳಾಸವನ್ನು ಬರೆದಿರುವ ಲಕೋಟೆಯನ್ನು ಕಳುಹಿಸಿರಿ. ಎಲ್ಲ ಉತ್ತರಗಳನ್ನೂ, ಹಣವನ್ನೂ ಈ ವಿಳಾಸಕ್ಕೆ ಕಳುಹಿರಿ:

THE ORGANIZER,
THE BOMBAY COMMERCIAL AGENCY,
EMPIRE BUILDING, FORT, BOMB

ಸ್ಪರ್ಧೆ ನಂ. 6

ರ ಫಲಿತಾಂಶ.

11	15	4
3	10	17
16	5	9

ಮೊಹರುಮಾಡಲ್ಪಟ್ಟಿದ್ದ ಉತ್ತರ
(ಬ್ಯಾಂಕಿನಲ್ಲಿ ಠೇವಣಾತಿಯಾಗಿಟ್ಟ ಹಾಗೆ)

ಮೂರು ಗ್ಯಾರಂಟಿಯ ಬಹುಮಾನಗಳನ್ನು ಪಡೆದವರ ಹೆಸರು:—

1. ಮಿಸೆಸ್ ಮುಜಿಬುನ್ನೆಸ್ಸಾ ಬೇಗಂ, ನಾಗ್ಪೂರ್.
2. ಜಿ. ಡಿ. ಪಾಟೆಲ್, ಥಾನೆ. } ಪ್ರತಿಯೊಬ್ಬರಿಗೂ ರೂ. 300/— ದೊರಕಿದೆ.
3. ರಮಣಲಾಲ ವಿ. ಪಠೇಲ್, ಅಹಮ್ಮದಾಬಾದ್.
4. ವಿ. ಈ. ಗುಪ್ತ, ಬಾಂದ್ರಾ. } ಪ್ರತಿಯೊಬ್ಬರಿಗೂ ರೂ. 150/— ದೊರಕಿದೆ. ಜುಮ್ಲಾ ರೂ. 900/—

ಈ ಕೆಳಗಣ 11 ಜನರಿಗೆ ಪ್ರತಿಯೊಬ್ಬರಿಗೆ ರೂ. 140/—ದೊರಕಿದೆ ಮತ್ತು ನಂಬ್ರ 12ನೇಯವರಿಗೆ ರೂ. 135/- ದೊರಕಿದೆ. ಜುಮ್ಲಾ ರೂ. 1675.

1. ಎಸ್. ಬಿ. ಆರ್. ಪಠೇಲ್, ಪೆಟ್ಲಾಡ್.
2. ದತ್ತಂಭಟ್ ಅಪ್ಪಾ ಭಟ್, ಸಾಂಗ್ಲಿ.
3. ಜೆ. ಆರ್. ಕಂಟ್ರಾಕ್ಟರ್, ತಿಕಂಗಾರ್ಹ್.
4. ಪಿ. ವಿ. ಪಿಂಪಲ್ಖಾಡ್ಕರ್, ಇಂದೋರ್.
5. ಎ. ವ್ಯಾ. ಕುಳ್ಳರ್ಣಿ, ಇಂದೋರ್.
6. ಅಹಮ್ಮದ್ ಹುಸೇನ್ ಸಿದ್ದೀಕಿ, ಹೈದರಾಬಾದ್.
7. ಎಸ್. ಎಂ. ಷಾ, ಶೋಲಾಪುರ.
8. ಎಚ್. ಅಬ್ದುಲ್ ಹಕ್, ಭವಾಲ್ಪುರ್ ಸ್ಟೇಟ್.
9. ಎಚ್. ಆರ್. ಕೇರಾವಾಲಾ, ಮುಂಬಾಯಿ.
10. ಮೊರಾರ್ಜಿ ಸಿ. ರುಪೇರಾ, ಛೋಟಾ-ಉದೇಪುರ್.
11. ಅಬ್ದುಲ್ ಮನ್ನನ್, ಬೆನಾರಿಸ್.
12. ಎಸ್. ಎಂ. ಮೇಥಾ, ಅಹಮದಾಬಾದ್.

ಈ ಕೆಳಗಣ ಜನರೊಳಗೆ ರೂ. 135/— ಹಂಚಲಾಗಿದೆ.

1. ಆರ್. ಡಿ. ಜೋಶಿ, ಫಾಟ್ಕೊಪರ್.
2. ಡಾ॥ ರಾವ್ ಗೋವಿಂದ್ ಪ್ರಸಾದ್, ವಿಝ್ಯಾಪುರ್, (ಯು. ಪಿ.)
3. ಬಿ. ಕೆ. ಪರ್ದೇಶಿ, ಜಾಮ್ನೇರ್ (ಈ. ಖಾಂದೇಶ್)
4. ಹರಿ ಗಜಾನನ್ ಕುಂಡ್ಲೆ, ವಾರ್ಧಾ.

ಸ್ವಂತವಾದ ತನ್ನದೊಂದು ಮಗುವಿಗಾಗಿ ಆಕೆ ಹಲುಬುತ್ತಾಳೆ.

ಆಕೆಗಿದು ಎಷ್ಟು ಸಂತೋಷಕರವಾದ ನೋಟ! ಆಡುವ ಮಕ್ಕಳ ಈ ಚಿಕ್ಕ ಗುಂಪು!

ಇವುಗಳ ನಡುವೆ ತನ್ನ ಸ್ವಂತ ಮಗುವನ್ನು ಆಕೆ ಕಾಣುತ್ತಿದ್ದಾಳೆಯೇ? ಇಲ್ಲ, ದುರದೃಷ್ಟವಶದಿಂದ ಇಲ್ಲ, ಏಕೆಂದರೆ ಆಕೆಗೊಂದು ಮಗುವಿನ್ನೆಂಬ ಸೌಭಾಗ್ಯವಿನ್ನೂ ಇಲ್ಲ. ಆಕೆಯ ಬಂಜೆತನದ ಸ್ಥಿತಿಯು ಬಹುಕಾಲದಿಂದ ಅಸಡ್ಡೆ ಮಾಡಿರುವ ಯಾವುದೋ ಗರ್ಭಾಶಯದ ದೋಷದಿಂದಲೇ ಉಂಟಾಗಿರಬೇಕು. ಹೇಗೂ, ಆಕೆ ನಿಜವಾಗಿಯೂ 'ಲೋಧ್ರ'ದಲ್ಲಿ ವಿಶ್ವಾಸವಿರಿಸಬಲ್ಲವಳಾದುದರಿಂದ, ನಿರಾಶಳಾಗಬೇಕಾದುದಿಲ್ಲ. 'ಲೋಧ್ರ'ವು ಆಕೆಯ ಆರೋಗ್ಯವನ್ನು ಕಾಪಾಡಿ, ಸಂತಾನಸೌಭಾಗ್ಯವನ್ನಾಕೆಗೆ ನೀಡಬಲ್ಲುದು.

ಎಲ್ಲ ಕೆಮಿಸ್ಟರಲ್ಲಿಯೂ ದೊರಕುತ್ತದೆ.

JAYA LAXMI BANK, LT'D.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.
ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ವ್ಯಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿ ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರೆಟರಿ.

FOR YOUR DIAMONDS
ENQUIRE AT
SOWCAR
SRINIVAS RANGA PAI,
SOWCAR MAHAL,
Car Street,
MANGALORE.

'ಆಪತ್ತಿನಲ್ಲಿ ಸಹಿಷ್ಣುತೆ, ಮಹತ್ತ್ವದಲ್ಲಿ ದಯೆ, ದಾರಿದ್ರ್ಯದಲ್ಲಿ ಧೈರ್ಯ,—ಇವು ಮಹಾತ್ಮರಿಗೆ ಆತ್ಮಲಬ್ಧವಾದ ಸಿದ್ಧಿಗಳು.'—

(ಮಹಾಭಾರತ.)

XVIII] ಮಂಗಳೂರು, ತಾ. ೭—೭—೧೯೩೬ [೨೯
೧೮೫೮ ಧಾತು ಸಂ। ಆಷಾಢ ಬ। ೩ ಕುಜವಾರ.

ಯುರೋಪಿನ ರಾಜನೀತಿಯಲ್ಲಿ ಅಬಿಸೀನಿಯಕ್ಕೆ ಸ್ಥಾನವೆಲ್ಲಿ?

ಜಿನೇವಾದಲ್ಲಿ ನಾಟಕ. ದೊಡ್ಡ ರಾಷ್ಟ್ರಗಳ ಮತ್ತೂ ಚಿಕ್ಕ ರಾಷ್ಟ್ರಗಳ ಗದಿಬಿಡಿಯ ಮಾತುಗಳು ಕೇಳಿಬರುತ್ತಿವೆ. ಅಬಿಸೀನಿಯಾ ಚಕ್ರವರ್ತಿಗಳು, ಸ್ಫೂರ್ತಿದಾಯಕವೂ, ಕರುಣಾಜನಕವೂ ಆದುದೊಂದು 'ಅಪೀಲ್' ಮಾಡಿಕೊಂಡಿದ್ದಾರೆ. 'ಸ್ಯಾಂಕ್ಶನು'ಗಳ ವಿಸರ್ಜನೆ, ಇಟೆಲಿಯ ದಿಗ್ವಿಜಯದ ಒಪ್ಪಿಗೆ ಇವುಗಳಲ್ಲಿ ಇಟೆಲಿಯ ಮನೋರಥಸಾಧನೆಯೂ, ಅಬಿಸೀನಿಯದವರ ಆಶಾಭಂಗವೂ ಎರಡೂ ಆಗುವಂತೆ ತೋರುತ್ತಿದೆ. ಇದೇನೂ ಆಶ್ಚರ್ಯವಲ್ಲ. ಸೋತು ಮೂಲೆಗೆ ಕುಳಿತ, ಅಧಿಕಾರನಷ್ಟವಾಗಿ, ಪರತಂತ್ರವಾಗಿರುವ ಒಂದು ಜನಾಂಗದಿಂದ, ಇನ್ನು ಆಗುವ ಉಪಕಾರವಾದರೂ ಏನು? ನಿವೃತ್ತರಾದ ಅಧಿಕಾರಿಗಳ ಆಶ್ರಯವನ್ನಾದರೂ ಯಾರೇಕೆ ಮಾಡಬೇಕು? ಇದರಿಂದಲೇ ಯುರೋಪಿನ ರಾಜನೀತಿಯಲ್ಲಿ ಅಬಿಸೀನಿಯಕ್ಕೆ ಸ್ಥಾನವೂ,' ಮಾನವೂ ಎರಡೂ ಇಲ್ಲದಂತಾಗಿದೆ.

ಮೊದಲಿನಿಂದಲೂ, ಯುದ್ಧವು ಆರಂಭವಾದಂದಿನಿಂದಲೂ, ಅಬಿಸೀನಿಯದ ವಿಷಯದಲ್ಲಿ ಕೃತ್ರಿಮ ಸಂಧಾನವು,—ಒಳಗೊಂದು, ಹೊರಗೊಂದು ನಡೆದೇ ಇದೆ. ಮುಖ್ಯವಾಗಿ, ಕಾರ್ಯಜಾಣರಾದ ಫ್ರೆಂಚರ ಕಣ್ಣುಕಟ್ಟಿನ ಮನೋವೃತ್ತಿಯೂ, ಇಬ್ಬಾಯಿಯ ಧೋರಣೆಯೂ ಅಬಿಸೀನಿಯದ ಧ್ವಂಸಕಾರ್ಯವನ್ನು ಪೂರ್ಣಗೊಳಿಸಿದೆ. ಫ್ರಾನ್ಸ್, ಅಬಿಸೀನಿಯದ ಹಿತಸಾಧನೆಯ ವಿಷಯದಲ್ಲಿ, ಕೊಂಚವೂ ಶ್ರದ್ಧೆ ಇಡಲಿಲ್ಲ. ಅದಕ್ಕೆ ಅಬಿಸೀನಿಯದಿಂದೇನೂ ಆಗಬೇಕಾಗಿರಲಿಲ್ಲ. ಅದು ಇಂಡಿಯಾ ಸಾಮ್ರಾಜ್ಯದ ವಿಷಯದಲ್ಲಿ ಚಿಂತಿಸಬೇಕಾಗಿರಲಿಲ್ಲ; ಅದಕ್ಕೆ ವ್ಯಾಪಾರಮಾರ್ಗಗಳ ಯೋಜನೆ ಇರಲಿಲ್ಲ. ತಾಣಾ ಸರೋವರವು ಯಾರ ಆಡಳಿತದಲ್ಲಿದ್ದರೂ, ಫ್ರಾನ್ಸಿಗೇನೂ ಕೊರತೆ ಇರಲಿಲ್ಲ. ಅದಕ್ಕೆ ಒಟ್ಟಿನಲ್ಲಿ ಕರುಳಿಗೆ ನಾಟಿ ಹೋಗಿದ್ದ ಬೆದರಿಕೆಯೊಂದೇ—ಜರ್ಮನಿಯದು! ಅದಕ್ಕೋಸ್ಕರ, ಫ್ರಾನ್ಸು ಇಟೆಲಿಯನ್ನು ಕಟ್ಟಿಕೊಳ್ಳಬೇಕಾಯಿತು—ಜೋಗಿ ಜೋಗಿಯನ್ನಪ್ಪಿಕೊಂಡಂತೆ! ಇದರಿಂದಲೇ, ಇಟೆಲಿಯು ವಿರುದ್ಧವಾಗಿ, ಜನಾಂಗ ಸಂಘದಲ್ಲಿ ಫ್ರಾನ್ಸು, ಧೈರ್ಯದಿಂದ, ನಿರ್ವಂಚನೆಯಿಂದ ಬಾಯಿತ್ತದೆ ಹೋಯಿತು. ವಸ್ತುತಃ, ಫ್ರಾನ್ಸ್ ಇದರಲ್ಲಿ ಮಾಡಿದ ಅಗಾಧ ಕೆಲಸವೇನೆಂದರೆ, ತಾನು ಜನಾಂಗ ಸಂಘದ ಪರವಾಗಿ ಹೋರಾಡಿದಂತೆ ಹೊರಗೆ ತೋರಿಸಿಕೊಂಡು, ಒಳಗೊಳಗೆ ಬ್ರಿಟನು ತನ್ನ ಸಾಲಿಗೆ ಬರುವಂತೆ, ಹೆಗ್ಗಣದ ಹಾಗೆ ಬಿಲ ಕೊರೆದುದೇ. ಇದಕ್ಕೆ ಲಾವಲ್—ಹೋರರ ಸಂಧಿಯೇ ಸಾಕ್ಷಿ!

ಈ ರೀತಿ, ಫ್ರಾನ್ಸ್, ಪರರ ಮನೆಯಳಿದರೂ ಚಿಂತ್ಯವಿಲ್ಲೆಂದು ಸ್ವಕಾರ್ಯಸಾಧನೆಯ ಸಲವಾಗಿ, ಆಷಾಢಭೂತಿಯ ವೇಷ ತಾಳಿ, ಶಕುನಿತಂತ್ರ ಹೂಡಿದ ಕಾರಣದಿಂದ, ಫ್ರಾನ್ಸಿನ ಬಲಗೈಯಾದ ಬ್ರಿಟನೂ ತನ್ನ ನಿಲೆಯನ್ನು ಬಿಟ್ಟು, ಕೇಳಬಾರದ ಹೆಸರಿಗೆ ತಲೆಯೊಡ್ಡಬೇಕಾಯಿತು. ಪ್ರಪಂಚದ ಶಾಂತಿಸ್ಥಾಪನೆ, ಚಿಕ್ಕ ರಾಷ್ಟ್ರಗಳ ಉದ್ಧಾರ ಮೊದಲಾದ ಗಂಭೀರಶಬ್ದದ ಉಪನ್ಯಾಸಗಳೆಲ್ಲವೂ, ಸಂಘದ ಕಟ್ಟಡದಲ್ಲಿ ಅಬ್ಬರಿಸಿ, ಮರುಧ್ವನಿ ಎಬ್ಬಿಸಿ, ಅಂತರಿಕ್ಷದಲ್ಲಿ ವಿಲೀನವಾಯಿತು. 'ಸ್ಯಾಂಕ್ಶನು'ಗಳು ಹುಟ್ಟುವಾಗಲೇ ನಿರ್ಜೀವವಾಗಿ ಜನಿಸಿ, ಕಣ್ಣುಮುಚ್ಚಾಲೆಯ ಆಟವಾಡಿ, ಇಟೆಲಿಯನ್ನು ಒಂದಿಷ್ಟೂ ಜಗ್ಗಿಸಲಾರದೆ, ಅಬಿಸೀನಿಯಕ್ಕೇನೋ ಮಹೋಪಕಾರವನ್ನು ಮಾಡಿದೆನೆಂದು ತಾನೇ ಹೊಗಳಿಕೊಂಡು, ಕೊನೆಗೆ ಅವತಾರಸಮಾಪ್ತಿಯನ್ನು ಮಾಡಿಕೊಳ್ಳುವ ಹಾಗಾಯಿತು. ಮತ್ತೆ ಪರಿಭ್ರಮೆಗೊಂಡ ಆ ಬ್ರಿಟಿಶ್ ಜನತೆಯಾದರೂ, ಒಮ್ಮೆ, ರುದ್ರಾವತಾರ ತಳೆದು, ಸರ್ ಸ್ಯಾಮುವೇಲ್ ಹೋರರ ರಾಜಿನಾಮೆಗೆ ಕಾರಣವಾದರೂ, ಮತ್ತೊಮ್ಮೆ, ಹೋರರಿಗೂ ಮಿಗಿಲಾದ ಸಾಹಸಕಾರ್ಯಗಳನ್ನು ಮಾಡಿ ಧನ್ಯರಾದ ಮಿ. ಈಡನ್ ಸಾಹೇಬರು ಮಾಡಿದುದೇ ಸರಿ ಎಂದು ಒಪ್ಪಿಕೊಂಡು, ವಿದೂಷಕನಂತೆ, ತನ್ನ ಮನೋದೌರ್ಬಲ್ಯವನ್ನು ಸೂಚಿಸಿ ಪುಣ್ಯ ಪಡೆಯಿತು. ಒಂದೇ ಒಂದು ಕರೇ ಜನಾಂಗದ ಯಾಗದಲ್ಲಿ, ಬಿಳಿ ಜನಾಂಗಗಳ ಕಾರ್ಯಸಾಧನೆ, 'ಡೆಪ್ಲೊಮೆಸಿ'ಗಳ ಚಾಕಚಕ್ಯವೂ, ಜನಾಂಗಸಂಘೆದ ಉಚ್ಚ ಆರ್ದಶಗಳ ಅನುಸರಣೆಯ ಕುರಿತಾದ ಠಕ್ಕುಭಕ್ತಿಯೂ, ಪ್ರಪಂಚದ ಎದುರಿಗೆ ಹೇಗೆ ನಲಿದಾಡುವಂತಾಯಿತು, ನೋಡಿ!

ಇನ್ನು, ಜನಾಂಗಸಂಘವು ಅಬಿಸೀನಿಯವನ್ನು ಉದ್ಧಾರ ಮಾಡುವ ಸಂಭ್ರಮವೇನೆಂದು ತಿಳಿದೇ ಇದೆ. ಫ್ರಾನ್ಸ್ ಹೇಗೂ ಮೊದಲಿಂದಲೂ ಇಟೆಲಿಯ ಕೈ. ಈಗ ಬ್ರಿಟನಿಗಾದರೂ, ಇಟೆಲಿಯೊಡನೆ ಕಲಹವೇತಕ್ಕೆ? ಅಬಿಸೀನಿಯದ ಕಥೆ ಮುಗಿಯಿತು; ಇಟೆಲಿ ಗೆದ್ದಿತು; ಸ್ಯಾಂಕ್ಶನುಗಳು ವಿಫಲವಾಯಿತು. ಇನ್ನೂ ಇಟೆಲಿಯೊಡನೆ ಮನಸ್ತಾಪ ಕಟ್ಟಿಕೊಂಡು, ಮೆಡಿಟರೇನಿಯನ್ ಸಮುದ್ರದ ಕುರಿತು ಚಿಂತೆಗೀಡಾಗುವ ಆವಶ್ಯಕತೆಯೇನು? ಅಬಿಸೀನಿಯಾ ಚಕ್ರವರ್ತಿಗಳ 'ಅಪ್ಪೀಲ್' ಅಲ್ಲಿರಲಿ; ಅವರು ಈಜಾಡಲಿ; ಮುಳುಗಲಿ; ಯಾರಿಗೆ ಬಂದ್ದ ಸಂಕಟವೇನು? ಚಿಕ್ಕ ರಾಷ್ಟ್ರಗಳ ಗತಿ ಏನಾದರೇನು? ಒಂದು ಕರೀ ಜನಾಂಗಕ್ಕಾಗಿ, ಅದರ ರಕ್ಷಣೆಗಾಗಿ, ಬಿಳಿ ತೊಗಲು ಗಂಡಾಂತರಕ್ಕೆ ಒಳಗಾಗಬೇಕೇ? ಬಿಳಿಯವರ ರಾಜ್ಯಗಳು, ಅವರವರ ಜಗಳಗಳಿಂದ, ಅಪಾಯಕ್ಕೆ ಗುರಿಯಾಗುವಾಗ, ಆಗ ಬೇಕಾದರೆ, ಪರಸ್ಪರ ಸಹಕಾರದ ಮಾತನ್ನೆತ್ತಿ, ಕರಿಯವರ ಸಹಾಯವನ್ನು ಹಾರೈಸಿದರೆ ಸಾಲದೇ? ಆ ಸಹಾಯಕ್ಕೆ ಪ್ರತಿಯಾಗಿ, 'ಕೃತಜ್ಞರಾಗಿದ್ದೇವೆ' ಎಂದು ಬಾಯಲ್ಲಿ ಬುರುಡೆ ಬಿಟ್ಟರೆ ಸಾಲದೇ? ಇಂದಿನ ಯುರೋಪೀಯ ರಾಜನೀತಿಯ ಧರ್ಮಶಾಸ್ತ್ರವು, ಪ್ರಪಂಚಕ್ಕೆ ಸಾರುತ್ತಿರುವ ಗೌರವಾಸ್ಪದವಾದ 'ಕೊಟ್ಟು ತೆಗೆದುಕೊಳ್ಳುವ ನೀತಿ'ಯು ಎಂದರೆ ಇದಿಷ್ಟೇ.

ಜನಾಂಗಸಂಘ ನಾಟಕದ ಮುಂದಿನ 'ಟ್ರಾನ್ಸ್‌ಫರ್' ದೃಶ್ಯಗಳು ಎಂತಹವುಗಳೆಂದು ಕಾದು ತಿಳಿಯಬೇಕಾಗಿದೆ. ಇಟೆಲಿ ತನ್ನ ಕೊಳ್ಳೆಯ ಪಾಲನ್ನು, ಅಥವಾ ಪ್ರಸಾದವನ್ನು ಹಂಚುವ ರೀತಿಯ ಮೇಲೆ, ಜನಾಂಗಗಳ ಹಾವಭಾವವು, ಯುರೋಪಿನ ಶಾಂತಿರಕ್ಷಣೆಯು ಹೊಂದಿಕೊಂಡಿದೆ. ಜನಾಂಗಸಂಘವು ಪ್ರಕೃತ ತನ್ನ ಬಾಗಿಲು ವಿಶಾಲವಾಗಿ ತೆರೆದಿಟ್ಟು, ಕಾದು ಬಿದ್ದಿರುವುದು ಮುಖ್ಯ ಆ ಪ್ರಸಾದದ 'ಬಟ್ವಾಡೆ'ಗೇ. ಅದಕ್ಕೂ ಘನವಾದ ಉದ್ದೇಶವು ಅದಕ್ಕೆ ಕಾರ್ಯತಃ ಇಲ್ಲ. ಇದಾದ ಬಳಿಕ, ಜನಾಂಗ ಸಂಘದ ಚಟುವಟಿಕೆ ಯಾವ ಕಡೆ ತಿರುಗುವುದೋ ಅಥವಾ ಬಾಗಲು ಮುಚ್ಚುವುದೋ, ಹೇಳಲಾಗದು. ಮುಖ್ಯ, ರಾವಣಸನ್ನಾಸಿಗಳಾದ ಕೆಲವು ಜನಾಂಗಗಳು,

ಮಂಗಳೂರು

ಇಲ್ಲಿಯ ಮ್ಯುನಿಸಿಪಾಲಿಟಿಯ ಯಾವತ್ತು ಶಾಖೆಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳದೊಂದು ಸಂಸ್ಥೆಯು 'ಮ್ಯುನಿಸಿಪಲ್ ಎಂಪ್ಲೋಯಿಸ್ ಎಸೋಸಿಯೇಶನ್' ಎಂಬ ನಾಮಕರಣದೊಡನೆ ಸ್ಥಾಪಿತವಾಗಿ ಕಳೆದ ತಾ. ೧೧ರಲ್ಲಿ ಇದರ ಮೊದಲಿನ ಮೀಟಿಂಗ್ ಜರುಗಿತು. ಸಂಘದ ನಿಯಮನಿಬಂಧನೆಗಳನ್ನು ರಚಿಸಲು ಒಂದು ಸಮಿತಿ ಏರ್ಪಾಡಾಯಿತು.

ಈ ಸಾರಿಯ ಎಂ. ಏ. ಪರೀಕ್ಷೆಯಲ್ಲಿ ಕೃತಾರ್ಥರಾದವರು—ಶ್ರೀ.ಗಳಾದ ಬಿ. ಏ. ಬೆಳಿಗ, ಯು. ಕೃಷ್ಣ ಕಿಣಿ, ಮಿ। ಎಲ್. ಸಿ. ಫೆರ್ನಾಂಡಿಸ್; ಬಿ. ಎಸ್. ಸಿ. (ಆನರ್ಸ್) ಪರೀಕ್ಷೆಯಲ್ಲಿ ಶ್ರೀ. ವಿ. ಜಿ. ಕೆ. ಕಾಮತರು ಕೃತಾರ್ಥರಾಗಿದ್ದಾರೆ. ಬಿ. ಎಲ್. ಪರೀಕ್ಷೆಯಲ್ಲಿ, ಸುಮಾರು ೧೫ ಮಂದಿ ನಮ್ಮವರಲ್ಲಿ, ೩ ಮಂದಿ ಮಾತ್ರ ಪಾಸಾಗಿರುವಂತೆ ತಿಳಿದುಬರುತ್ತದೆ.

(೧೩ನೇ ಪುಟಕ್ಕೆ ಮುಂದರಿಸಿಯದೆ)

ಈ ಪವಿತ್ರ ಮಂದಿರದಲ್ಲಿ, ಪಾಲಿನ ಪಂಚಾಯಿತಿ, ಸುಲಿಗೆಗಳ ಪುರಸ್ಕಾರವೇ ಮೊದಲಾದ ಪಾವನ ವಿಷಯಗಳ ಕುರಿತು ಚರ್ಚಿಸುತ್ತ, ಎಲೆಯಡಿಕೆ ಜಗಿಯುತ್ತ ಕುಳ್ಳಿರುವ ವರೆಗೆ, ಈ ಸಂಘದ ಮಂದಿರವನ್ನು ಮುಚ್ಚಲು ಯತ್ನವಿಲ್ಲ. ಪಾಪ! ಸಂಘವೂ ನಡೆಯಲಿ; ಸಂಘದ ನಾಟಕವೂ ನಡೆಯಲಿ!

ದಕ್ಷಿಣ ಕನ್ನಡದ ಎಲಿಮೆಂಟರಿ ಆದಿದ್ರಾವಿಡ ಉಪಾಧ್ಯಾಯರ ಮಹಾಸಭೆ

ಕಳೆದ ಜುಲ್ಯಾ ತಾ. ೫ನೇ ಆದಿತ್ಯವಾರ ಪ್ರಾತಃ ಗಂಟೆ ೧೦॥ಗೆ ಸರಿಯಾಗಿ, ಮೇಲ್ಕಂಡ ಉಪಾಧ್ಯಾಯರುಗಳ ಮಹಾಸಭೆಯು ಇಲ್ಲಿಯ ಡಿ. ಸಿ. ಮಿಶನಿನ ಮಂದಿರದಲ್ಲಿ ನೆರೆದಿದ್ದಿತು. ಜಿಲ್ಲೆಯ ಹಲವು ಭಾಗಗಳಿಂದ ಸುಮಾರು ೪೦ ಮಂದಿ ಆದಿದ್ರಾವಿಡ ಅಧ್ಯಾಪಕರು, ಈ ಸಭೆಗೆ ಬಂದಿದ್ದರು. ನಮ್ಮ ವಿದ್ಯಾಂಗದ ಜಿಲ್ಲಾ ಅಧಿಕಾರಿಗ್ಳಾದ ಶ್ರೀಮಾನ್ ಕಣ್ಣಪ್ಪ, ಎಂ. ಏ., ಎಲ್. ಟಿ.ಯವರು, ಈ ಮಹಾಸಭೆಯ ಆರಂಭೋತ್ಸವನ್ನು ಜರುಗಿಸುತ್ತ, 'ಹರಿಜನ ಮಕ್ಕಳ ಸಾಮಾಜಿಕ, ನೈತಿಕ ಜೀವನದ ಬೆಳವಣಿಗೆಗಾಗಿ, ಹರಿಜನ ಉಪಾಧ್ಯಾಯನೃಂದವು, ಯಾವ ರೀತಿಯಲ್ಲಿ ಕೆಲಸ ಮಾಡಬಹುದು?' ಎಂಬುದರ ಕುರಿತು, ಸುಲಲಿತವಾದ, ಉಪಯುಕ್ತವೂ, ಉದ್ದಾನವೂ ಆದ ಒಂದು ಭಾಷಣ ಮಾಡಿದರು.

ಈ ಸಭೆಯ ಮುಂದೆ ಬಂದ ಸುಮಾರು ೧೧ ಠರಾವುಗಳಲ್ಲಿ ಮತಾಂತರದ ಪ್ರಶ್ನೆಯು ಬಹು ತೀವ್ರವಾದ ಚರ್ಚೆಗೊಳಗಾಗಿ, ಮತಾಂತರವು ಸಲ್ಲದೆಂದು ಬಹುಮತದಿಂದ ನಿಷ್ಕರ್ಷೆಯಾಯಿತು.

ಈ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಯು. ಮಂಗೇಶ ರಾವ್, ಬಿ. ಏ., ಎಲ್. ಟಿ. ಇವರು, ಕವಿ ರವೀಂದ್ರನಾಥ ಠಾಗೂರರವರಿಂದ ಆಯ್ದು ವಚನಗಳನ್ನೆತ್ತಿಕೊಂಡು ವಿವರಿಸುತ್ತ, ಸ್ವಪ್ರಯಾಸದ ಫಲಕ್ಕಾಗಿ ಹರಿಜನ ಉಪಾಧ್ಯಾಯರು ದುಡಿಯುವುದು ಅಗತ್ಯವಿದೆ ಎಂದೂ, ಈ ಅಧ್ಯಾಪಕರು ತಮ್ಮ ರಜಾ ಕಾಲದಲ್ಲಿ, ತಮ್ಮ ಜನಸಂಖ್ಯೆಯ ಮತ್ತೂ ಜನವರ್ಗದ ಆರ್ಥಿಕ ಸ್ಥಿತಿಯ ಲೆಕ್ಕಾಚಾರವನ್ನು ಸಂಗ್ರಹಿಸುವವರಾದರೆ, ಆ ಅಂಕೆ ಸಂಖ್ಯೆಗಳನ್ನು, ಸರಕಾರದ ಮತ್ತೂ ದಾನಧರ್ಮಗಳನ್ನು ನೀಡುವ ಸಂಸ್ಥೆಗಳ ಮುಂದಿರಿಸಿ, ತನ್ಮೂಲಕ ಅವುಗಳಿಂದ ಸಾಧ್ಯವಿರುವ ಸಹಾಯವನ್ನು ಪಡೆಯಲೂ ಅನುಕೂಲಿಸಬಹುದೆಂದೂ ನಿರೂಪಿಸಿ, 'ಮತಾಂತರ'ದ ವಿಷಯದಲ್ಲಿ 'ನಿಜವಾದ ವಿಶ್ವಾಸವಿದ್ದು, ಒಬ್ಬನು ಒಂದು ಧರ್ಮವನ್ನು ಸ್ವೀಕರಿಸುವುದಾದರೆ, ಅದು ಖಂಡನೀಯವಲ್ಲ; ಆದರೆ ಸಾಮಾಜಿಕ ಸೌಕರ್ಯಗಳಿಗಾಗಿ ಮಾತ್ರವೇ ಮತಾಂತರವನ್ನು ಹೊಂದುವುದು ಶೋಚನೀಯ. ಈ ದೃಷ್ಟಿಯಿಂದ, ಯಾವ ಧರ್ಮವಾದರೂ, ಈ ಮತಾಂತರಕಾರ್ಯವನ್ನು, ಕೆಲಕೆಲವು 'ಸಾಮಾಜಿಕ ರಿಯಾಯಿತಿ'ಗಳ ಮೂಲಕ ಪ್ರೋತ್ಸಾಹಿಸುವುದಾಗಿದ್ದರೆ, ಅದು ಬರೇ 'ತಾತ್ಕಾಲಿಕೆ', ಬರೇ 'ನೆರೆ ನೀರೆ'ಂದು' ತಿಳಿದುಕೊಳ್ಳಬೇಕು. ಮತಾಂತರ ಹೊಂದಿದ ಮೇಲೆ ಆ 'ರಿಯಾಯಿತಿ'ಗಳು ದೊರಕುವ ಭರವಸೆ ಏನೂ ಇಲ್ಲ. ಉದಾಹರಣೆಗಾಗಿ, ಕೆಥೊಲಿಕರು, ಹೀಗೆ ಮತಾಂತರ ಹೊಂದಿದವರಿಗೆ, ತಮ್ಮ ಇಂಗ್ರೆಜಿಗಳಲ್ಲಿ, ಸಮಾನ ಸ್ಥಾನಮಾನಗಳನ್ನು ಕೊಡಲು ಬಿಡದೆ, ಕಾದಾಡುವುದನ್ನು ನೋಡಬಹುದು; ಹಾಗೂ, ಮುಸ್ಲಿಮರಲ್ಲಿ, ಒಂದೇ ಭೋಜನಪಾತ್ರದಲ್ಲಿ, ಈ ಮತಾಂತರ ಹೊಂದಿದವರಿಗೆ, ಗೌರವದ ಪಾಲು ದೊರಕದಿರುವುದೂ ಅಪರೂಪವಲ್ಲ' ಎಂದು ತಿಳುಹಿಸಿ, ಅನೇಕ ಹಿತಸೂಚನೆಗಳೊಂದಿಗೆ, ತಮ್ಮ ಅಧ್ಯಕ್ಷಭಾಷಣವನ್ನು ಮುಗಿಸಿದರು.

ಈ ಕಾನ್ಫರೆನ್ಸಿನ ಫಲವಾಗಿ, ಈ ಉಪಾಧ್ಯಾಯರ ಸಂಘವೊಂದು ಸ್ಥಾಪನೆಯಾಗಿ, ಆ ಸಂಘದ ಆಡಳಿತಕ್ಕಾಗಿಯೂ, ತಕ್ಕ ನಿಯಮನಿಬಂಧನೆಗಳ ರಚನೆಗಾಗಿಯೂ ಒಂದು ಸಬ್ ಕಮಿಟಿಯ ನಿರ್ಮಾಣವಾಯಿತು.

ಹಿಂದೂದೇಶ

ಬರುವ ಸೆಪ್ಟೆಂಬರದಲ್ಲಿ, ವೈಸರಾಯರು ಕೇಂದ್ರ ನ್ಯಾಯ ವಿಧಾಯಕ ಸಭೆಯಲ್ಲಿ ಮಾಡುವ ಪ್ರಥಮ ಭಾಷಣವು ಭಾರತದ ಲ್ಲೆಲ್ಲೂ ಕೇಳಿಸುವಂತೆ ಬ್ರಾಡ್‌ಕಾಸ್ಟ್ ಆಗುವುದು.

ಸಿಂಧ್ ಎಡ್ವೈಜರಿ ಕೌನ್ಸಿಲಿನ ಚೆಯರ್‌ಮ್ಯಾನರಾದ ಸರ್ ಗುಲಾಮ ಹುಸೇನ್ ಹಾಯದುತುಲ್ಲಾರವರು ನುಡಿದ ಕೆಲವು ಮಾತುಗಳಿಂದ ಮನನೊಂದವರಾಗಿ, ಕರಾಚಿಯ ಪತ್ರಿಕಾ ಉದ್ಯೋಗಿಗಳ ಸಂಘವು, ಆ ಮಾತುಗಳನ್ನು ಅವರು ಹಿಂದೆಗೆಯ ಬೇಕೆಂದೂ, ಹಿಂದೆಗೆಯದಿದ್ದರೆ, ಅವರ ಯಾವ ಭಾಷಣಗಳನ್ನೂ ಮುದ್ರಾಲಯಗಳು ಪ್ರಕಟಿಸಬಾರದೆಂದೂ ಠರಾವು ಮಾಡಿದೆ.

ಬರುವ ಕಾಂಗ್ರೆಸಿನ ಸಮಯದಲ್ಲಿ ಸಿದ್ಧರಾಗಿರುವಂತೆ, ಸ್ತ್ರೀಪುರುಷ ವಾಲಂಟಿಯರುಗಳಿಗೆ ಶಿಕ್ಷಣಕೊಡುವ ಹಾಗೆ, ಅಹ ಮ್ಮದಾಬಾದಿನಲ್ಲಿ ಒಂದು ಶಿಕ್ಷಣಶಿಬಿರವು ಸ್ಥಾಪನೆಯಾಗಿದೆ.

ಕ್ವೆಟ್ಟದಲ್ಲಿ, ಬೆಂಕಿಯಲ್ಲಿ ನಡೆಯುವುದರಲ್ಲಿ ಪ್ರಸಿದ್ಧನಾದ ಶೇಕ್ ಫಜಲ್ ಎಲಿಯಾ ಎಂಬಾತನು, ಅಲ್ಲಿನ ಮೇಯರ್ ಮತ್ತೂ ಅನೇಕ ಮಂದಿ ಆಢ್ಯಪ್ರಮುಖರ ಮುಂದೆ, ೬ ಮಂದಿ ಬೆಂಕಿಯಲ್ಲಿ ನಡೆಯುವ ಹಾಗೆ ಮಾಡಿ, ಬೆರಗುಗೊಳಿಸಿದನು. ಯಾರಿಗೂ ಗಾಸಿಯಾಗಲಿಲ್ಲ.

ಮೈಮನ್‌ಸಿಂಗ್ ಪ್ರಾಂತದಲ್ಲಿ, ಕೆಲವು ಮಂದಿ ಪೊಲೀಸ್ ಅಧಿಕಾರಿಗಳು ಸೇರಿ, ಒಬ್ಬ ಗ್ರಾಮಸ್ಥನ ಕೊಲೆಮಾಡಿದರೆಂದು, ವಿಚಾರಣೆಗೆ ಆರಂಭವಾಗಿದೆ.

ಜಲಪಾಯಿಗುರಿ ಎಂಬಲ್ಲಿ ಒಬ್ಬ ಆನರರಿ ಮ್ಯಾಜಿಸ್ಟ್ರೇಟನ್ನು, ಲೈಸೆನ್ಸ್ ಇಲ್ಲದೆ ಕೆಲವು ಆಯುಧಗಳನ್ನು ಇಟ್ಟುಕೊಂಡಿದ್ದಾ ನೆಂದು ಪೋಲೀಸರು ಝಡ್ತಿಗೆ ಬಂದಾಗ, ಆತನು ಪೋಲೀಸರ ಮೇಲೆ ಗುಂಡು ಹಾರಿಸಿದನೆಂದು ಆತನ ಕೈದಾಗಿದೆ.

ಹಗ್ಗದಲ್ಲಿ ಮೇಲಕ್ಕೇರುವ ಈ ದೃಶ್ಯವನ್ನು ಸಿನೆಮಾ ಚಿತ್ರ ದಲ್ಲಿ ಎತ್ತಿಕೊಳ್ಳಲು ಅನುಕೂಲಿಸಿ ಕೊಡುವವರಿಗೆ ೭೫೦ ಪೌಂಡು ಗಳ ಬಹುಮಾನವೆಂದು ಸಿಲೋನಿನ ಒಬ್ಬ ಫಿಲ್ಮ್ ಉತ್ಪಾದಕರು ಪ್ರಕಟಿಸಿರುತ್ತಾರೆ.

ಅಬ್ದುಲ್ಲಾ ಗಾಂಧಿಯವರಿಗೆ ತಮ್ಮ ಸ್ಥಾನವನ್ನು ಬಿಟ್ಟು ಕೊಡುವುದಾಗಿ ಒಬ್ಬ ಎಂ. ಎಲ್. ಏಗಳು ತಿಳಿಸಿರುವುದಾಗಿಯೂ, ಅದಕ್ಕೆ ಗಾಂಧಿಯವರೊಪ್ಪಿರುವುದಾಗಿಯೂ ತಿಳಿದುಬರುತ್ತಿದೆ.

'ಅಮೃತಬಜಾರ್' ಪತ್ರಿಕೆಯ ಸಂಪಾದಕರಾದ ಶ್ರೀ. ತುಷಾರ್‌ಕಾಂತೀ ಘೋಷರವರು ಚಂದ್ರನಾಗೂರಿನಲ್ಲಿ, ಕಾರಿ ನಲ್ಲಿ ಪ್ರಯಾಣಮಾಡುತ್ತಿದ್ದ ಹಾಗೆ, ಅವರ ಡ್ರೈವರು, ಒಬ್ಬ ಚಿಕ್ಕ ಹುಡುಗನನ್ನು ಬೀಳಿಸಿದ. ವಿಚಾರಣೆಯಲ್ಲಿ ಡ್ರೈವರನಿಗೆ ೧ ತಿಂ ಗಳ ಸಜೆ; ೧೦೦ ರೂಪಾಯಿಗಳ ಜುಲ್ಮಾನೆಯಾಯಿತು. ಆದರೆ, ಫ್ರೆಂಚರ ರಾಜ್ಯದಲ್ಲಿ, ಆ ಡ್ರೈವರನ ತಪ್ಪು ಇದೇ ಪ್ರಥಮವಾದ್ದಾ ದುದರಿಂದ, ಫ್ರೆಂಚರ ಕಾನೂನಿನಂತೆ, ಅವನಿಗೆ ಸಜೆ ಮಾಫಿ; ಆದರೆ ಜುಲ್ಮಾನೆಯನ್ನು ಮಾತ್ರ-ಅವನಲ್ಲ- ಕಾರಿನ ಮಾಲಕ ರಾದ ಘೋಷರು ತೆರಬೇಕಾಗಿದೆ.

ತಿರುವಾಂಕೂರಿನಲ್ಲಿ ಅರ್ಧಾಣೆಯ ಪೋಸ್ಟಲ್ ಕವರೂ, ಪೈಸಾಕ್ಕಿಂತಲೂ ಕಡಿಮೆ ಬೆಲೆಯುಳ್ಳ ಕಾರ್ಡೂ ಇನ್ನೂ ಜ್ಯಾರಿ ಯಲ್ಲಿವೆ. ಮೊನ್ನೆ ಈಚೆಗೆ ಒಬ್ಬನು ಅರ್ಧ ಪೈಯನ್ನು ಮನಿಯಾ ರ್ಡರ್ ಮಾಡಿ ಕಳುಹಿಸಿದನೆಂದೂ ತಿಳಿದುಬರುತ್ತಿದೆ. ಆದರೂ, ತಿರುವಾಂಕೂರಿನಲ್ಲಿ ಬಡವರಿಗಾಗಿ ಇಷ್ಟು ಅಗ್ಗವಾದ ಪೋಸ್ಟಾ ಫೀಸುಗಳ ಪದ್ಧತಿ ಇದ್ದರೂ, ಅವು ಯೋಗ್ಯತೆಯಲ್ಲಿ ಬ್ರಿಟಿಷ್ ಇಂಡಿಯದವುಗಳಿಗೆ ಕಡಿಮೆಯಾಗಿಲ್ಲ.

ಖಾದಿಯ ಪ್ರೋತ್ಸಾಹಕ್ಕಾಗಿ, ಜಬಲ್ಪುರ ಡಿಸ್ಟ್ರಿಕ್ಟ್ ಕೌ ನ್ಸಿಲು ತನ್ನ ಪ್ರತಿಯೊಬ್ಬ ಉದ್ಯೋಗಿಯೂ, ಮೆಂಬರನೂ ಕೈ ಯಿಂದ ನೆಯಿದು ನೂತ ಖಾದಿಬಟ್ಟೆಯ ಉಡುಗೆಗಳಿಂದಲೇ ಆಫೀಸಿಗೆ ಬರತಕ್ಕುದೆಂದು ತೀರ್ಮಾನಿಸಿದೆ.

ದಿಲ್ಲಿಯಲ್ಲಿ ಟಾಂಗಾವಾಲರು, ಗಾಡಿಯವರು, ಡೋಬಿ ಗಳು ಇವರ ಮುಷ್ಕರ ಸಾಗುತ್ತಿದೆ. ಕೆಲವೊಂದು ಪುಂಡಾಟ ಗಳೂ ನಡೆಯುತ್ತಿವೆ. ಇವರದೊಂದು ಸಾರ್ವಜನಿಕ ಸಭೆ ನಡೆದು ಮುನಿಸಿಪಾಲಿಟಿಯ ಕಾರ್ಯಕ್ರಮಗಳನ್ನು ಖಂಡಿಸಲಾಯಿತ್ತು. ಇವರಿಗೆ ವೈಸರಾಯರ ಬಳಿಗೆ ತಮ್ಮದೊಂದು ಡೆಪ್ಯುಟೇಶನ್ ಕಳು ಹುವ ಯೋಚನೆ ಇದೆ. ತಂಟೆಮಾಡಿದವರೆಂದು ೩ ಮಂದಿ ಟಾಂ ಗಾವಾಲರ ಕೈದಾಗಿದೆ.

ಎಸೆಂಬ್ಲಿಯ ವಾಚ್ ಮತ್ತೂ ವಾರ್ಡ್ ಆಫೀಸರರ ಸಿವ್ವಾ ಆಫೀಸಿನಲ್ಲಿ ೫ಂಗಳಿಗೆ ೬೦೦ ರೂಪಾಯಿಗಳ ಗ್ರೇಡಿನ ಒಂದು ಕೆಲಸವು ಖಾಲಿ ಬಿದ್ದಿದ್ದು, ಅದಕ್ಕಾಗಿ ಆಗಲೇ ೫೫೦೦ ಅರ್ಜಿಗಳು ತಲಪಿವೆ— ನಿರುದ್ಯೋಗದ ಪ್ರಭಾವ.



ಪಂಜಾಬು ಸರಕಾರವು ತನ್ನ ರೈತರಿಗೆ ೧೧॥ ಲಕ್ಷದಷ್ಟು ತೀರ್ವೆ ರಿಯಾಯಿತಿಯನ್ನು. ಈ ಬಾರಿ ತೋರಿಸಿದುದೂ ಅಲ್ಲದೆ, ಲ್ಯಾಲ್‌ಪುರ ಜಿಲ್ಲೆಯವರಿಗೆಂದು ಪ್ರತ್ಯೇಕವಾಗಿ ಈಗ ೫೫,೬೪೬ ರೂಪಾಯಿಗಳ ಹೆಚ್ಚಿನ ಮಾಫಿಯನ್ನೂ ದೊರಕಿಸಿಕೊಟ್ಟಿದೆ. ಹೀಗೆ ಆ ಸರಕಾರವು ಈ ಬಾರಿ ಒಟ್ಟಿಗೆ ತೋರಿಸಿದ ತೀರ್ವೆಯ ರಿಯಾಯಿತಿ ಸುಮಾರು ರೂ. ೧೧,೪೪,೦೦೦; ಲೈಲಾಪುರ ಜಿಲ್ಲೆಗೇ ಇದರಲ್ಲಿ ೭,೬೦,೦೯೨ ರೂಪಾಯಿಗಳು.

ಗವರ್ನರರುಗಳಿಗೆ ಪೆನ್‌ಶನ್ ಕೊಡಿಸಬೇಕೆಂಬ ಚಳವಳ ವೀಗ ಬ್ರಿಟನ್ನಿನಲ್ಲಿ ಎದ್ದಿದೆ.

ಸಾಲೀಪುರದ ಒಸೂರೀಶ್ವರ ಗ್ರಾಮದ ರಥೋತ್ಸವಕಾಲ ದಲ್ಲಿ ೩ ಮಂದಿ ರಥದ ಅಡಿಗೆ ಬಿದ್ದು ನಜ್ಜುಗುಜ್ಜಾಗಿ ಪ್ರಾಣ ಬಿಟ್ಟರು. ಅನೇಕರಿಗೆ ಗಾಯಗಳಾಗಿವೆ.

ಪಂಡಿತ ಮಾಳವ್ಯರು ಸಿವ್ಲಾಕ್ಕೆ ಬಂದವರು ವೈಸರಾ ಯರ ಭೇಟಿ ಮಾಡಿದರು. ರಾಜಕೀಯ ಮುಖಂಡರಲ್ಲಿ ವೈಸ ರಾಯರ ಭೇಟಿಮಾಡಿದವರಲ್ಲಿ ಇವರೇ ಮೊದಲಿನವರು. ಈ ಭೇಟಿಗೆ ರಾಜಕೀಯ ಪ್ರಾಮುಖ್ಯತೆಯನ್ನೇನೂ ಅನ್ವಯಿಸಲಾ ಗುವುದಿಲ್ಲ. ಪ್ರಾಯಶಃ ಇದರಿಂದ ಗಾಂಧಿಯವರ ಭೇಟಿಗೂ ಮಾರ್ಗವಾಗಬಹುದೆಂದು ಅಂದಾಜು.

ಇಂದೂರು ಸಂಸ್ಥಾನದಲ್ಲಿ ಶ್ರೀ. ಜಯದೇವ ಸಿಂಗ ವರ್ಮ ಎಂಬ ಸಾರ್ವಜನಿಕ ಕೆಲಸಗಾರರೊಬ್ಬರಿಂದ ಒಳ್ಳೆಯ ನಡತೆಗಾಗಿ ಜಾಮೀನು ಮುಚ್ಚಳಿಕೆ ಕೇಳಲಾಗಿದೆ. ಇವರು ಸಂಸ್ಥಾನದ ಆಡಳಿತೆಯ ವಿರುದ್ಧವಾಗಿ ಅನೇಕ ಪತ್ರಕಗಳನ್ನು ಬರೆದು ಪ್ರಸಿದ್ಧಿಗೊಳಿಸಿದವರು. ಈ ಸಂಬಂಧ ವಿಚಾರಣೆಗೆ ಗುರಿಯಾಗಲಿದ್ದು, ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿ ರುವವರು.

ಮೈಸೂರು ಶ್ರೀಮನ್ಮಹಾರಾಜರವರು ತ್ಮನ್ಮ ಪರಿವಾರ ಸಹಿತ, ಸುಕ್ಷೇಮಿಗಳಾಗಿ ಏಡನಿನಿಂದ ಹೊರಟಿರುವರೆಂದು ತಿಳಿದುಬಂದಿದೆ.

ಪೊಳ್ಳಾಚಿಯಲ್ಲಿ ವಿಪರೀತ ಮಳೆಯಿಂದ ಪ್ರವಾಹ ಬಂದು, ಒಬ್ಬ ತಾಯಿಯೂ, ಮಗುವೂ ಪ್ರವಾಹದಲ್ಲಿ ತೇಲಿ ಹೋಗಿದ್ದಾರೆ.

ದಿಲ್ಲಿಯ ಒಬ್ಬ ಸಂಗೀತ ಹಾಡುವ ಯುವತಿಯನ್ನು, ಕೆಲವು ಪಟಾನರು, ಆಕೆಯ ಮನೆಯಿಂದ, ಅಪಹರಿಸಿಕೊಂಡು ನಡೆದಿದ್ದಾರೆ. ಪೋಲಿಸ್ ತನಿಖೆ ನಡೆಯುತ್ತಿದೆ.

ಪಂಡಿತ ಜವ್ಹರಲಾಲ್ ನೆಹರೂಯವರು ಗಂಟಲು ನೋವಿನಿಂದ ಬಾಧೆಪಡುತಿದ್ದು, ಅವರಿನ್ನು ಒಂದು ವಾರ ವಿಶ್ರಾಂತಿ ತೆಗೆದುಕೊಳ್ಳುವರಾಗಿ ತಿಳಿದುಬರುತ್ತದೆ. ಶ್ರೀ ಯುತರು ಅಲ್ಲಹಾಬಾದಿಗೆ ತೆರಳಿದ್ದಾರೆ.

ಬಂಗಾಳದ ಗವರ್ನರರ ಉದ್ಯೋಗದ ಅವಧಿ ೧೯೩೭ನೇ ಇಸ್ವಿ ಅಕ್ಟೋಬರ ಅಂತ್ಯದ ವರೆಗೂ ಹೆಚ್ಚಿಸಲಾಗಿದೆ.

ಲಾಹೋರಿನಲ್ಲಿ ಉಪಾಧ್ಯಾಯರ ಸಹಿತ ರಾವಿ ನದಿಯ ಸ್ನಾನಕ್ಕೆ ಹೋಗಿದ್ದ ಮುಸ್ಲಿಂ ವಿದ್ಯಾರ್ಥಿಗಳು ೫೦ ಮಂದಿ ಯಲ್ಲಿ ಒಬ್ಬ ಹುಡುಗ ನದೀಪಾಲಾದ.

ಲಕ್ನೋ ಪ್ರಾಂತದ ಹಳ್ಳಿಗಳಲ್ಲಿ ಕತ್ತೆಕಿರುಬಗಳು ಹಿಂಡುಹಿಂಡಾಗಿ ಬಂದು ಹಾವಳಿ ಮಾಡುತ್ತಿವೆ. ಸುಮಾರು ೧೨ ಮಕ್ಕಳನ್ನು ತಿಂದುವು. ಅನೇಕ ಮಕ್ಕಳಿಗೆ ಗಾಯ ಮಾಡಿವೆ. ಶಿಕಾರಿಗೆ ಪೋಲೀಸರೂ ಗ್ರಾಮಸ್ಥರೂ ಹೊರ ಟ್ಟಿದ್ದಾರೆ.

ಸಿವ್ಲಾದ ಬಳಿ ಮಳೆಯಿಂದ ಗುಡ್ಡ ಜರಿದು, ಟ್ರೈನಿನ ಸಂಚಾರಕ್ಕೆ ಅಡ್ಡಿಯಾಗಿದೆ.

ಸಾವಿರ ವರ್ಷಗಳಿಗೂ ಹಿಂದೆ, ಹಿಂದುಸ್ಥಾನದಿಂದ ಟಿಗೆ ತೆಗೆದುಕೊಂಡು ಹೋಗಿದ್ದ ಬೌದ್ಧ ತತ್ವಜ್ಞಾನಿಗಳ ಕೀರ್ತಿ ಮೊದಲಾದ ಅಮೂಲ್ಯ ಧಾರ್ಮಿಕ ಗ್ರಂಥ ಸ್ಕೃತ ಮೂಲ ತಾಳೆಯೋಲೆಯ ಪ್ರತಿಗಳನ್ನು ರಾ ರಾಹುಲ ಸಂಕೃತ್ಯಾಯನ ಎಂಬ ಒಬ್ಬ ಬೌದ್ಧ ಭಿ ಬಹಳ ಸಾಹಸದಿಂದ ಹಿಂದುಸ್ಥಾನಕ್ಕೆ ಪುನಃ ತಂದಿದ್ದಾರೆ. ಈ ಭಿಕ್ಷುಗಳು, ತಮ್ಮೊಂದಿಗೆ ಒಬ್ಬ ಫೋಟೋಗ್ರಾಫರನ್ನು ಕರೆದುಕೊಂಡು ಹೋಗಿದ್ದು, ಬಹಳ ವೆಚ್ಚದಿಂದ, ಆ ಎಲ್ಲ ಸಂಪುಟಗಳ ಭಾವಚಿತ್ರಗಳನ್ನೂ ತೆಗೆಸಿದ್ದಾರೆ. ಈ ಗ್ರಂಥ ಗಳು, ಬಿಹಾರಿನ ರಿಸರ್ಚ್ ಸಂಘದ ಆಶ್ರಯದಲ್ಲಿ ಬೇಗನೆ ಪ್ರಕಟವಾಗುವುವು.

ಸಂಯುಕ್ತ ಪ್ರಾಂತದ ಷಹಜಹಾನ್ ಜಿಲ್ಲೆಯಲ್ಲಿ ಭಾರೀ ಮಳೆಯಿಂದ ಕೆಲವು ಕಡೆ ರೈಲ್ವೆ ಲೈನುಗಳೂ, ಕೆಲವು ಸೇತು ವೆಗಳೂ, ೧೨ ಹಳ್ಳಿಗಳೂ ಬಳಿದು ಹೋಗಿ, ಸಾವಿರ ಮುಂದಿ ಜನಜಾನುವಾರುಗಳು ಅನಾಥವಾಗಿದ್ದಾವೆ.

(೧೩ನೇ ಪುಟದಿಂದ)

ಮಂಗಳೂರು ಮಿತ್ರಮಂಡಳಿಯ ವಾರ್ಷಿಕ ಮಹಾಸ ಜುಲಾಯಿ ತಾರೀಕು ೧೩ನೇ ಆದಿತ್ಯವಾರ ಸಾಯಂ. ಗಂಟೆ ೫ ಕೆನರಾ ಹೈಯರ್ ಸ್ಕೂಲಿನಲ್ಲಿ ಜರಗುವುದು. ಸದಸ್ಯರೆಲ್ಲರೂ ಬಂದು ಸಹಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ. ಕಾರ್ಯಕ್ರಮ ೧. ಗತ ವರ್ಷದ ಲೆಖ್ಖಪತ್ರ ಮತ್ತು ವರದಿ, ೨. ಹೊಸ ವರ್ಷದ ಅಧಿಕಾರಿಗಳ ಚುನಾವಣೆ, ೩. ಸೂಚನೆಗಳು ಮತ್ತು ಠರಾವುಗಳು—ಜೆ. ವಾಮನ ಭಟ್ಟ, ಪ್ರೆಸಿಡೆಂಟ್.

ನಮ್ಮ ಜಿಲ್ಲೆಯವರಾದ ಮದ್ರಾಸ್ ಸಿಟಿ ಸಿವಿಲ್ ಜಡ್ಜರಾಗಿ ಶ್ರೀ. ಉಚ್ಚಿಲ ರಾಮಪ್ಪ, ಬಿ. ಎ., ಬಿ. ಎಲ್.ರವರಿಗೆ 'ರಾವ್ ಬಹ ದೂರ್' ಎಂಬ ಬಿರುದೂ, ಮದ್ರಾಸ್ ಡೆವಲೊಪ್‌ಮೆಂಟ್ ಮತ್ತೂ ಪಬ್ಲಿಕ್ ವರ್ಕ್ಸ್ ಶಾಖೆಯ ಅಸಿ॥ ಸೆಕ್ರಟರಿ ಶ್ರೀ. ಕೆ. ಗೋಪಾಲ ರಾವ್, ಬಿ. ಏ. ಇವರಿಗೆ 'ರಾವ್ ಸಾಹೇಬ್' ಬಿರುದೂ ನಮ್ಮ ಚಕ್ರವರ್ತಿಗಳ ವರ್ಷವರ್ಧಂತಿಯ ಸಂಬಂಧ ದೊರಕಿದೆ.

ಇಲ್ಲಿಯ ಮುಸ್ಲಿಂ ಉಪಾಧ್ಯಾಯ ಸಂಘದವರ ೩ನೇ ವಾರ್ಷಿಕ ಸಭೆ, ಕಳೆದ ಜುಲ್ಯಾಳನೇ ಶನಿವಾರ, ಮಹಮ್ಮಡನ್ ಹಯರ್ ಎಲಿಮೆಂಟರಿ ಶಾಲೆಯಲ್ಲಿ, ಕೆನರಾ ಮಹಮ್ಮಡನ್ ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನಾಬ್ ಮೋಹಸಿನ್ ಬಿನ್ ಅಹಮಡ್ ಸಾಹೇಬ್ ಬಹದೂರ್, ಬಿ. ಏ., ಎಲ್. ಟಿಯವರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಪ್ರಾರ್ಥನೆ, ಮಾದರೀ ಪಾಠಗಳಾದ ಮೇಲೆ, ರಾ. ಎಮ್. ಎನ್. ಕಾಮತ ರವರು, ಭೂಗೋಳ ಶಾಸ್ತ್ರವನ್ನು ಕಲಿಸುವ ಕುರಿತು, ಸುಮಾರು ೧॥ ಗಂಟೆ, ಸುರಸ ಭಾಷಣಮಾಡಿ ಆನಂದಗೊಳಿಸಿದರು. ತರುವಾಯ ಈ ರೇಂಜಿನ ಶಾಲೆಗಳ ಡಿ॥ ಇನ್ಸ್‌ಪೆಕ್ಟರ್ ರಾ. ಎಚ್. ಸಂಜೀವರಾವ್, ಬಿ. ಏ., ಎಲ್. ಟಿಯವರು ಸಭೆಯವರಿಗೆ ಕೆಲವು ಹಿತೋಕ್ತಿಗಳನ್ನು ಬೋಧಿಸಿದರು. ಆ ಮೇಲೆ, ಅಧ್ಯಕ್ಷರ ಸುರಸವೂ, ಕಾಲೋಚಿತವೂ ಆದ ಭಾಷಣದೊಂದಿಗೂ ವಂದನೋಕ್ತಿಗಳೊಂದಿಗೂ ಸಭೆ ಕೊನೆ ಗೊಂಡಿತು.

ನೋಟೀಸು

ಕಾಸರಗೋಡು ತಾಲೂಕು ಕಾಸರಗೋಡು ಕಸಬೆಯ ಲ್ಲಿರುವ ಕೋರ್ಟು ವೆಂಡರ ಕೆ. ಮಾನ ನ್ಯಾಕನು ಈ ಮೂಲಕ ಶ್ರುತಪಡಿಸ್ಸುವದೇನೆಂದರೆ:—

ಕಾಸರಗೋಡು ಕಸಬೆಯಲ್ಲಿರುವ ಅಡೂರು ಶರಣಂತಾ ಯ ಶೇಷಯ್ಯನವರ ಮಗಳು ವ ಕಾಲ್ತೋಡು ಮಹಾಬಲ ಮೇರವರ ಹೆಂಡತಿ ಮಹಾಲಕ್ಷ್ಮಿ ಅನ್ನುನು ನನಗೆ ತಾರೀಕು 20—2—34ರಲ್ಲು ರೂಪ್ಯಾ 1350—0—0ಕ್ಕೆ ಬರಕೊಟ್ಟ ದಿ. ಪ್ರೊ. ನೋಟು ನಿನ್ನೆ ದಿವಸ ರಿಜಿಸ್ಟ್ರಿ ಕಾರ್ಡು ಬಿಡುವರೆ ವಕೀಲರಲ್ಲಿ ಕೊಂಡುಹೋಗುವಾಗ್ಗೆ ನನ್ನಿಂದ ಗೈರವಿಲೆ ಆಗಿ ಬಿದ್ದುಹೋಗಿರುತ್ತದೆ. ಈ ನೋಟು ಸಿಕ್ಕಿದವರು ಇದನ್ನು ನನಗೆ ತಂದು ಕೊಟ್ಟಲ್ಲಿ ಅವರಿಗೆ ನ್ಯಾಯವಾದ ಇನಾಂ ಕೊಡುವರೆ ಸಿದ್ಧನಿದ್ದೇನೆ ಎಂತ ಎಲ್ಲಾ ಜನರಿಗೆ ಈ ಮೂಲಕ ತಿಳಿಸಿದ್ದೇನೆ.

ತಾ. 6—7—36. K. Mana Naik.

ತಾಲೂಕು ವರ್ತಮಾನ.

ಸುರತ್ಕಲ್:—ಇಲ್ಲಿಯ 'ಗ್ರಾಮಪಂಚಾಯತ ಕೋರ್ಟಿ'ನ ಪ್ರೆಸಿಡೆಂಟರಾಗಿ ಶ್ರೀ। ಕೃಷ್ಣಾಪುರ ಗೋಪಾಲಕೃಷ್ಣಯ್ಯನವರು ಚುನಾಯಿಸಲ್ಪಟ್ಟಿರುತ್ತಾರೆ.

'ಇಡ್ಯ ಗ್ರಾಮ ಪಂಚಾಯತ ಕೋರ್ಟಿ'ನ ಅವಧಿ ಮುಗಿದ ೬ ಮೆಂಬರರುಗಳ ಚುನಾವಣೆಯಾಗಿ, ಶ್ರೀ।ಗಳಾದ (೧) ಇಡ್ಯ ಪದ್ಮನಾಭಯ್ಯ; (೨) ಹೊಸಬೆಟ್ಟು ಪೂವ ಗುರಿಕಾರ; (೩) ದೂಮ ಪೂಜಾರಿ; (೪) ಪಿ. ಶೀನಪ್ಪಯ್ಯ; (೫) ಎಚ್. ರಾಮರಾವ್; (೬) ಟಿ. ಬರೋಸ್;—ಇವರುಗಳು ಸದಸ್ಯರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಮೇಲೆ ತೋರುವ ಸದಸ್ಯರಲ್ಲೊಬ್ಬರಾದ ಶ್ರೀ। ಟಿ. ಬರೋಸ್ ರವರು ತಾ. ೩೦ನೇಯ ದಿನ ಪ್ರಾತಃಕಾಲ ಸ್ವರ್ಗಸ್ಥರಾದರೆಂದು ತಿಳಿಸಲು [illegible] ವಿಷಾದವಿನಿಸುತ್ತದೆ. ಕರ್ನಾಟಕಾಂಗ್ಲಭಾಷಾಕೋವಿದರೂ, ವ್ಯವ[illegible]ತುರರೂ, ಸಾಧುಶೀಲರೂ ಆಗಿದ್ದ ಇವರ ನಿಧನದಿಂದ ಈ ಊರಿ[illegible]ಲಿಕ ಸಮಾಜಕ್ಕೇ ಅಪಾರ ನಷ್ಟವೆಂದರೂ ಅತ್ಯುಕ್ತಿಯಾಗದು. [illegible]ತ್ಮನು ಮೃತರ ಆತ್ಮಕ್ಕೆ ಪರಮಶಾಂತಿಯನ್ನು ಅನುಗ್ರಹಿಸಲಿ!

[illegible]ಲಿಯ ಇಡ್ಯ ಗ್ರಾಮ ಪಂಚಾಯತ ಬೋರ್ಡ್ ಅಧಿಕಾರಕ್ಕೆ ಡಿ. [illegible]ವರು ಈ ವರುಷದಿಂದ ಸುರತ್ಕಲ್ ಮಾರ್ಕೆಟು ಮತ್ತು ಗಾಡಿ [illegible] ಉತ್ಪತ್ತಿಯನ್ನು ಬೆಟ್ಟುಕೊಟ್ಟಿರುತ್ತಾರೆಂಬುದು ಸ್ತುತ್ಯ!

[illegible]ರ್ಡ್ ಬಾಲಿಕಾ ಪಾಠಶಾಲೆ'ಯು ಸುರತ್ಕಲ್ಲಿನಲ್ಲಿ ಅನೇಕ [illegible]ಂದಿತ್ತು. ಈಗ ವಿದ್ಯಾರ್ಥಿಗಳೇ ಇಲ್ಲದಂತಾಗಿ, ಕಳೆದ ಜೂನು ತಿಂಗಳಿಂದ ಡಿ. ಬೋರ್ಡ್ ಪ್ರೆಸಿಡೆಂಟರು ಈ ಶಾಲೆಯನ್ನು ತೆಗೆದು ಹಾಕಿಬಿಟ್ಟಿರಿ.

ಕಾಸರಗೋಡು:—ಸ್ಥಳೀಯ ಸ್ಪೆನೋ ಟೈಪಿಸ್ಟ್ಸ್ ಎಸೋಸಿಯೇಶನಿನ ಸಾರ್ವಜನಿಕ ಕೂಟವು ತಾ. ೧೮ರಲ್ಲು ಮುನ್ಸೀಫ ಕೋರ್ಟಿನ ಶ್ರೀಯುತ ಬಿ. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರ ಭಾಷಣಗಳೂ ಉಪಾಹಾರವೂ ಇದ್ದುವು. ಈ ಸಂಸ್ಥೆಯು ಶಿಕ್ಷಣ ಕಾರ್ಯದಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದೆ.

ಕಳೆದ ವಾರದಲ್ಲಿ ಬೀಸಿದ ಬಲವಾದ ಗಾಳಿಯಿಂದ ಹಲವು ಅನಾ[illegible]ಶಗಳಾಗಿವೆ. ತೆಂಗು, ಕಂಗು ಮುಂತಾದ ಮರಗಳು ಬಿದ್ದಿವೆ. [illegible]ರಗಳ ಅಲದ ಮರಗಳೂ, ಗೆಲ್ಲುಗಳೂ ಕೆಲವು ಬಿದ್ದಿವೆ. ಸಮಾ[illegible]ಲವು ಹಳ್ಳಿಗಳಲ್ಲಿ ಮನೆಯ ಮಾಡುಗಳು ಹಾರಿ ಹೋದುದೂ [illegible]. ತೆಂಗಿನ ಮರವೊಂದು ಮುರಿದು ಬಿದ್ದು ಕೋಣವೊಂದು

ಜಿಲ್ಲಾ ಕಲೆಕ್ಟರರು ಇಲ್ಲಿಗೆ ಕಳೆದ ವಾರದಲ್ಲಿ ಚಿತ್ತೈಸಿದ್ದರು. ಊರ ಹಲವು ಪ್ರಮುಖ ಅಧಿಕಾರಿಗಳು ಅವರನ್ನು ಉಗಿಬಂಡಿಯ ನಿಲ್ದಾಣದಲ್ಲಿ ಇಳಿರುಗೊಂಡರು.

ಮಂಗಲಪಾಡಿ:—ಸಮೀಪದ ಮುಟ್ಟ ಎಂಬಲ್ಲಿ ದಾಸಿಯೆಲ್ ಸೋಜ ಎಂಬ ಕೆಥೋಲಿಕ್ ಮತಸ್ಥನ ಮನೆಯಲ್ಲಿ ಕಳೆದ ಬುಧವಾರ ಸಾಯಂಕಾಲ ಅವನ ಹೆಂಡತಿಯಲ್ಲದೆ ಮನೆಯಲ್ಲಿ ಯಾರೂ ಇಲ್ಲದಾಗ ಈ ಯುವತಿಯು ನೇಣು ಹಾಕಿ ತೂಗುತ್ತಿದ್ದಳಂತೆ. ಆತ್ಮಹತ್ಯ ಮಾಡಿಕೊಂಡಿರುವಳೆಂದು ತಿಳಿದುಬರುತ್ತದೆ.

ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಇತರ ಚಟುವಟಿಕೆಗಳಲ್ಲಿ ಯಕ್ಷಗಾನ ಸಂಘವೊಂದು ಈಗಿನ ಮುಖ್ಯೋಪಾಧ್ಯಾಯರಿಂದ ಸ್ಥಾಪಿತವಾಗಿದೆ. ಪ್ರತಿ ಬುಧವಾರ ಯಕ್ಷಗಾನ ಕೂಟಗಳು ಜರಗುತ್ತಿವೆ.

ಉಡುಪಿ:—ಕಳೆದ ವಾರ ಇಲ್ಲಿನ ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಶ್ರೀಯುತ ಮಾಸ್ಟರ್ ಪಿ. ಕೆ. ಕಾರ್ನಾಡ್‌ಕಾರರವರ ಸಂಗೀತ ಕಚೇರಿಯು ಆಗಿ, ಸಭಿಕರನ್ನೆಲ್ಲ ಆನಂದಗೊಳಿಸಿದೆ.

ಪುತ್ತೂರು:—ಇಲ್ಲಿಯ ಆಸ್‌ಪಾಸ್ ಗ್ರಾಮಗಳಲ್ಲಿ ಇದೇ ಕಳೆದ ಜೂನು ತಾ. ೨೭ನೇ ರಾತ್ರೆ ಗಾಳಿ ಮತ್ತು ಮಳೆ ವಿಪರೀತವಾಗಿ ಬಂದು ಅನೇಕ ಮಾಡುಗಳ ಹಂಚುಗಳು ಹಾರಿ ಹೋದುದಲ್ಲದೆ ಅನೇಕ ಮರಗಳು ಉರುಳಿ ಬಿದ್ದು ಅನೇಕ ಜನರಿಗೆ ನಷ್ಟ ಸಂಭವಿಸಿದ್ದಲ್ಲದೆ ಪುತ್ತೂರು ಕಸಬಾ ಮೈದಾನ ಗೋರಿ ಹೊಸತಾಗಿ ಕಟ್ಟಿದ ಮಸೀದಿಯ ವೈಯಾಪುರಿ ಘೋಳಿಯಿಂದ ಎತ್ತಿ ಇನ್ನೊಂದು ಕಡೆ ಹಾಕಲ್ಪಟ್ಟಿದೆ.

ಇನ್ಫ್ಲುಯೆಂಜಾ ಜ್ವರವು ಮೂಡ್ನೂರು, (ಕಾವ) ಅರಿಯಡ್ಕ, ಶಾಂತಿಗೋಡು, ಸರಿವೊಗರು ಕೆಮ್ಮಿಂಜೆ ಈ ಗ್ರಾಮಗಳಲ್ಲಿ ಹರಡಿಕೊಂಡು ಅನೇಕ ಮನೆಗಳಲ್ಲಿ ಮಲಗಿದಲ್ಲಿಯೇ ಇರುತ್ತಾರೆ.

ಕರ್ನಾಟಕ

ಬೆಂಗಳೂರಲ್ಲಿ ಮೈಸೂರು ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಹಿಂದೀ ವಿಜ್ಞಾನ ಸಭೆಯ ಒಂದು ಮೀಟಿಂಗ್ ನಡೆದು, ಅದರ ಅಡಳಿತೆಯಲ್ಲಿ ಕೆಲವು ಬದಲಾವಣೆಗಳಾಗಬೇಕೆಂದೂ, ಸಭೆಯ ಸದಸ್ಯರ ಸಂಖ್ಯೆ ಏರಬೇಕೆಂದೂ ನಿರ್ಧಾರವಾಗಿದೆಯಾಗಿ ತಿಳಿದುಬರುತ್ತಿದೆ.

ಸುಮಾರು ೧೨೫ ವರ್ಷಗಳಿಗೂ ಪೂರ್ವದಲ್ಲಿ, ಒಬ್ಬ ಫ್ರೆಂಚ್ ಇಂಜಿನಿಯರನು ಶ್ರೀರಂಗಪಟ್ಟಣದಲ್ಲಿ ನಿರ್ಮಾಣಮಾಡಿದ್ದ, ಇಂಡಿಯದಲ್ಲೆಲ್ಲ ಪ್ರಸಿದ್ಧವಾಗಿದ್ದ, ಪ್ರಯಾಣಿಕರಿಗೆ ವಿಚಿತ್ರವೆನಿಸಿದ್ದ ಆ ಬಿಲ್ಲಿನಾಕಾರದ ತೂಗುವ ಕಮಾನು, ಕಳೆದ ವಾರ, ಜರಿದು ಬಿದ್ದು ಹೋಯಿತು. ಇಷ್ಟು ಕೌಶಲಮಯವಾದ ನಿರ್ಮಾಣವನ್ನು ಪುನಃ ಕಾಣುವುದು ದುಸ್ಸಾಧ್ಯ.

ನಂಜನಗೂಡು ಮತ್ತೂ ಶ್ರೀರಂಗಪಟ್ಟಣಗಳಿಗೆ ತೆರಳುವ ಯಾತ್ರಿಕರ ಮೇಲೆ ಹೊರಿಸಲಾಗಿದ್ದ ತೆರಿಗೆಯನ್ನು ಸರಕಾರವು ರದ್ದುಮಾಡಿದೆ.

ಮೈಸೂರು ಜಿಲ್ಲಾ ಕೃಷ್ಣರಾಜ ಪೇಟೆ ತಾಲೂಕಿನ ಹೊಸ ಹೊಳಲು ಗ್ರಾಮದಲ್ಲಿ ಮೈಸೂರು ರೇಶ್ಮೆ ಕೇಂದ್ರದ ಆರಂಭೋತ್ಸವವು ಇದೇ ತಾ. ೫ನೇ ಪ್ರಾತಃಕಾಲ ಶ್ರೀಮತಿ ಲೋಕಸುಂದರಿ ರಾಮನ್ ರವರಿಂದ ನೆರವೇರಿಸಲ್ಪಟ್ಟಿತು.

ಪ್ರಿನ್ಸ್ ಜಯಚಾಮರಾಜ ಒಡೆಯರವರು ಆರ್ಟ್ಸ್ ಪರೀಕ್ಷೆಯಲ್ಲಿ ೩ನೇ ತರಗತಿಯಲ್ಲಿ ಪಾಸಾದವರಲ್ಲಿ ಎರಡನೆಯ ಸ್ಥಾನವನ್ನು ಪಡೆದಿರುತ್ತಾರೆ.

ಬೆಂಗಳೂರು ಪೌರಸಭೆಯ ನೂತನ ಕಚೇರಿಯ ಆರಂಭೋತ್ಸವವು ತಾ. ೯ರಲ್ಲಿ ರಾಜಮಂತ್ರಪ್ರವೀಣ ಎಸ್. ಪಿ. ರಾಜಗೋಪಾಲಾಚಾರ್ಯರವರಿಂದ ನಡೆಸಲ್ಪಡುವದು.

ದಕ್ಷಿಣ ಕನ್ನಡ ಜಿಲ್ಲಾ ಆದಿದ್ರಾವಿಡ ಅಧ್ಯಾಪಕರ ಸಮ್ಮೇಳನದ ಸೂಚನೆಗಳು.

ಸರಕಾರದಲ್ಲಿ ಬೇಡಿಕೆಗಳು.

(೧) ಸರಕಾರವು ನಡೆಸುವ ಶಾಲೆಗಳ ಉಪಾಧ್ಯಾಯರುಗಳಿಗೆ, ಸರಕಾರದಿಂದ, (ಪಾಯಂ ಕೆಲಸ, ಪೆನ್ಶನ್ ಇತ್ಯಾದಿ) ಯಾವ ತರದ ಸೌಕರ್ಯಗಳು ದೊರೆಯುತ್ತವೆಯೋ, ಅಂಥ ಸೌಕರ್ಯಗಳು ಲೇಬರ್ ಶಾಲೆಗಳಲ್ಲಿಯೂ ಉದ್ಯೋಗ ಪಡೆದ ಆದಿದ್ರಾವಿಡ ಅಧ್ಯಾಪಕರಿಗೆಲ್ಲ ದೊರೆಯುವಂತೆ ಸರಕಾರವು ಅನುಗ್ರಹಿಸಬೇಕು. (೨) ಲೇಬರ್ ಶಾಲೆಗಳಿರುವ ಹಳ್ಳಿಗಳಲ್ಲಿ, ಶಾಲೆಗೆ ಹೋಗುವ ಪ್ರಾಯದ ಮಕ್ಕಳ ಸಂಖ್ಯೆಯನ್ನು ಗೊತ್ತುಮಾಡಿ, ಆ ಪ್ರಾಯದ ಮಕ್ಕಳ ಸಂಖ್ಯೆಯಲ್ಲಿ ಸದರಿ ಶಾಲೆಗಳಲ್ಲಿ ಮಕ್ಕಳ ಸರಾಸರಿ ಹಾಜರಿಯು ಸೇಕಡ ಒಂಕ್ಕೆ ಕಡಿಮೆ ಇದ್ದರೆ ಮಾತ್ರ, ಅಂಥ ಶಾಲೆಯನ್ನು ಮುಚ್ಚುವರೆ ಹುಕುಂ ಆಗಬೇಕು ವಿನಾ, ಒಬ್ಬ ಉಪಾಧ್ಯಾಯನಿಗೆ ಸರಾಸರಿ ಇಪ್ಪತ್ತು ಹುಡುಗರು ಹಾಜರಿರಬೇಕೆಂಬ ನಿಯಮವನ್ನು ಸರಕಾರವು ಇಡಬಾರದು. (೩) (a) ಒಂದು ಮೈಲಿನೊಳಗೆ, ಒಂದೇ ಗ್ರೇಡಿನ ಒಂದಕ್ಕಿಂತ ಹೆಚ್ಚು ಶಾಲೆಗಳಿರಬಾರದೆಂಬ ಚಾಂಪ್ಯನ್ ಸ್ಕೀಮಿನ ನಿಬಂಧನೆಯು, ಒಂದು ಹಳ್ಳಿಯಲ್ಲಿ (ಮೇಲ್ಜಾತಿಯ) ಬೇರೆ ಶಾಲೆಯುಂಟೆಂಬ ಕಾರಣದಿಂದ ಆ ಸ್ಥಳದಲ್ಲಿರುವ ಮತ್ತು ತೆರೆಯಬಹುದಾದ ಲೇಬರ್ ಶಾಲೆಗಳಿಗೆ ಯಾ ಆದಿದ್ರಾವಿಡ ಶಾಲೆಗಳಿಗೆ ಲಗಾವು ಮಾಡಬಾರದು. (b) ಮೇಲೆ ಹೇಳಿದ ಚಾಂಪ್ಯನ್ ಸ್ಕೀಮಿನ ಮೇರೆಗೆ, ಯಾವುದೊಂದು ಗ್ರಾಮದಲ್ಲಿ, ಲೇಬರ್ ಶಾಲೆ ಯಾ ಆದಿದ್ರಾವಿಡ ಶಾಲೆಯಲ್ಲದೆ ಬೇರೆ ಶಾಲೆಯುಂಟೆಂಬ ಕಾರಣದಿಂದ, ಅಲ್ಲಿರುವ ಲೇಬರ್ ಅಥವಾ ಆದಿದ್ರಾವಿಡ ಶಾಲೆಯು ಆಗತ್ಯವಿಲ್ಲವೆಂದು ಕಂಡುಬಂದಲ್ಲಿ, ಆ ಬೇರೆ ಶಾಲೆಯಲ್ಲಿ ಒಬ್ಬನಾದರೂ ಆದಿದ್ರಾವಿಡ ಅಧ್ಯಾಪಕನು ನೇಮಕ ಹೊಂದಿದ್ದರೆ ಮಾತ್ರ ಸದರಿ ಲೇಬರ್ ಅಥವಾ ಆದಿದ್ರಾವಿಡ ಶಾಲೆಯು ಆಗತ್ಯವಿಲ್ಲವೆಂದು ಪರಿಗಣಿಸಲ್ಪಡಬೇಕೇ ವಿನಾ, ಹಾಗಿಲ್ಲದಿದ್ದರೆ ಅಂಥ ಸ್ಥಳಗಳಲ್ಲಿ ಆದಿದ್ರಾವಿಡರಿಗೊಂದು ಶಾಲೆಯು ಪ್ರತ್ಯೇಕವಾಗಿಡುವಂತೆ ಮಾಡಬೇಕು.

(ಮುಂದರಿಯುವುದು.)

ಅಭಿನಯ, ಸಂಗೀತ, ಕಲೆ, ಅನುಪಮ ಕಥಾವಸ್ತು

ಯಾವದು ಬೇಕಾದರೂ

ಶ್ರೀ ದೇವೀ ಫಿಲ್ಮ್ಸ್‌ರವರ ಅನುಪಮ ತಯಾರಿಕೆ

ಸಂಸಾರ ನೌಕ

"ಗಿರಿಜ"

ಚಲನಚಿತ್ರವನ್ನು ನೋಡಲು ಮರೆಯಬೇಡಿ. ಪ್ರೇಮ, ಹಾಸ್ಯ, ಇತ್ಯಾದಿ ನವರಸಪೂರಿತ ಚಲನಚಿತ್ರ.

ಬೆಂಗಳೂರು, ಧಾರವಾಡ, ತಿರುಚಿನಾಪಳ್ಳಿ,
ಮದರಾಸು, ಗದಗ, ಕುಂಭಕೋಣಂ,
ಮಂಗಳೂರು, ಬೆಳಗಾಂ, ತಂಜಾವೂರು,

ಮುಂತಾದ ಮಹಾನಗರಗಳಲ್ಲಿ ಶೀಘ್ರವಾಗಿಯೇ ಪ್ರದರ್ಶಿಸಲ್ಪಡುವುದು.
ನಿಮ್ಮೂರ ಭವ್ಯ ಸಿನೆಮಾಮಂದಿರದಲ್ಲಿಯ ಪ್ರದರ್ಶನವನ್ನು ಇದಿರು ನೋಡಿ.

FOR BOOKING APPLY TO:

DEVI FILMS, LTD., 501 MINT ST., P. T., MADRAS.

ಶಿಕ್ಷಣ ವಿಚಾರ.

ಶಾಲೆಗಳಲ್ಲಿ ಹಿಂದೀ ಶಿಕ್ಷಣ.

ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳ ಕೈ ಕೆಳಗಣ ಶಾಲೆಗಳಲ್ಲಿ ಹಿಂದೀ ಶಿಕ್ಷಣವನ್ನು ಜಾರಿಗೆ ತರುವ ವಿಚಾರದಲ್ಲಿ ಮದ್ರಾಸು ಸರಕಾರವು ಪ್ರಕಟಿಸಿರುವ ಅಪ್ಪಣೆಯು ಈ ತೆರನಾಗಿದೆ:—

ಪಾಲಾಕೋಲ ಮ್ಯುನಿಸಿಪಲ್ ಹೈಸ್ಕೂಲಿನಲ್ಲಿ Iರಿಂದ III ವರೆಗಣ ಫೊರ್ಮುಗಳಲ್ಲಿ ಹಿಂದೀಯನ್ನು ಕಲಿಸಬಹುದಾಗಿ ಅಲ್ಲಿನ ಮ್ಯುನಿಸಿಪಲ್ ಕೌನ್ಸಿಲು ಮಾಡಿರುವ ನಿರ್ಣಯವನ್ನು ಸರಕಾರವು ಅಂಗೀಕರಿಸಲಿಲ್ಲ. ಆಗ ಅಪ್ಪಣೆಕೊಟ್ಟಿರುವುದನ್ನು ಎಲ್ಲ ಸ್ಥಳೀಯ ಸಂಸ್ಥೆಗಳ ತಿಳುವಳಿಕೆಗೆ ಬರುವಂತೆ ಈಗ ಪ್ರಚಾರಗೊಳಿಸಿದ್ದಾಗಿದೆ.

ಕೆಳಗಣ ಶರ್ತಗಳಿಗೆ ಒಳಪಟ್ಟು ಹಿಂದಿಯನ್ನು ತಾಜಾ ಐಚ್ಛಿಕ ವಿಷಯವಾಗಿ ಕಲಿಸಬಹುದಾಗಿದೆ:—(೧) ಈ ಕ್ಲಾಸಿಗೆ ಹಾಜರಿಯು ಯಾವ ತೆರದ ಒತ್ತಾಯದ್ದಾಗಬಾರದು; ವಿದ್ಯಾರ್ಥಿಗಳು ಹಿಂದೀ ಕ್ಲಾಸನ್ನು ಸೇರಬೇಕೆಂದಾಗಲಿ ಹಿಂದೀ ಕಲಿಯಬೇಕೆಂದಾಗಲಿ ಒತ್ತಾಯವಿರಬಾರದು. (೨) ಯಾವುದೊಂದು ದೇಶಭಾಷೆಯ ಬದಲಾಗಿ ಹಿಂದೀಯನ್ನು ಕಲಿಸಬಾರದು; ಹಿಂದೀ ಕಲಿಸತೊಡಗುವುದರಿಂದ ದೇಶಭಾಷೆಯ ಕಡೆಗೆ ಲಕ್ಷ್ಯವು ಕಡಮೆಯಾಗಬಾರದು; ಇತರ ಯಾವ ಪಾಠವಿಷಯಗಳ ಕಡೆಗೂ ಗಮನವು ಕಡಮೆಯಾಗಬಾರದು; ಸಂಸ್ಕೃತವನ್ನು ಕಲಿಸುವಲ್ಲಿ, ಅದರ ಬದಲಾಗಿ ಹಿಂದೀಯನ್ನು ಕಲಿಸುವಂತಾಗಬೇಕಾಗಿ ಬರಹ ಮೂಲಕವಾಗಿ ರಕ್ಷಕರು ಬರೆದುಕೊಳ್ಳುವ ತನಕ ಸಂಸ್ಕೃತದ ಬದಲಾಗಿ ಹಿಂದೀ ಕಲಿಸಲಾಗದು. (೩) ಯಾವುದೊಂದು ವಿದ್ಯಾಸಂಸ್ಥೆಗೆ ಅತ್ಯಾವಶ್ಯಕವಾಗಿರುವ ಸ್ಥಳಾವಕಾಶ, ಆರೋಗ್ಯ ಸಾಧನಗಳು, ಬೇಕಾಗಿರುವ ಉಪಕರಣ ಸನ್ನಾಹ, ವ್ಯಾಯಾಮ ಶಿಕ್ಷಣ ಇವುಗಳಿಗಾಗಿ ಬೇಕಾದ ಖರ್ಚನ್ನೆಲ್ಲ ಪೂರಯಿಸಿದ ಬಳಿಕವೇ ಹಿಂದೀ ಕಲಿಸಲು ಹಣವನ್ನು ವಿನಿಯೋಗಿಸಬಹುದು.

ಮೆಟ್ರಿಕ್ಯುಲೇಶನ್.

ಪ್ರತಿವರ್ಷವೂ ಪರೀಕ್ಷೆಗಳು ಸಮೀಪಿಸುವ ಕಾಲದಿಂದ, ಫಲಿತಾಂಶಗಳು ಹೊರಬಿದ್ದು ಮತ್ತೊಂದು ಪರೀಕ್ಷೆಗೆ ಪಾಠ ಪ್ರವಚನಗಳು ಪ್ರಾರಂಭಿಸುವ ತನಕವೂ, ಪತ್ರಿಕೆಗಳಲ್ಲೆಲ್ಲ ನಾನಾ ರೀತಿಯ ಭರದ ಬರವಣಿಗೆಗಳು ಪ್ರಕಟವಾಗುವ ಕ್ರಮವೊಂದು ಇದ್ದೇ ಇದೆ. ಈ ವರ್ಷ ಅದು ವಿಶೇಷವಾಗಿದ್ದಿತು. ಮುಂಬಾಯಿಯಲ್ಲಂತೂ, ವಿದ್ಯಾರ್ಥಿಗಳೂ ಅವರ ಪ್ರೋತ್ಸಾಹಕರೂ ದೊಡ್ಡ ಮೆರವಣಿಗೆ ಮಾಡಿಸಿ ಸಭೆಗೂಡಿ ನಿರ್ಣಯಗಳನ್ನು ಹೊರಡಿಸಿದರು. ಪರೀಕ್ಷೆಯ ಫಲಿತಾಂಶಗಳನ್ನು ಪುನಃ ಎಣಿಕೆಗೆ ತರುವಂತಿಲ್ಲ ಎಂಬುದು ನಿಜವಾದರೂ, ಜನರೆಲ್ಲ ಈ ಸಲ ತುಂಬ ಎಚ್ಚರಗೊಂಡು, ಮೆಟ್ರಿಕ್ ಪರೀಕ್ಷೆಯ ವಿಚಾರವಾಗಿ ನಾನಾ ವಿಚಾರಗಳನ್ನು ಹೊರಗೆಡಹುವಂತೆ ಈ ವರ್ಷದ ಫಲಿತಾಂಶವೂ ಅದನ್ನು ಕುರಿತಾಗಿ ಉಂಟಾದ ಚಳವಳಿಯೂ ಕಾರಣವಾಯಿತು.

ಸರಕಾರವು ಈ ವಿಷಯವಾಗಿ ತನ್ನ ಕೈಯನ್ನು ಈಗಲೆ, ದುಡುಕುವಂತಿಲ್ಲ; ಕೆಲಸಕ್ಕೆ ಹಚ್ಚುವ ಹಾಗೂ ಇಲ್ಲ. ಹೊಸ ರಾಜ್ಯಭಾರಕ್ರಮವು ಜಾರಿಗೆ ಬರುವಂತಿದೆ. ಎಲ್ಲವೂ ಮಹಾ ಸಾಧನೆಯ ಕಡೆಗೆ ಕೈನೀಡಿದೆ. ಒಬ್ಬೊಬ್ಬ ಸೆಕ್ರೆಟೆರಿಗೆ ನೂರಾರು ಬಗೆಯ ಕೆಲಸಗಳು ಈಗ ಬಂದು ಸೇರಿವೆ. ಹೀಗಿರುವಾಗ, ವಿದ್ಯಾಇಲಾಖೆಯ ಸುಧಾರಣೆಗೆ ಕಿವಿಗುಡುವವರಾರು?

ಆದರೆ, ಯಾವ ಹೊಸ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆಂದು ಸರಕಾರದ ಇಲಾಖಾಧೀಶರು ಬಹಳ ಉದ್ವೇಗದಿಂದ ಕೆಲಸ ಮಾಡುತ್ತಿರುವರೋ, ಆ ಸುಧಾರಣೆಗಳು ಉತ್ತಮ ಪರಿಣಾಮ-ಫಲಗಳನ್ನು ಉಂಟುಮಾಡಬೇಕಾದರೆ ವೋಟರು ಸಮುದಾಯವು ಖಂಡಿತವಾಗಿಯೂ ಶಿಕ್ಷಿತ ಸಮುದಾಯವಾಗಬೇಕೆ ಬೇಡವೆ? ಪ್ರಜಾಸತ್ತೆಯು ಸಾರ್ಥಕವೆನಿಸಬೇಕಾದರೆ, ಜನಾಭಿಪ್ರಾಯವು ವಿಚಾರಯುಕ್ತವಾದುದಿರಬೇಡವೆ? ಹಾಗಿದ್ದರೆ, ಜನರಲ್ಲಿ ಶಿಕ್ಷಣವು ಸರಿಯಾಗಿ ಪ್ರಚಾರಗೊಳ್ಳಬೇಡವೆ?

ಬೊಂಬಾಯಿ ಸರಕಾರವು ಈ ತತ್ವವನ್ನಷ್ಟು ಮನನ ಮಾಡಿಲ್ಲವೆಂದೇ ತೋರುತ್ತಿದೆ. ಯಾವುದೊಂದೇ ಮಾರ್ಗವಾಗಿ ಯಾವತ್ತು ವಿದ್ಯಾರ್ಥಿಗಳು ಮುನ್ನಡೆವಂತೆ ಮಾಡಿದಲ್ಲಿ, ಕೊನೆಗೆ ಆ ದಾರಿಯಿಂದ ಪಾರಾಗಿ ಸೇರಬಹುದಾದ ನೆಲೆಗಳು ಕೆಲವೇ ಇರುವಾಗ, ಉಳಿದೆಷ್ಟೊ ಮಂದಿ ತಾವೇಕೆ ಈ ದಾರಿ ಹಿಡಿದೆವು, ಬೇರೆ ದಾರಿಯನ್ನೇಕೆ ಸೃಷ್ಟಿಸಿಲ್ಲ ಎಂದು ಕೇಳರೆ? ಇಂತಹ ಪ್ರಶ್ನೆಗಳು ಉಂಟಾದ ಕೂಡಲೆ, ಈಗ ವಿಧಿಸಿರುವ ಹಂಗಾಮಿ ಕ್ರಮದಂತೆ, ಕೈಗಾರಿಕೆಗಳ ಡೈರೆಕ್ಟರವರ ಅನುಮತಿ ಪಡೆದು, ಕೆಲವು ವಿದ್ಯಾರ್ಥಿಗಳನ್ನು ಕಾರ್ಖಾನೆಗಳಲ್ಲಿ ಪ್ರತಿವರ್ಷ ತರಬೇತಿಗೆ ತೆಗೆದುಕೊಳ್ಳಬೇಕೆಂಬ ವಿಧಿ-ಉಪಾಯಗಳನ್ನು ಮಾಡಿದರೆ ಸಾಕೆ? ಶಾಶ್ವತವಾದ ಏರ್ಪಾಡುಗಳಾವುವನ್ನೂ ಮಾಡಲೆಳಸದೆ, ಎಕ್ಸ್‌ಪೆರಿಮೆಂಟುಗಳ ಕಡೆಗೇ ಅಪೂರ್ಣಮನಸ್ಸು ಕೊಟ್ಟರೆ ಸಾಕೆ? ಉಪಾಧ್ಯಾಯರ ತರಬೇತಿಗಾಗಿ ಹೆಚ್ಚಿನ ಶ್ರಮವನ್ನು ವಹಿಸಿ ಅನುಕೂಲತೆಯನ್ನು ಮಾಡಿಕೊಟ್ಟರೆ ಮಾತ್ರ ಸಾಕೆ? ಹೀಗೆ ನಿಧಾನವಾಗಿ ಮುನ್ನಡೆವ ಕಾರ್ಯಕ್ರಮವು ಈ ಪರಿಸ್ಥಿತಿಯಲ್ಲಿ ಸಾರ್ಥಕವಾಗದು.

ಕೂಡಲೆ ಸಂಪೂರ್ಣವಾದ ಮಾರ್ಪಾಟನ್ನು ಸರಕಾರವು ಮಾಡಿಕೊಡಬೇಕಾಗಿ ಬಂದಿದೆ. ನಾಳೆ ಮಾಡೋಣವೆಂದು ಕುಳಿತರೆ, ಪರಿಸ್ಥಿತಿಯು ಇನ್ನಷ್ಟು ಕೆಡುತ್ತ ಬರುವುದು ಹೊರತು ಇದ್ದಂತೆಯೆ ಎಂದೂ ಇರಲಾರದು. ನಾಳೆ ವೋಟಿನ ಅಧಿಕಾರವುಳ್ಳ ಈಗಣ ಯುವಕರು ಇನ್ನೂ ಪ್ರಚಂಡರಾಗುವರು.

ಬೊಂಬಾಯಿ ಸರಕಾರವು ವಿದ್ಯಾಪ್ರಚಾರಕ್ಕಾಗಿ ವ್ಯಯಿಸುವ ಹಣವು ಕಡಮೆಯಾಗಿಲ್ಲ. ಇಷ್ಟು ಧನವ್ಯಯದಿಂದ, ನಾಗರಿಕರಾಗಿ ಬಾಲಕ-ಬಾಲಿಕೆಯರು ಬೆಳೆವಂತೆ ತಕ್ಕ ಸಹಾಯವಾಗದಿದ್ದರೆ ಏನು ಪ್ರಯೋಜನವಾದಂತಾಗುವುದು?

ಯುನಿವರ್ಸಿಟಿಯ ಪದವೀಧರರ ಯೋಗ್ಯತೆಯನ್ನು ಎಷ್ಟೋ ಸಲ ಸಂದೇಹ ಮತ್ತು ಸಂಶಯದೃಷ್ಟಿಯಿಂದೆ ವಿಷ್ಟೋ ಕಡೆ ಕಾಣುತ್ತಿರುವರು. ಕಾರ್ಖಾನೆ, ಕಚೇರಿ, ಆಫೀಸುಗಳಲ್ಲಿ ಅಂತೂ ಯುನಿವರ್ಸಿಟಿಯ ಪದವಿಯೊಂದೇ ಮಾತ್ರ ವ್ಯರ್ಥವೆನ್ನುವಂತಿದೆ. ಪೈಮರಿ ಮತ್ತು ಸೆಕೆಂಡರಿ ಶಿಕ್ಷಣವೊಂದೇ ಎಲ್ಲ ಯೋಗ್ಯತೆಗಳಲ್ಲಿ ಅತ್ಯುತ್ತಮವಾದುದನ್ನು ವಿದ್ಯಾರ್ಥಿಗಳಲ್ಲಿ ಉಂಟುಮಾಡುವಂತಹದಾಗಬೇಕೆಂದು ಸರಕಾರಕ್ಕೆ ಇನ್ನೂ ತಿಳಿದು ಬಂದಿಲ್ಲ.

ಇಂಗ್ಲೆಂಡಿನಲ್ಲೇ ಆದರೂ, ಸುಶಿಕ್ಷಿತರಲ್ಲಿ ನಿರುದ್ಯೋಗತೆ ಇರುವ ಸಮಸ್ಯವು ತೀರ ಕಠಿನವೇ ಆಗಿದೆ. ಮೆಟ್ರಿಕ್ ಪಾಸಾದವರಲ್ಲಿ ಸೇಕಡಾ ೬ ಮಂದಿಯಷ್ಟು ಮಾತ್ರವೇ ಇಲ್ಲಿ ಯುನಿವರ್ಸಿಟಿ ವಿದ್ಯಾಭ್ಯಾಸ ಹೊಂದಲು ಮುಂದರಿಯುವರು. ಬೊಂಬಾಯಿ ಆಧಿಪತ್ಯದಲ್ಲಿ, ಸೆಕೆಂಡರಿ ಶಿಕ್ಷಣದ ಮೇಲ್ಗುರುತಾದ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗುವ ವಿದ್ಯಾರ್ಥಿಯರಲ್ಲಿ ಸೇಕಡಾ ೬೦ರಂತೆ ಯುನಿವರ್ಸಿಟಿ ಶಿಕ್ಷಣ ಪಡೆಯುವರು. ಇದರಿಂದ ಯುನಿವರ್ಸಿಟಿ ಡಿಗ್ರಿಗಳ ಕಡೆಗೆ ಕಣ್ಣಿಡುವ ಆಸಕ್ತಿಯು ನಮ್ಮ ಹಿರಿಯರಲ್ಲಿ ಎಷ್ಟು ಉಗ್ರವಾಗಿದೆ ಎಂದು ತೋರಿಬರುವುದಿಲ್ಲವೆ?

ಹೀಗಿದ್ದರೆ?—ಎಳೆಯು ವಯಸ್ಸಿನಲ್ಲಿ, ಉತ್ತಮರನ್ನು ಪ್ರತ್ಯೇಕಿಸಿ, ವಿಭಿನ್ನ ತರಗತಿಗಳ ಶಿಕ್ಷಣವು ಸಿಗುವ ಹಾಗೆ ಪ್ರಯತ್ನಿಸಬೇಡವೆ? ಹಾಗೆ ಮಾಡಬೇಕಾಗಿದ್ದರೆ, ಈಗಣ ಶಿಕ್ಷಣವಿಧಾನಗಳಲ್ಲಿ ಅವಶ್ಯವಾಗಿಯೂ ತಿದ್ದುಪಡಿಗಳು ಉಂಟಾಗಲೆ ಬೇಕಾಗಿವೆ.

ಕೊಲ್ಲೇಜು ಶಿಕ್ಷಣವಲ್ಲದೆ, ಇತರ ಬಗೆಯ ಶಿಕ್ಷಣದ ಕಡೆಗೆ ವಿದ್ಯಾರ್ಥಿಗಳನ್ನು ವೈಯುವ ಯಾವ ಬಗೆಯ ಉಪಕ್ರಮ ಮಾಡಿದರೂ, ಜನತೆಯ ಬೆಂಬಲವಿಲ್ಲದೆ, ಈ ತಿದ್ದುಪಡಿಗೆ ಬೆಲೆ ಏನೂ ಇಲ್ಲದೆ ಹೋಗಬಹುದು. ಜನರಿಗೆ ಅದರಿಂದ ಮುಂದೆ ಹಿತವೆಂದು ತಿಳಿದು, ಅವರೂ ಈ ಬಗೆಯ ತಿದ್ದುಪಡಿ ವಿಹಿತವೆಂದೇ ಎನ್ನುವಂತಿರಬೇಕು. ಯಾವ ಬಗೆಯ ಪಾಠಕ್ರಮವೂ ಒಂದು ಗುರಿಗೆ ಮುಟ್ಟುವ ಹಾಗಾದಲ್ಲಿ, ಅಂತಹ ಗುರಿಯು ಈಗಣ ಮೆಟ್ರಿಕ್ ಪರೀಕ್ಷೆಗಿರುವ ಮೆಚ್ಚಿಗೆಗಿಂತ ಹೆಚ್ಚಿನ ಮೆಚ್ಚಿಗೆಗೆ ಪಾತ್ರವಾಗುವಂತಿರಬೇಕು. ಈ ಪರೀಕ್ಷೆಗೂ ಒಂದು ಗಣನೆ, ಮೌಲ್ಯವಿರಬೇಕು. ಅಷ್ಟೇ ಬೆಲೆ ದೊರೆಯಲಾರದ ಪರೀಕ್ಷೆಗಾಗಲಿ, ಅದರ ಪಾಠಕ್ರಮಗಳಿಗಾಗಲಿ ಯಾರೂ ಹಾತೊರೆಯಲಾರರು. ಮೆಟ್ರಿಕ್ ಪರೀಕ್ಷೆಯ ಇದಿರಲ್ಲಿ, ಈಗ ಯಾವ ಬಗೆಯ ಹೊಸ ಪರೀಕ್ಷೆಯನ್ನು ಹೂಡಿದರೂ, ಅದು ವ್ಯರ್ಥವೆಂದೇ ಜನರಲ್ಲಿ ನಂಬಿಕೆಯುಂಟಾಗಿದೆ.

ಯುನಿವರ್ಸಿಟಿ ಅಧಿಕಾರಿಗಳೂ ವಿದ್ಯಾಪ್ರೀತಿಯೂ ಒಂದು ಮನಸ್ಸಾಗಿ, ಹೊಸ ರೀತಿಯ ಶಿಕ್ಷಣವನ್ನು ಸೂಚಿಸಿದರೆ, ಸರ್ವರೂ ಒಪ್ಪುವರು. ಪೈಮರಿ ಮತ್ತು ಸೆಕೆಂಡರಿ ಶಿಕ್ಷಣದ ಮೇಲೆ ಸರ್ವಾಧಿಕಾರವು ಸರಕಾರಕ್ಕಿರುವುದಾದರೆ, ಒತ್ತಾಯದ ಶಿಕ್ಷಣಕ್ಕೂ ಪಾಠಕ್ರಮಗಳಲ್ಲಿ ಬದಲಾವಣೆಗೂ ಉಪಾಯಗಳನ್ನು ಕಂಡುಹಿಡಿಯಬಹುದು.

ಹೀಗಾದಲ್ಲಿ, ದ್ವಿದಳವಾದ ಶಿಕ್ಷಣಪದ್ಧತಿಯನ್ನು ಏರ್ಪಡಿಸಬಂದೀತು. ಶಿಕ್ಷಿತನೆನಿಸಿಕೊಳ್ಳಲು ಮಾತ್ರ, ಅಷ್ಟು ಕಷ್ಟವಲ್ಲದ ರೀತಿಯದೊಂದು ಪರೀಕ್ಷೆಯನ್ನಿಟ್ಟು, ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣವು ದೊರೆವಂತೆ ವಿವಿಧ ಅನುಕೂಲತೆಗಳನ್ನು ಕಲ್ಪಿಸಿಕೊಡಬಹುದು. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಮನೋಬಲದಂತೆ ಮುಂದೆ ಯಾವ ಬಗೆಯ ಶಿಕ್ಷಣವನ್ನು ಹೊಂದಲು ಅರ್ಹನಾಗಬಹುದೋ ಅದನ್ನು ನಿರ್ಧರಿಸಿ ಅವನನ್ನು ಆ ಕಡೆ ನಡೆಯಿಸಬಹುದು. ಅನಂತರ, ಅಲ್ಲಿ ಅವನು ಕಲಿತುದರ ನಿರ್ಣಯಕ್ಕಾಗಿ, ಮತ್ತೊಂದು ಪರೀಕ್ಷೆಯನ್ನು ಏರ್ಪಡಿಸಿ, ಅವನು ಯೋಗ್ಯ ಶಿಕ್ಷಿತನೂ, ಉದ್ಯೋಗಾರ್ಹನೂ ಆಗುವಂತೆ ನಿರ್ಧರಿಸಬಹುದು. ಆದರೆ ಇಂತಹ ಪರೀಕ್ಷೆಗಳ ಸರ್ಟಿಫಿಕೇಟುಗಳಿಗೆ ಯುನಿವರ್ಸಿಟಿಯೂ ಒಂದು ಬೆಲೆಯನ್ನಿಡುವ ಹಾಗೆ ಅಗತ್ಯವಾಗಿ ಒಪ್ಪಬೇಕು.

ಆದರೆ, ಇದರಿಂದ, ಯುನಿವರ್ಸಿಟಿಯೂ ತನ್ನ ಅಧಿಕಾರ ಹೋಯಿತು, ತನಗೆ ಸಿಗುವ ಹಣಗಳು ಮಾಯವಾದಾವು ಎನ್ನಬಾರದು. ಶಿಕ್ಷಣಹೊಂದುವ ವಿದ್ಯಾರ್ಥಿಯರೇ ಉತ್ತಮರಾಗುತ್ತಾ ಬರುವುದರಿಂದ, ಯುನಿವರ್ಸಿಟಿಗೆ ಸೇರುವವರೂ ಅವರ ವಿದ್ಯಾಫಲವೂ ಉತ್ತಮವಾಗದೆ ಇರಲಾರವು. ಹೀಗಾಗಿ, ಮುಂದಿವರಿಂದ ಯುನಿವರ್ಸಿಟಿಗೆ ಕೀರ್ತಿ ಹೆಚ್ಚುವುದು; ಶಿಕ್ಷಣ ದೊರೆತುದೂ ಸಫಲವಾಗುವುದು.

ವಿದ್ಯಾಇಲಾಖೆಯು ಇದನ್ನೆಲ್ಲ ತಿಳಿಯದೆ ಹಿಂದುಳಿದದಲ್ಲ. ಜನರಲ್ಲಿ ಇನ್ನೂ ಈ ಬಗೆಯ ತಿದ್ದುಪಡಿಯಾಗಲೆಂಬ ಆಕಾಂಕ್ಷೆಯೆ ಮೂಡಿಲ್ಲ. ಇಲಾಖೆಯು ಎಂತಹ ಪ್ರಯತ್ನ ಮಾಡುತಿದ್ದರೂ, ಜನಸಮುದಾಯವು ಅದನ್ನು ನಿಷೇಧಿಸುವ ಹಾಗೆ ವರ್ತಿಸುತ್ತಿದೆ. ಸರಕಾರವೂ ಯುನಿವರ್ಸಿಟಿಯೂ ಒಮ್ಮತವಾಗಿ ಸಹಕರಿಸದೆ, ಯಾವ ಸುಧಾರಣೆ ಮಾಡಲು ಸಾಧ್ಯವೆ ಇಲ್ಲ. ಹಣವೂ ಬಹಳ ತುಟ್ಟಿಯಾಗಿದೆ; ಆಗುವಷ್ಟು ಕಡಮೆ ಖರ್ಚಿನಲ್ಲಿ ಎಲ್ಲವೂ ಸುಧಾರಣೆ ಹೊಂದಬೇಕಾಗಿದೆ. ಆದರೆ ಖರ್ಚಾಗುವುದೆಲ್ಲ ಅನಾವ್ಯಯವಾಗುತ್ತಿರುವಾಗ, ಇಸ್ಟಿಷ್ಟು ಖರ್ಚುಮಾಡಿ ಉದ್ಧಾರಮಾಡುವುದು ಅನ್ಯಾಯವೆಂದು ಯಾರೂ ಹೇಳುವುದು ಮಾತ್ರ ಒಪ್ಪತಕ್ಕುದಲ್ಲ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು. ಬಾಟ್ಲಿ 1ಕ್ಕೆ ರೂ. 2—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣಜ್ವರ, ಕಫಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ಕ್ಕೆ ರೂ. 1—8—0.

ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹರೋಗಗಳನ್ನು ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮಾತ್ರ.

ಎಚ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬ್ರ 18, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:—ಶ್ರೀ ರಾಮಾ ಸ್ವೀಶರಿ ಹೌಸ್, ಶ್ರೀ ರಾಮು ಪೇಟೆ, ಕಾಸರಗೋಡು. ಡಾ। ಶ್ರೀನಿವಾಸ ಪೈ, ಪುತ್ತೂರು. ಮುಲ್ಲರಪೆಟಿನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ., ವಿಟ್ಠಲ ಭ್ಯಾ ಪಟೇಲ್ ರೋಡ್, ಬಾಂಬಾಯಿ. ದಿ ವೆರ್ಯಟಿ ಹೋಲ್, ಮಡಿಕೇರಿ, ಕೂರ್ಗ್. ರಾವ್ ಫಾರ್ಮಸಿ, ಸಾಗರ.

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗ ಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು, ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಪರತ

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಆಸೌಖ್ಯದಿಂದಲೂ, ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳಿ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರವೃದ್ಧಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3.
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಮಲೆಯಾಳ ಔಷಧಾ ಕಂಪೆನಿ

MALAYALA OUSHADHA CO., Post CHALAPURAM.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.
1. ಮುಟ್ಟುಜೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಶ್ವೇರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED.,

OPPOSITE TALUK POLICE STATION,

MANGALORE.

ESTD. 1933.

AS ON 30TH APRIL 1936.

BENEFIT AMOUNT PAID EXCEEDS RS. 20,150/—

RESERVE FUND EXCEEDS RS. 6,250/—

WE HAVE THREE SCHEMES FOR YOU.

LIFE **MARRIAGE** **BIRTH**

ADMISSION FEE RS. 5—8—0 ONLY. (By Instalments if required)

MONTHLY PREMIUM RUPEE ONE ONLY.

WANTED SPECIAL AGENTS & REPRESENTATIVES ON LIBERAL TERMS.

For Full Prospectus & Agency Terms please call at or write to:—

THE GENERAL INSURANCE BANK OF INDIA LIMITED,
MANGALORE, S. K.

Mangalore,
Dated 8th May '36.

P. K. MENON,
Secretary.

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಮುಂಬಾಯಿ.

ತಾಜಾ ಆಯುರ್ವೇದೀಯ ಔಷಧಗಳನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ತಯಾರಿಸುವವರು.

ಆರೋಗ್ಯ, ಚೈತನ್ಯ ಮತ್ತು ಶಕ್ತಿಗಾಗಿ

ಝಾಂಡೂ ದ್ರಾಕ್ಷಾಸವ

ಉಪಯೋಗದ ಮೇಲೆಯೇ ಒತ್ತಾಯಪಡಿಸಿರಿ.

ರುಚಿಯನ್ನು ಹೆಚ್ಚಿಸುತ್ತದೆ. ಅಜೀರ್ಣ ಮತ್ತು ಆಯಾಸವನ್ನು ಹೋಗಲಾಡಿಸುತ್ತದೆ ಮತ್ತು ಇಡೀ ದೇಹಕ್ಕೆ ನವಚೈತನ್ಯವನ್ನು ಕೊಡುತ್ತದೆ. ದೀರ್ಘಕಾಲದ ಕಾಹಿಲೆಯನಂತರ ಝಾಂಡೂ ದ್ರಾಕ್ಷಾಸವ ಅತ್ಯುಪಯುಕ್ತವಾಗಿ ಬೇಕಾಗಿರುತ್ತದೆ. ಸಂಕ್ಷೇಪತಃ ನಮ್ಮ ದ್ರಾಕ್ಷಾಸವ ಮೆದುಳಿನ ಕೆಲಸಗಾರರಿಗೊಂದು ವರಪ್ರದಾನ.

ಕ್ರಯ 1½ ಪೌಂಡು ರೂ. 1/12/- 1 ಪೌಂಡು ರೂ. 1/6/- 8 ಔನ್ಸು ಆ. 12/-

ಮದ್ರಾಸ್ ಆಧಿಪತ್ಯದ ಏಜಂಟರು:—**ದಾನೋದರ್ ಎಂಡ್ ಕೋ.,**
78, ಚೈನಾ ಬಜಾರ್ ರೋಡ್, ಮದ್ರಾಸ್.

ಮಂಗಳೂರು ಏಜಂಟರು:—**ಷಾ ಅಂಡ್ ಕೋ.,** ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು.

ಉಡುಪಿ:—**ಪಿ. ಎ. ಹೈ ಬ್ರದರ್ಸ್.** — ಕಾರ್ಕಳ:—**ವಿ. ವಿ. ಶೆಣೈ.**

INVEST YOUR SAVINGS
IN A
East and West Policy.

OWN A EAST & WEST POLICY AND INCREASE YOUR SAVINGS! FOR THE EAST & WEST IS MAKING ASTOUNDING PROGRESS AND A EAST AND WEST POLICY IS, THEREFORE, A PROFITABLE INVESTMENT. IT ENCOURAGES THRIFT, ENSURES THE HIGHEST RETURNS AND OFFERS UTMOST SECURITY.

For Prospectus, Valuation Reports & Agency Terms apply to:—

MESSRS. PADUBIDRI BROS.,
Chief Agents,
MAHARASHTRA AND KARNATAKA,
East & West Insurance Co., Ltd.,
BOMBAY No. 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ಟಿ. ಖ. 11 ಆಣೆ.

ಪ್ಲೀನೋಫಿಲೀವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚಿಕ್ಕಬಿಂದು ದಿವ್ಯೌಷಧವು.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟಿ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ
ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಷ್ಣಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

ಬಾಲವಿನೋದ

ಅತ್ತೆ–ಸೊಸೆ

'ಸೊಸೆ ಒಡೆದ ಮಡಕೆ ಬೀದೀಲಿ, ಮಾಯಿ (ಅತ್ತೆ) ಒಡೆದ ಮಡಕೆ ಮಾಳಿಗೇಲಿ' ಎಂಬುದು ಈಗಣ ಗಾದೆ. ಅತ್ತೆಯು ಸೊಸೆ ಮಾಡಿಕೊಳ್ಳುವುದು ಜಗಳಕ್ಕಾಗಿಯೆ ಎಂದು ಹೇಳಿದರೂ ತಪ್ಪಾಗದು. ಹೆಚ್ಚಾಗಿ ಹಳೆ ಜಾತಿಗೆ ಸೇರಿದ ಅತ್ತೆಗೂ ಹೊಸ ಹಿಂದೂಸ್ಥಾನಕ್ಕೆ ಸೇರಿದ ಸೊಸೆಗೂ ವೈಷಮ್ಯ. ಇದಕ್ಕೆ ಕಾರಣ ವಿದೆಯೆನ್ನಬೇಕು. ಹಳೆ ರೂಢಿಗಳ ಪ್ರಕಾರ ಅತ್ತೆಯುು ಮನೆಯ ಯಜಮಾನಿ, ಸೊಸೆ ಪ್ರಧಾನಿ. ಅತ್ತೆಯು ಮನೆಯ ಅಡಳಿತವನ್ನು ಸ್ವಖಚಿತವಧಿಪ ರೀತಿಯಲ್ಲಿ ನೋಡುವಳು. ಸೊಸೆಯು ತಲೆಬಾಗಿ ಕೆಲಸಮಾಡುವವಳು. ಆದರೆ ಈಗಣ ಹುಡುಗಿಯರು ಹುಟ್ಟಿದಾಗಲೆ ಯಜಮಾನಿಯಾಗುವರು. ಶಾಲೆಯಲ್ಲಿ ಉಪಾಧ್ಯಾಯಿನಿಯರು ಕಲಿಸುವುದು 'ಯಾವಾಗಲೂ ಧೈರ್ಯದಿಂದಿರಬೇಕು. ಹೃದಯ ಬಹು ಗಟ್ಟಿಯಿರಬೇಕು. ದೃಢನಿಶ್ಚಯ ಮಾಡಬೇಕು. ಮುಖ್ಯವಾಗಿ ಸರಿದಾರಿಯಲ್ಲಿ ನಡೆಯಬೇಕು' ಎಂದು. ಇಂತಹ ಶಿಕ್ಷಣವನ್ನು ಪಡೆದು, ನವಸುಧಾರಣೆಯನ್ನು ಹೊಂದಿ ಅತ್ತೆಮನೆಗೆ ಹೋದೊಡನೆ, ಬೇಸಿಗೆಕಾಲದಲ್ಲಿ ಮೈ ಮೇಲೆ ಹಿಮಬಿಂದು ಬಿದ್ದ ಹಾಗೆ ಭಾಸವಾಗುವುದು.

ಸಂಸಾರ ಬೇಡವೆನ್ನುವುದು ಇದಕ್ಕಾಗಿ, ನಮ್ಮ ತಾಯಿಯು ನವತರುಣಿಯರ ಇಂಗಿತವನ್ನು ಬಲ್ಲವಳಾದರೆ ಮಾತ್ರ ಹೊಸ ಕಾಲಕ್ಕೆ ಅನುಬಂಧಿತಳಾದ ಹುಡುಗಿಯನ್ನು ನಾವು ಮದುವೆಯಾಗುವುದು ಲೇಸು. ಇಲ್ಲದಿದ್ದಲ್ಲಿ ಬ್ರಹ್ಮಚಾರಿಯಾಗಿ ತಿರುಗುವುದೇ ಲೇಸು.

ಮದುವೆಯಾದವನ ಕರ್ತವ್ಯಗಳಾವುವು? ತನ್ನ ಮಾತೆಗೆ ಬೇಕುಬೇಕಾದಂತೆ ನಡೆದುಕೊಂಡು, ಅವಳಿಗೆ ಸರ್ವ ವಿಧದಲ್ಲೂ ಸಂತೋಷ ದೊರೆವಂತೆ ನೋಡಿಕೊಳ್ಳಬೇಕು. ಆ ಬಡ ಮಾತೆಯ ಪ್ರಯತ್ನದಿಂದಲೆ ತಾನಿಂದು ಈ ಲೋಕದಲ್ಲಿ ಉರುಳಾಡುತ್ತಿದ್ದೇನೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರತಿಯೊಂದು ರೀತಿಯಲ್ಲೂ ಅವಳೇ ಮುಖ್ಯಳು. ಅವಳ ಕಡೆ ಪ್ರಪತ್ತಿಯನ್ನು ತೋರಿಸುವುದು ಪುತ್ರನಾದವನ ಮುಖ್ಯ ಉದ್ದೇಶವಾಗಿದ್ದಿರಬೇಕು.

ಹಾಗಾದರೆ ಅರ್ಧಾಂಗಿಯಾದ ಆ ಸೌಭಾಗ್ಯವತಿಯ ಗತಿಯೇನು? ಎನ್ನಬೇಡಿ. ನಿಮ್ಮ ಸಡಗರ, ದುಃಖದಲ್ಲಿ ಅವಳೂ ಭಾಗಿಯಾಗುವಳು. ನಿಮ್ಮ ಆನಂದವೇ ಅವಳ ಆನಂದ, ನಿಮ್ಮ ಕಷ್ಟವು ಅವಳ ಕಷ್ಟ, ಅದಕ್ಕಾಗಿ ಅವಳಿಗೆ 'ಅರ್ಧಾಂಗಿ' ಯೆಂದು ಹೆಸರು. ಹಾಗಿರುವಾಗ ನಿಮಗೆ ಪ್ರೀತಿಯಿರುವ ವಸ್ತುವಿನಲ್ಲಿ ಅವಳೂ ಪ್ರೀತಿಯನ್ನಿಡಬೇಕಾಗುವುದು. ಇಲ್ಲದಿದ್ದಲ್ಲಿ ಅಂಗವು ಮುರಿದು ಬೇರೆಯಾಗುವುದು. ಹಾಗಾದ್ದಲ್ಲಿ, ನೀವು ನಿಮ್ಮ ಮಾತೆಯ ಮೇಲೆ ತೋರಿಸುವಷ್ಟೆ ಅನುರಾಗವನ್ನು ಅವಳೂ ತನ್ನ ಅತ್ತೆಯ ಮೇಲೆ ಇಡಬೇಕಾಗುವುದು.

ಇಷ್ಟನ್ನೆಲ್ಲ ಅಧಿಕಾರವಾಣಿಯಲ್ಲಿ ಉಸುರಿದುದಲ್ಲ. ಗೃಹ್ಯಕಾರ್ಯಗಳು ಸಾದರತೆಯಿಂದ ಸಾಗುವಂತೆ ಮಾಡಬೇಕಾದರೆ ಮದುವೆಯಾದವನೂ ಈ ರೀತಿಯಲ್ಲಿ ನಡೆಯಬೇಕು ಎಂದು ಮನಗೊಂಡು, ಹೇಳಿದುದು. ಹೆಚ್ಚಾಗಿ ಹಿಂದೂ ಸಮಾಜದಲ್ಲಿ ಈ ಕೊರತೆಯು ತುಂಬಾ ವಳಗಿದೆ. ಶೇಕಡಾ ಇಪ್ಪತ್ತೈದು ಮನೆಗಳಲ್ಲಿ ಯಾವಾಗಲೂ ಜಗಳವಿದ್ದೇ ಇದೆ. ಜಗಳವಿದ್ದಲ್ಲಿ ಸುಖವಿಲ್ಲ, ಸುಖದ ಅಭಾವವಿದ್ದಲ್ಲಿ ಶಾಂತಿಯ ನೆಲೆಯಿಲ್ಲ. ಶಾಂತಿಯಿಲ್ಲದಿದ್ದಲ್ಲಿ ಅದು ಮನೆಯಲ್ಲ, ಮಸಣ. ಪತ್ರಿಕೆಯನ್ನು ದಿನನಿತ್ಯವೂ ಓದುವಾತನಿಗೆ ಅತ್ತೆ–ಸೊಸೆಯರೊಳಗಣ ವಿವಾದಗಳ ಪರಿಣಾಮಗಳ ವಾರ್ತೆಯು ಆಗಾಗ ಕೇಳುತ್ತಿದೆ. ನಮ್ಮ ಇಡೀ ಜನ್ಮಭೂಮಿಯಲ್ಲಿ ಇದೊಂದು ಕುಂದು ಸ್ಪಷ್ಟವಾಗಿ ಕಾಣುತ್ತಿದೆ. ಇದರ ಅಂತ್ಯವೇನು? ಅತ್ತೆ ಅಥವಾ ಸೊಸೆಯ ಮರಣ ಸಂಭವಿಸುವುದು. ಇಬ್ಬರಲ್ಲಿ ಒಬ್ಬರ ಆತ್ಮಹತ್ಯೆ ಅಥವಾ ಖೂನಿ. ಸಮಾಜವೆ ಕೊಳಕಾಗುವುದು,–ಬಿಳಿದಾಗಿರುವ ಗುಲಾಬಿಯಲ್ಲಿ ಕೂತಿರುವ ಷಟ್ಪದಿಯಂತೆ, ತಿಲಕವಿಲ್ಲದ ವಾರಾಂಗನೆಯಂತೆ. ಪತ್ರಿಕೆಗಳಲ್ಲಿ ಬರುವ ವಾರ್ತೆಗಳನ್ನು ಓದಿದಾತನಿಗೆ ಕ್ಷಣಮಾತ್ರಕ್ಕೆ ಹಾಸ್ಯವೋದಿದಂತಾಗುವುದು. ಇದೊಂದು ವ್ಯಂಗ ಚಿತ್ರವಾಗಿ ಕಾಣಬರುವುದು. ವಿಚಿತ್ರ ಚಿತ್ರವಾಗುವುದು. ಆದರೆ ಆತನು ತಾನೆ ಜಾಗರೂಕನಾಗದಿದ್ದಲ್ಲಿ ತನ್ನ ಮನೆಯಲ್ಲೂ ಅಂತಹದೊಂದು ವಿಚಿತ್ರ ಚಿತ್ರವನ್ನು ಕಾಣುವನು. ಸಮಾಜದ ಹಿತಚಿಂತಕರು ಮೊದಲಾಗಿ ಇದೊಂದು ವಿಜಾತೀಯವಾದ ಕಳಂಕವನ್ನು ಕಿತ್ತೊಗೆಯಬೇಕು. 'ಅತ್ತೆ ಸತ್ತ ಆರು ತಿಂಗಳಲ್ಲಾದರೂ ಸೊಸೆ ಅಳಬೇಕು.'

(ವಾಸುದೇವ–ಬಾಂಧವಬಳಗ.)

ನವೀನ–ಸರ್ವಜ್ಞ.

(ತ್ರಿಪದಿ)

ಕಿಡ್ಕಿಯಿಲ್ಲದೆ ಗಿಡ್ಕಿ, ಅಡ್ಕಿಯಿಲ್ಲದ ಅಂಗ್ಡಿ,
ಬೊಡ್ಕಿಯಿಲ್ಲದ ಮನೆಯು, ಇವು ಮೂರು ಬಜಿ
ಪಡ್ಕೆ, ಕಾಣಯ್ಯ! ಸರ್ವಜ್ಞ. ॥ ೧ ॥

ಅಂಚಿಡ್ದೆ ಇಂಚಿಡ್ದೆ ಎಂಚಿಡ್ದೆ ಎನಬೇಡ!
ಹಂಚನೆಬ್ಬಿಸಿ ಒಳನುಗ್ಗಿ ಕದಿಯುವವ
ಕೊಂಚಾಡಿ ಜಾಣ! ಸರ್ವಜ್ಞ. ॥ ೨ ॥

ಮಂಚಕ್ಕೆ ಮಣೆಯೇಕೆ, ಲಂಚಕ್ಕೆ ಹೊಣೆಯೇಕೆ,
ಪಂಚಕಜ್ಜಾಯಕ್ಕೆ ಹುಳಿಯೇಕೆ, ಮಡಿ-
ಗಂಚೇಕೆ? ಪೇಳ! ಸರ್ವಜ್ಞ. ॥ ೩ ॥

ಆ ರಾಯನೀ ರಾಯ ಮಾರಾಯನೆನಬೇಡ!
ನಾರಾಯಣನೆ ಮಹಾರಾಯ ಕೋರಾಯ
ಸಾರಾಯ ಕುಡಿಯೆ! ಸರ್ವಜ್ಞ. ॥ ೪ ॥

ಮೂರೊಂದ ಕೂಡಿಸಲು ಆರೆಂದುಮಪ್ಪುದೇ?
ಜಾರು ದೂಮ ವಿಸರಾದಿಗಳು ಕೂಡಿರಲು
ನಾರಾಯ್ಣನಹನೆ? ಸರ್ವಜ್ಞ. ॥ ೫ ॥

ಮುಂಡೆಯಾ ಮದುವೆಗೇ ಬೇಂಡೇಕೆ, *ಚೆಂಡೇಕೆ,
ಮುಂಡಿಗೆಸಂಡಿಗೆಗಳೇಕೆ, ಬಿರುಸು ಜೈ-
ನುಂಡೆಯೇಕೆಂದ. ಸರ್ವಜ್ಞ. ॥ ೬ ॥

ಕಟ್ಟಿ ಮಾಳಿಗೆಮನೆಯನುಟ್ಟು ಜರಿಪಂಚೆಯನು,
ಮೋಟ್ಟರ್ರು ಗಿರ್ರಿಸಿಸ ವರ್ತಕನ ಒಳ-
ಗುಟ್ಟು ಶಿವ ಬಲ್ಲ. ಸರ್ವಜ್ಞ. ॥ ೭ ॥

ಎಷ್ಟೆಷ್ಟು ನಷ್ಟವಹುದಷ್ಟಷ್ಟು ಮೃಷ್ಟಾನ್ನ,
ಫಸ್ಟ ಕ್ಲಾಸ್ ಹೊಟೆಲ ತೀನಿ ತೀರ್ಥ, ಕೊನೆಗೆ
ಪಿಸ್ಟೂಲೆ ಗತಿಯು. ಸರ್ವಜ್ಞ. ॥ ೮ ॥

ಬೇರೆಯವರಾ ಕಾಸು ಸೇರಿರಲು ಕೈಯೊಳಗೆ
ಕಾರುಬಾರೇನು? ತಿರಿಗವರು ಕೇಳ್ದಂದು
ಜಾರುವನು ಹಾರಿ. ಸರ್ವಜ್ಞ. ॥ ೯ ॥

FIXED DEPOSITS

ARE NOW RECEIVED ON THE FOLLOWING RATES:–

5½% p. a. for 6 months
6 „ „ 12 „
6¼ „ „ 24 „

INTEREST BEING PAYABLE EVERY QUARTER.

Please apply for further particulars

The Udipi Bank, Ltd.,
UDIPI.

ಗಂಟೆಗಂಟೆಗೆ ಕಾಫಿ ನೆಂಟರಿಗು ಬಂಟರಿಗು,
ಗಂಟು ಬರಿದಾಗಿ ಸಲುವುದ ಕೇಳಿ ಕೊಳುವ
ನೆಂಟಾಣೆ ಚೀಟು.† ಸರ್ವಜ್ಞ. ॥ ೧೦ ॥

[ವಿಕಟಕವಿ ಹಗಲುವೇಷ ಮೂಲ್ಕಿ ಮಠದ ವೆಂಕಟನ ಕೃತಿಗಳಿಂದ]

*ಹೂವಿನ ಜೆಂಡಿರಬಹುದು.

†ಈಗ ಆಯ್. ಪಿ. ಗೆ ಹನ್ನೆರಡಾಣೆ ಚೀಟು ಬೇಕು. ಎಚ್ಚರಿಕೆ!

ಅತ್ಯಲ್ಪ ಬೆಲೆ

The TWIN

ಅಮಂದ ಆನಂದ

1936 ಜುಲಾಯಿ ತಿಂಗಳಿಗೆ ನೂತನ

"ಟ್ವಿನ್" ರಿಕಾರ್ಡುಗಳು

ಕನ್ನಡ — ಶ್ರೀಯುತ ಬಿ. ವಿ. ರತ್ನವೇಲು ಚೆಟ್ಟಿಯಾರುರವರು ಹಾಡಿದ ಲಾವಣಿ ಗೀತಗಳು,

ತೆಲುಗು — ಶ್ರೀಮತಿ ಪಿ. ರುಕ್ಮಿಣಿ ದೇವಿಯ ಕರ್ಣಾಟಕ ಸಂಗೀತ,
ದಿವಂಗತ ಬಿ. ರಾಚಪ್ಪ (ಮೈಸೂರು), ಕಪಿಲವಾಯಿ ರಾಮನಾಥ ಶಾಸ್ತ್ರಿಗಳ ಅಪೂರ್ವ ಗಾನ.

ಸಂಸ್ಕೃತ — ಬ್ರಹ್ಮಶ್ರೀ ಪಿ. ಸುಬ್ರಹ್ಮಣ್ಯ ಶಾಸ್ತ್ರಿಯವರ
"ವರಲಕ್ಷ್ಮೀ ವ್ರತ ವಿಧಾನ".

ಕೊಂಕಣಿ — ಮಿಸ್ಟರ್ ಎ. ಎಂ. ಪಿಂಟೋನವರ ಗೀತಗಳು.

ವಾದ್ಯ — ಹಬೀಬ್ ಖಾನ್‌ನವರ ಸಾರಂಗಿ ವಾದ್ಯ.

ಇತ್ಯಾದಿ ರಿಕಾರ್ಡುಗಳನ್ನೀಗಲೇ ನಿಮ್ಮ ವ್ಯಾಪಾರಿಗಳಲ್ಲಿ ಕೊಂಡು, ಕೇಳಿ, ಆನಂದಿಸುವಿರಿ!

*

ಈ ತಿಂಗಳಿನ ಹೊಸ ರಿಕಾರ್ಡುಗಳ ಕೇಟಲಾಗು ನಿಮ್ಮ ವ್ಯಾಪಾರಿಗಳಲ್ಲಿ ಅಥವಾ ನಮ್ಮಲ್ಲಿ ಉಚಿತವಾಗಿ ಕೊಡಲ್ಪಡುವವು.

ದಿ "ಟ್ವಿನ್" ರಿಕಾರ್ಡು ಕಂಪೆನಿ, ಲಿಮಿಟೆಡ್,
45, ಸೌತ್ ಪೆರೇಡ್, ಬೆಂಗಳೂರು.

ದೊರೆಯುವ ಸ್ಥಳ:—
ಎಮ್. ಎಮ್. ಶ್ಯಾನುಭಾಗ ಎಂಡ್ ಸನ್, ಮಂಗಳೂರು.

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೇಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣಪಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,— **ಲಿವರ್‌ಕ್ಯೂರ್** (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜವ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ, ಮದ್ರಾಸು. } ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ. } ಹ್ಯಾರಿಸನ್ ರೋಡ್, ಕಲ್ಕತ್ತಾ.

The Canara Industrial & Banking Syndicate, Ltd.

ESTD. *(INCORPORATED IN BRITISH INDIA.)* 1925.

HEAD OFFICE: "Mukund Nivas" UDIPI.

SERVICE.

No force can destroy or argument refute the statement that we give best Banking service to public.

WHEN YOU WANT to open a Current or Savings Bank account remember us as you will find our rates and terms most advantageous.

WHEN YOU WANT to invest your monies in short or long term period deposits, consult our rates and you will always find them more favourable.

WHEN YOU WANT loans on Gold and other Ist class securities, you will find our terms most remunerative.

IF YOU DESIRE prompt collection of your bills, cheques and drafts on principal cities and towns of India, send them on to us for collection and we will collect at best rates.

WHEN YOU WANT a responsible Executor or Trustee to manage the affairs of your properties, we recommend your attention to 'Agency, Trustee and Executorship Department' of the Syndicate, who will be pleased to collect rents etc., on payment of a nominal fee.

Please remember that by co-operating with this institution, you will be getting maximum service at minimum cost.

Further particulars can be had from the Head Office or Branches at:

1. Mangalore.	2. Bangalore.	3. Hubli.	4. Bellary.	5. Belgaum.
6. Hungarcutta.	7. Hospet.	8. Adoni.	9. Udipi.	10. Karwar.
11. Coondapoor.	12. Ankola.	13. Kumta.	14. Honavar.	15. Cannanore.
16. Kanhangad.	17. Sirsi.	18. Bhatkal.	19. Brahmavar.	20. Payyanur.

Paid-up Capital.	Reserve Fund.	Deposits exceed.	Total Working Capital exceeds.
Rs. 2,16,500/—	Rs. 52,500/—	Rs. 14,79,000/—	Rs. 23,00,000/—

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ಡಿಪ್ಲೊಮಾ ಪಡೆದ ಡಾ. ವಾಮನ್ ಗೋಪಾಲರ

ಸಸ್ಪೆಪ್ಟಿಲ್ಲಾ

ಕೆಲವು ಪದಾರ್ಥಗಳ ಅನುಭವದಿಂದ ತಿಳಿಲಿಯಗಳ್ಳೆ ಜನರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ! ಗೌತಮರಾವ್ ಕೇಶವರಾವ್‌ರವರ ಹೊನಿಕ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ! ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

ವೆಂಕಟಗಿರಿ ಮದರಾತ್ರೆ

೪೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅಪೂರ್ವ ಕಾರ್ಯಗಳು ವಾಚಕರಿಗೆ ಮನಸೂರೆಯಾಗುವಂತೆ ಸ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

ಬೆಲೆ ರೂಪಾಯಿ ೧—೪—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಪದ್ಧತಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಆಫ್ಸೆಪತ್ರದ 168 ಪುಟಗಳು. ಕಟ್ಟಾ ನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಗುಪ್ತಮಂತ್ರ

100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸಲಾಗದ ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಆದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಆಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು, ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ಸಮ್ಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7—0. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Siddha Manthra Ashram,
No. 174, P. O. Katri Sarai. (GAYA.)

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಪುರಾತನ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಜೀಜುಗಳ ಗ್ರಾಮೋಫೋನಿನಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ. ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort MIRAJ, (S.M.C.)

ಪದವಿಗಳು! ಔಷಧಗಳು! ಪುಸ್ತಕಗಳು!

ಎಚ್. ಎಲ್. ಎಂ. ಎಸ್. ಎಚ್. ಎಂ. ಬಿ., ಎಚ್. ಯಂ. ಡಿ., ವೈದ್ಯರಾಜ ಮೊದಲಾದ ಹೋಮಿಯೋ-ಆಯುರ್ವೇದ, ಯುನಾನಿಗಳಲ್ಲಿ ಟಪ್ಪಾಲಿನ ಮೂಲಕ ಬೋಧನೆ ಪಡೆಯಬಹುದು. ಡಿಗ್ರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಹೋಮಿಯೋ-ಮೆಟೀರಿಯ ಮೆಡಿಕ ಇದರ ಬೆಲೆ ರೂ. 5. ಹೋಮಿಯೋ ಪ್ರಾಕ್ಟಿಸ್ ಆಫ್ ಮೆಡಿಸಿನ್ ಬೆಲೆ ರೂ. 4-೩ ಆಣೆಯ ಸ್ಟಾಂಪುಗಳನ್ನಿಡಿರಿ.

ಇಂಡಿಯನ್ ಹೋಮಿಯೋಪೆತಿಕ್ ಇನ್ಸ್‌ಟಿಟ್ಯೂಟ್ ಮತ್ತು ಸೊಸ್ಯಾಟಿ (ರಿಜಿಸ್ಟರ್ಡ್),
ಪೋಸ್ಟು ಸಬರ್ಮತಿ, ಅಹಮ್ಮದಾಬಾದ್, (ಇಂಡಿಯಾ).

ಇದೀಗ ನಿಮಗೆ ಒಳ್ಳೆಯ ಸುಸಂದರ್ಭ!

ಇಂದಿನ ನಮೂನೆ! ಇಂದಿನ ಮ್ಯಾಲು!! ಇಂದಿನ ಕ್ರಯ!!!

ನಮ್ಮಲ್ಲಿ ಬೆನಾರಸ್, ಬೆಂಗಳೂರು, ಕೋಂಜೀವರಂ, ಹುಬ್ಬಳ್ಳಿಇಳಕಲ್ಲು, ಪುಲ್ಲಂಪೇಟು, ಪೋಂಡಿಚೇರಿ, ಬಡೋದೆ ವಗೈರೆ ಪ್ರಸಿದ್ಧ ಊರ ಹೊಸ ನಮೂನೆಯ ಶೀರೆಗಳು ಈಗಲೇ ಬಂದಿರುತ್ತವೆ ತಮ್ಮಲ್ಲಿ ನೆರವೇರುವ ಶುಭಕಾರ್ಯಗಳಿಗೆ ಬೇಕಾಗುವ ಜವುಳಿಯನ್ನು ಈಗಲೇ ಬಂದು

ನೋಡಿರಿ! ಪಡೆಯಿರಿ!! ಆನಂದ ಪಡೆಯಿರಿ!!!

ಹೊಸ ನಮೂನೆ! ಹೊಸ ಮ್ಯಾಲು!! ದರ ಅತೀ ಸುಲಭ!!!

ವಿ. ಸೂ.—ಒಮ್ಮೆ ಮುಂಚಿತವಾಗಿ ನಮ್ಮಲ್ಲಿ ಬಂದು ನೋಡಿದರೆ ಆಗ ತಮಗೆ ತಾನೆ ಸಮಾಧಾನವಾದೀತು.

ಸೂಜೀಕರ್ ಬ್ರದರ್ಸ್, ಜವುಳಿ ವ್ಯಾಪಾರಿಗಳು,

ಮಾರ್ಕೆಟು ರಸ್ತೆ, ಮಂಗಳೂರು, ದ. ಕ.

'ಕೆಬೆಜ' ಅಥವಾ ಕೋಸುಗೆಡ್ಡೆ.

ಕೆಬೆಜಿನ ದುರ್ವಾಸನೆಯನ್ನು ಹೋಗಲಾಡಿಸಿಯೂ, ಅದರಲ್ಲಿರುವ ಪೌಷ್ಟಿಕ ವಸ್ತುವನ್ನು-ವಿಟೆಮಿನ್-ಉಳಿಯುವಂತೆಯೂ ಅದನ್ನು ಉಪಯೋಗಿಸಬಹುದು. ಹಿಂದೂ ಬ್ರಾಹ್ಮಣರಲ್ಲಿ ಕೆಲವರು ಇದರ ದುರ್ವಾಸನೆಯು ನೀರುಳ್ಳಿಯ ವಾಸನೆಯನ್ನು ಹೋಲುವದರಿಂದ ಇದನ್ನು ನೀರುಳ್ಳಿಯಂತೆಯೇ ನಿಷೇಧವಸ್ತುವೆಂದು ನೆನಸಿ ಕೆಬೆಜನ್ನು ಉಪಯೋಗಿಸದಿಲ್ಲ. ಆದರೆ ಸಸ್ಯಶಾಸ್ತ್ರಜ್ಞರು ಇದನ್ನು ಚೆನ್ನಾಗಿ ಪರಿಶೀಲಿಸಿ, ಇದು ಸಾಸಿವೆಯ ಜಾತಿಗೆ ಸೇರಿದುದೆಂದು ನಿರ್ಧರಿಸಿದ್ದಾರೆ.

ಕೆಬೆಜಿನ ಕೆಟ್ಟ ವಾಸನೆಯನ್ನು ಇಂಗ್ಲಿಷರು ಇದನ್ನು ಬೇಯಿಸಿ ಹೋಗಲಾಡಿಸುವರು. ಆದರೆ ಫ್ರೆಂಚರು ಇದನ್ನು ನೀರಿನಲ್ಲಿ ನೆನೆಹಾಕಿ (braise) ಅಂದರೆ ನಾವು ಕಣಿಲೆಯನ್ನು ನೀರಿನಲ್ಲಿ ಹಾಕಿ ಅದರ ವಾಸನೆ ಮತ್ತು ಕಹಿಯನ್ನು ನೀಗಿಸುವಂತೆ ಇದನ್ನು ಉಪಯೋಗಿಸುತ್ತಾರೆ. ಇವುಗಳಲ್ಲಿ ಮೊದಲನೆಯ ವಿಧದಿಂದ ತಯಾರಿಸಿದ ವಸ್ತುಗಳೇ ಹೆಚ್ಚು ರುಚಿಕರವಾಗುತ್ತವೆಂದು ಹೇಳಬೇಕು.

ಸೃಷ್ಟಿಕರ್ತಾರನು, ತನ್ನ ಸೃಷ್ಟಿಯ ಸೌಂದರ್ಯ ಮತ್ತು ಉಪಯೋಗ ಇವುಗಳಿಗೋಸ್ಕರ ಪುಷ್ಪಗಳನ್ನು ವಿವಿಧತೆಯಿಂದ ನಿರ್ಮಿಸಿರುವನು. ಈ ಹೂಗಳಲ್ಲಿ ಮಧುರವಾದ ಜೇನು ಎಷ್ಟಿದ್ದರೂ, ಬಣ್ಣ ಮತ್ತು ಸುವಾಸನೆ ಇವುಗಳ ಅಭಾವವಿದ್ದಲ್ಲಿ ಮಧುಕರಗಳು ಅವುಗಳನ್ನು ಲಕ್ಷಿಸುವದಿಲ್ಲ. ಅದರಂತೆಯೇ ಒಂದು ಹಣ್ಣು ನೋಟಕ್ಕೆ ಚೆಲೋದಾಗಿದ್ದರೆ ಯಾರ ಕಣ್ಮನಗಳನ್ನು ಆಕರ್ಷಿಸುವದಿಲ್ಲ? ಅದೇ ಹಣ್ಣು ಅತಿಪಕ್ವವಾಗಿ ಕೊಳೆಯುವ ಸ್ಥಿತಿಯಲ್ಲಿದರೆ ಅದನ್ನು ಕಣ್ಣಿಂದ ನೋಡಲೂ, ಕೈಯಿಂದ ಮುಟ್ಟಲೂ ಅಸಹ್ಯವಾಗುವದು. ಆದುದರಿಂದ ಒಂದು ವಸ್ತುವು ನೋಟಕ್ಕೆ ಅರ್ಹವಾಗಿ, ಒಳ್ಳೇ ಸುವಾಸನೆಯುಕ್ತವಾಗಿ, ಸ್ಪರ್ಶಕ್ಕೆ ಯೋಗ್ಯವಾಗಿದ್ದರೆ ಮಾತ್ರ ಅದನ್ನು ರುಚಿಸಲು ಮನಸ್ಸು ಇಚ್ಛಿಸುವದು; ಕೈಯು ಅದನ್ನು ಬಾಯಿಗೆ ಒಯ್ಯುವದು.

ಕೆಬೆಜನ್ನು ಬೇಯಿಸಿದರೆ ಅದರಲ್ಲಿದ್ದ 'ವಿಟೆಮಿನ್' ಹೋಗುವದು ಮಾತ್ರವಲ್ಲ ಅದು ನೋಟಕ್ಕೂ ಅಷ್ಟು ಸೊಗಸಾಗಿ ಕಾಣುವುದಿಲ್ಲ. ಆದುದರಿಂದ ಕೆಬೆಜಿನ ಚಂಡನ್ನು ಪ್ರಥಮತಃ, ಉಪ್ಪು ಮತ್ತು ಸಕ್ಕರೆ ಇವುಗಳನ್ನು ಸ್ವಲ್ಪ ನೀರಿನಲ್ಲಿ ಹಾಕಿ, ಆ ನೀರಿನಲ್ಲಿ ಇಟ್ಟು ಉಗಿಯನ್ನು ಕೊಡಬೇಕು. ಆಗ ಇದರ ಬಣ್ಣವು ಚಲೋದಾಗಿ ಕಾಣುವುದು. ಇದಾದನಂತರ ಆ ಚಂಡನ್ನು ಬೇಕಾದ ಪರಿಮಾಣದಲ್ಲಿ—ಆಯಾಯ ಪದಾರ್ಥಗಳಿಗೆ ಬೇಕಾದಂತೆ ತುಂಡರಿಸಿ, ಒಲೆಯ ಮೇಲಿಟ್ಟು ನೀರನ್ನು ಆರಿಸಬೇಕು. ಹೀಗೆ ಮಾಡುವಾಗ ಅಡಿಹಿಡಿಯದ ಹಾಗೆ ನೋಡಿಕೊಳ್ಳತಕ್ಕದ್ದು. ಅದರಿಂದ ಆವಿಯು ಹೊಂಟಾಗ ಸ್ವಲ್ಪ ಒಳ್ಳೇಮೆಣಸಿ (pepper)ನ ಹುಡಿಯನ್ನೂ, ಒಂದಿಷ್ಟು ಬೆಣ್ಣೆಯನ್ನೂ ಹಾಕಿ ಪಾತ್ರೆಯನ್ನು ಅಲ್ಲಾಡಿಸಬೇಕು. ಆಗ ಆ ಬೆಣ್ಣೆಯು ಕರಗಿ ಅದರಲ್ಲಿ ಕಲೆತು ಒಳ್ಳೆ ಸುವಾಸನೆಯನ್ನು ಕೊಡುವದು.

ಇದಾದನಂತರ ಅದಕ್ಕೆ ಬೇಕಾದ ವಿಧದ ಮಸಾಲೆಯನ್ನೋ, ಒಗ್ಗರಣೆಯನ್ನೋ ಹಾಕಿದರೆ ಇದರಷ್ಟು ರುಚಿಕರವಾದ ಪದಾರ್ಥವು ಬೇರೊಂದಿಲ್ಲವೆನ್ನಿಸುವದು. ಅಲ್ಲದೆ ಅದರಲ್ಲಿದ್ದ ಪೌಷ್ಟಿಕ ಪದಾರ್ಥವೂ ಕಡಿಮೆಯಾಗಲಾರದು.

ಹೆಂಗಸರಿಗಾಗಿ

ಕೆಬೆಜಾಂಬಡೆ—ಬೇಕಾದ ಸಾಮಗ್ರಿ—ಕೆಬೆಜು, ಕಡಲೆ ಹಿಟ್ಟು, ಉಪ್ಪು, ಎಳೆಮೆಣಸು, ಹಸಿಶುಂಠಿ, ನೀರುಳ್ಳಿ ಮತ್ತು ಒಳ್ಳೇ ಎಣ್ಣೆ ಅರ್ಧ ಸೇರು ಕಡಲೆ ಹಿಟ್ಟಿಗೆ ಸಾಕಾಗುವಷ್ಟು, ಉಪ್ಪನ್ನು ಹುಡಿಮಾಡಿ, ಎಳೆಮೆಣಸು ಮತ್ತು ಹಸಿಶುಂಠಿಗಳನ್ನು ಸಣ್ಣಗೆ ಚೂರು ಮಾಡಿ, ಸ್ವಲ್ಪ ನೀರನ್ನು ಹಾಕಿ ಹಿಟ್ಟನ್ನು ಚೆನ್ನಾಗಿ ಕಲಸಿಡಬೇಕು. ಅನಂತರ ಅದಕ್ಕೆ ಬೇಕಾಗುವಷ್ಟು ಕೆಬೆಜನ್ನೂ ನೀರುಳ್ಳಿಯನ್ನೂ ಒಂದೇ ರೀತಿಯಲ್ಲಿ ಸಣ್ಣ ಚೂರುಗಳಾಗಿ ಕತ್ತರಿಸಿ, ಅದರಲ್ಲಿ ಬೆರಸಿಡುವದು. ಆ ಮೇಲೆ ಅದನ್ನು ಗೋಲಾಕಾರವಾಗಿಯೋ ಚಪ್ಪಟೆಯಾಗಿಯೋ ಬೇಕಾದ ಪರಿಮಾಣದಲ್ಲಿಯೂ, ಆಕಾರದಲ್ಲಿಯೂ ಮಾಡಿ ಒಂದು ಬಾಳೆ ಎಲೆಯ ಮೇಲೆ ಇಡುವದು. ಎಣ್ಣೆಯು ಚೆನ್ನಾಗಿ ಕಾದೊಡನೆ ಒಂದೊಂದನ್ನೇ ಎಣ್ಣೆಯಲ್ಲಿ ಬಿಟ್ಟು, ಒಂದು ಪಾರ್ಶ್ವವು ಸರಿ ಬೆಂದೊಡನೆ ಅವುಗಳನ್ನು ಮಗಚಿ ಮಗದೊಂದು ಪಾರ್ಶ್ವವನ್ನು ಕಾಯಿಸಿ ತೆಗೆಯುವದು.

ಎಣ್ಣೆಯು ಹೆಚ್ಚು ಖರ್ಚಾಗಬಾರದಾದರೆ ಇದೇ ತಯಾರಿಸಿದ ಹಿಟ್ಟಿನಿಂದ, ದೋಸೆಯನ್ನು ಮಾಡಬಹುದು. ಕೆಬೆಜಿನ ಅಂಬಡೆ, ದೋಸೆಗಳಲ್ಲದೆ ಇನ್ನೂ ಅನೇಕ ತರದ ಪಲ್ಯಗಳನ್ನು ಮಾಡುತ್ತಾರೆ. ಇದನ್ನು ಉಪಯೋಗಿಸುವಾಗ ಮುಖ್ಯವಾಗಿ ತೆಗೆದುಕೊಳ್ಳಬೇಕಾದ ಜಾಗ್ರತೆಯೆಂದರೆ ಇದರ ಯಾವ ತರದ ಪದಾರ್ಥವನ್ನಾದರೂ ಬಿಸಿ ಆರುವ ಮುಂಚಿತವಾಗಿಯೇ ಉಪಯೋಗಿಸಬೇಕು. ಬಿಸಿ ಆರಿದ ತರುವಾಯ ಇದರ ರುಚಿಯು ತೀರ ವ್ಯತಿರಿಕ್ತವಾಗಿಯೇ ಪರಿಣಮಿಸುವದು.

ಬ್ರಾಹ್ಮಣರಾಗಲಿ, ಬ್ರಹ್ಮನೇ ಆಗಲಿ, ಒಮ್ಮೆ ಕೆಬೆಜಿನ ಬಿಸಿ ಅಂಬಡೆಯನ್ನು ರುಚಿಸಿದರೆ, ಕೆಬೆಜು ನಿಷೇಧವಸ್ತುವಲ್ಲವೆಂದೂ, ಪರ್ವಕಾಲಗಳಲ್ಲಿ ಇದು ಅತಿ ಅವಶ್ಯವಾದ ವಸ್ತುವೆಂದೂ ಹೇಳುವುದರಲ್ಲಿ ಸಂದೇಹವಿಲ್ಲ.

ಪ್ರಥಮ ಕರ್ತವ್ಯವ್ಯಾವುದು?

ಹುಡುಗಿಯರನ್ನು ಸುಶಿಕ್ಷಿತರನ್ನಾಗಿ ಮಾಡುವದು. ಬೆಳೆಯ ಹಾನಿವೃದ್ಧಿಯು ವೊಳಿಕೆಯನ್ನು ಹೊಂದಿರುವಂತೆ, ಒಂದು ದೇಶದ ಖಿನಾಶಾಭಿವೃದ್ಧಿಯು ಸ್ತ್ರೀಯರನ್ನೇ ಹೊಂದಿರುತ್ತದೆಂದು ಧೈರ್ಯದಿಂದ ಹೇಳಬೇಕು. ಇಂದು ಸುಶಿಕ್ಷಿತರಾದ ಹುಡುಗಿಯರು, ನಾಳೆ ಉತ್ತಮ ಗೃಹಿಣಿಯರೂ, ಶ್ರೇಷ್ಠ ಜನನಿಯರೂ ಆಗುವರು.

ಈ ತತ್ವವನ್ನು ಎಲ್ಲರೂ ಬಲ್ಲರಾದರೂ, ಜಪಾನರು ಇದನ್ನು ಚೆನ್ನಾಗಿ ಪರಿಶೀಲಿಸಿ, ಪ್ರತ್ಯಕ್ಷ ಆಚರಿಸಿ ಅತ್ಯುತ್ತಮವಾದ ಫಲವನ್ನು ಅನುಭೋಗಿಸುತ್ತಿದ್ದಾರೆ. ಜಪಾನಿನ ವಿದ್ವಾಂಸರು, ಸ್ತ್ರೀಯರಿಗೆ ಉಚ್ಚಶಿಕ್ಷಣವನ್ನು ಕೊಡುವುದೇ ತಮ್ಮ ಪ್ರಥಮ ಕರ್ತವ್ಯವೆಂದು ನಂಬಿರುವರು. 'ಸ್ತ್ರೀಯರನ್ನು ಸುಶಿಕ್ಷಿತರನ್ನಾಗಿ ಮಾಡಿರಿ; ಅವರು ಪುರುಷರನ್ನು ಸುಶಿಕ್ಷಿತರನ್ನಾಗಿ ಮಾಡುವರು. ಪುರುಷನ ಉನ್ನತ್ಯಧೋಗತಿಗಳು ತಾನು ಕೈಹಿಡಿದ ಧರ್ಮಪತ್ನಿಯನ್ನೇ ಹೊಂದಿರುತ್ತದೆ. ನಾವು ನಮ್ಮ ಸ್ತ್ರೀಯರನ್ನು ವಿದ್ಯಾವಿನಯ ಸಂಪನ್ನರಾಗಿ ಮಾಡಿದರೆ, ನಮ್ಮ ಜನಾಂಗದ ಮತ್ತು ದೇಶದ ಭವಿಷ್ಯವನ್ನು ಕುರಿತು ನಾವು ಚಿಂತಿಸಬೇಕಾಗಿಲ್ಲ'ವೆಂದು ಮಿ. ವೊಟೆನಬಿ (Mr. Watanabe)ಯವರು ಘಂಟಾಘೋಷವಾಗಿ ಸಾರಿರುತ್ತಾರೆ.

ಇವರ ಈ ವೇದವಾಕ್ಯವನ್ನೇ ಪ್ರಮಾಣವಾಗಿಟ್ಟುಕೊಂಡೆಂಬಂತೆ ಜಪಾನು ಈಗ ಅರ್ಧ ಶತಮಾನದಿಂದ ಸ್ತ್ರೀಯರಿಗೆ ಉಚ್ಚ ಶಿಕ್ಷಣವನ್ನು ಕೊಡುವದರಲ್ಲಿ, ತನ್ನ ತನು, ಮನ, ಧನಗಳನ್ನರ್ಪಿಸಿ ಪೇಚಾಡುತ್ತಿದೆ. ಪರಿಣಾಮವೇನು? ಕಳೆದ ಐವತ್ತೈದು ವರ್ಷಗಳಲ್ಲಿ ಅದು ಸುಮಾರು ಇಪ್ಪತ್ತು ಸಾವಿರ ಹುಡುಗಿಯರನ್ನು 'ಗ್ರೇಜುಯೇಟ'ರನ್ನಾಗಿ ಮಾಡಿತು. ಈ ಇಪ್ಪತ್ತು ಸಾವಿರದಲ್ಲಿ, ಎರಡು ಸಾವಿರ ಮಂದಿ ಸ್ತ್ರೀಯರು ಜಪಾನಿನ ಕಾಲೇಜುಗಳಲ್ಲಿ ಉಚ್ಚ ತರಗತಿಯ ಉಪಾಧ್ಯಾಯಿನಿಯರಾಗಿ ನೇಮಿಸಲ್ಪಟ್ಟಿರುವರು.

ಈ ಉಪಾಧ್ಯಾಯಿನಿಯರು ತಾವು 'ಕಾಲೇಜು ಗ್ರೇಜುಯೇಟ'ರೆಂಬ ಡಂಬಕ್ಕಾಗಲಿ, ನೋಟಕ್ಕಾಗಲಿ ಬೇಕಾಗಿ ಹೆಚ್ಚು ಬೆಲೆ ಬಾಳುವ ಉಡಿಗೆತೊಡಿಗೆಗಳನ್ನುಪಯೋಗಿಸುವದಿಲ್ಲ. ಇದರಂತೆಯೇ ಶಾಲೆಯ ಹುಡುಗಿಯರು ಕೂಡ ಒಂದೇ ತರದ ಉಡುಪನ್ನು ಧರಿಸುವದಿಲ್ಲ. ಅವರು ಬಟ್ಟೆಯಳತೆಯು ಕಡಿಮೆಯಾಗುವಂಥ, ಹೊಲಿಗೆ ಕೆಲಸವು ಸುಲಭವಾಗುವಂಥ (simple) ಕೆಲಸ ಮಾಡುವಾಗ ಉಡಲು ತಕ್ಕುದಾದಂಥ, ಸ್ವಲ್ಪ ನೀಲ ಬಣ್ಣದ 'ಸ್ಮೋಕ್ಸ್' (smocks)ಗಳನ್ನು ಉಟ್ಟುಕೊಳ್ಳುತ್ತಾರೆ.

ಹೀಗಾದರೂ, ವಿದೇಶದ ಕಸೂತಿ ಕೆಲಸವನ್ನು ಕಲಿಯದಿಲ್ಲ. ಶೇಕಡಾ ಮೂವತ್ತು ಮಂದಿ ಸ್ತ್ರೀಯರು, ವಿದೇಶಗಳ ಹೊಲಿಗೆಯನ್ನು ಕಲಿತು, ತಮ್ಮ ದೇಶದ ಹೊಲಿಗೆಯನ್ನು ಬಿಡದೆಯೂ ಎರಡೂ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾರೆ.

ಇವಲ್ಲದೆ, ಜಪಾನ ಹುಡುಗಿಯರು ತಮ್ಮ ಸ್ವಂತ ಮಾದರಿಯ ಪೋಷಾಕುಗಳನ್ನು ತಯಾರಿಸಿ ತರತರದ ಬಣ್ಣಗಳನ್ನು ಹಾಕುತ್ತಾರೆ. ಇದೂ ಅಲ್ಲದೆ, ಎಂಬ್ರಾಯ್ಡರಿ, ಟೇಬಲ್‌ಕ್ಲಾತ್, ಕುಷನ್‌ಕವರ್, ಪಿಲ್ಲೋಕೇಜಸ್ ಮತ್ತು ಕಿಮೋನೊ(Kimono)ಗಳನ್ನು ಹೊಲಿಯುವದರಲ್ಲಿ ಹೆಚ್ಚಿನ ಪ್ರಾವೀಣ್ಯವನ್ನು ಪಡೆದಿರುತ್ತಾರೆ.

'ಜಪಾನಿನ ಆಧುನಿಕ ಹುಡುಗಿಯು, ತನ್ನ ತಾಯಿ ಅಜ್ಜಿ ಇವರಿಗಿಂತ ಎಷ್ಟೋ ಪಾಲು ಆರೋಗ್ಯವಂತಳಾಗಿರುವಳು. ಇದು ಒಳ್ಳೆಯ ಆಟಪಾಟಗಳ ಸುಫಲವೆಂದು ನಾನು ನೆನಸುತ್ತೇನೆ. ಅವಳು ಈ ಶಾಲಾ ಸಂಸ್ಕಾರದಿಂದ ಆರೋಗ್ಯವಂತಳಾಗಿರುವದಲ್ಲದೆ, ನೋಟಕ್ಕೂ ಮನೋಹರಳಾಗಿ ಕಾಣುತ್ತಾಳೆ. ಅವಳ ಬುದ್ಧಿಮನಸ್ಸುಗಳ ಮೇಲೆಯೂ ಇದು ಪರಿಣಮಿಸದೆ ಬಿಡಲಿಲ್ಲ. ಯಾಕಂದರೆ, ಈಗ ಅವಳಲ್ಲಿ ಉತ್ತಮ ಕಲೆಗಳಲ್ಲಿರುವ ಅಭಿರುಚಿಯೂ, ಇತರ ವ್ಯವಹಾರಗಳಲ್ಲಿರುವ ಚಟುವಟಿಕೆಯೂ, ಕ್ಷಣೇ ಕ್ಷಣೇ ಅಭಿವೃದ್ಧಿಯನ್ನು ಹೊಂದುತ್ತಾ ಇವೆ.' ಎಂದು 'Mr. Watanabe'ಯವರು ತೀರ್ಮಾನಿಸಿರುವರು.

'ಭಗಿನೀವೃಂದ.'

ಪ್ರಕೃತಿಯೊಂದಿಗೆ ನಿಮ್ಮ ಕೂದಲಿನ ಸೌಂದರ್ಯವನ್ನು ಪುನರುಜ್ಜೀವನಗೊಳಿಸಿರಿ.

ಅತ್ಯುತ್ಕೃಷ್ಟವಾದ ಕೇಶವರ್ಧಕ 'ಟಾನಿಕ್'

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)

ನಿಮ್ಮ ಕೂದಲಿನ ಸೌಂದರ್ಯ ಮತ್ತೂ ಬೆಳವಣಿಗೆಗಳಿಗೆ ಇದು ಅತ್ಯಮೂಲ್ಯವಾಗಿದೆ. ಇದು ಪ್ರತ್ಯೇಕವಾದ ಕಾಂತಿಯನ್ನು ಉಂಟುಮಾಡುವುದು; ಕೂದಲನ್ನು ಸೊಗಸಾಗಿ, ಉದ್ದವಾಗಿ, ರೇಶ್ಮೆಯಂತೆ ಮಾಡಿಬಿಡುವುದು; ಇದನ್ನು ಉಪಯೋಗಿಸುವವರೆಲ್ಲರಿಗೂ ಇದು ಬಹು ಮೋಹಕವಾಗಿದೆ. ಇದರ ಮಧುರ ಪರಿಮಳವು, ಇದರ ಗುಣವಿಶೇಷಗಳಂತೆಯೇ ನಿಮ್ಮನ್ನು ಸಂತೋಷಗೊಳಿಸುವುವು. ಇಂದೇ ಒಂದು ಬಾಟಲಿಯನ್ನ ಪರೀಕ್ಷಿಸಿರಿ. ಬಾಟಲಿಯೊಂದಕ್ಕೆ ರೂ. 1—0—0. ಅಥವಾ ಬಾಟಲಿ 3ಕ್ಕೆ ರೂ. 2—10—0. ವಿ. ಪಿ. ಚಾರ್ಜು ಪ್ರತ್ಯೇಕ. ಪೋಸ್ಟೇಜಿಗಾಗಿ 2½ ಆಣೆಯ ಸ್ಟಾಂಪ್ ಕಳುಹಿಸಿ ಇದರ ಮಾದರಿಯನ್ನು ಕೇಳಿ. ಅದು ನಿಮಗೆ ಉಚಿತ.

ಒಟೋದಿಲ್ ಬಹಾರ್ (ರಿಜಿಸ್ಟರ್ಡ್)

ಈಗಿನ ದಿನಗಳಲ್ಲಿ ಜನಪ್ರೀತಿಯನ್ನು ಸಂಪಾದಿಸಿರುವ ಸುಗಂಧ ದ್ರವ್ಯವಿದು. ಇದರ ಮಧುರವಾದ, ಮರುಳುಗೊಳಿಸುವ, ಬಹು ಕಾಲ ಉಳಿಯುವ ಈ ಗುಣಗಳಿಗಾಗಿ ಇದು ಬಹಳ ಪ್ರಸಿದ್ಧಿಪಡೆದಿದೆ. ಒಂದು ಕೈವಸ್ತ್ರದ ಮೇಲೆ ಚುಮುಕಿಸಿದ ಕೆಲವೇ ಬಿಂದುಗಳಿಂದ ಸುತ್ತಲೂ ಎತ್ತೆತ್ತಲೂ ವೈಭವಸೂಚಕವಾದ ಪರಿಮಳ ಗಂಧವು ಪಸರಿಸುತ್ತದೆ. ½ ಔನ್ಸಿನ ಬಾಟಲಿಗೆ ರೂ. 2—0—0; ¼ ಔನ್ಸಿನ ಬಾಟಲಿಗೆ ರೂ. 1—4—0; ವಿ. ಪಿ. ಚಾರ್ಜು ಪ್ರತ್ಯೇಕ; ಪೋಸ್ಟೇಜಿಗಾಗಿ 2 ಆಣೆ ಸ್ಟಾಂಪು ಕಳುಹಿಸಿ ಇದರ ಮಾದರಿಯನ್ನು ಕೇಳಿ ಅದು ನಿಮಗೆ ಉಚಿತ.

ಕಾಮಿನಿಯಾ ಸೋಪ್ (ರಿಜಿಸ್ಟರ್ಡ್)

ಚರ್ಮಕ್ಕಿದು ಅತ್ಯಂತ ಶಾಸ್ತ್ರೀಯವಾಗಿ ಸಿದ್ಧವಾದ ಸಾಮಗ್ರಿ. ಮುಖದ ಮೇಲಿನ ಮಡವೆಗಳು, ನೆರಿಗೆಗಳು, ಕಲೆಗಳು ಇವನ್ನು ಹೋಗಲಾಡಿಸಿ, ಚರ್ಮವನ್ನು ಸುಂದರವಾಗಿ, ಹೊಸದಾಗಿ, ಯೌವನದಿಂದ ತುಂಬಿಸಿ ಇಡುತ್ತದೆ. ಇದು ಚರ್ಮವನ್ನು ಮೃದುವಾಗಿ, ಮುಖಪುಲ್ಲಿನ ಹಾಗೆ ಮಾರ್ದವಗೊಳಿಸುವುದೂ ಅಲ್ಲದೆ, ನೋಟಕ್ಕೆ ಶುಭ್ರವಾಗಿಯೂ ಹಿಮದಂತೆ ಬೆಳ್ಳಗಾಗಿಯೂ ಇರಿಸುತ್ತದೆ. ಇದು ಮನೋಹರವಾಗಿ ಸುವಾಸಿತವಾಗಿದೆ. ಬುಡ್ಡಿಯೊಂದಕ್ಕೆ ಆಣೆ 0—12—0. ವಿ. ಪಿ. ಚಾರ್ಜು ಪ್ರತ್ಯೇಕ.

ಉಷ್ಣ ಹವಾಮಾನಕ್ಕೆ ಅತ್ಯಂತ ಶ್ರೇಷ್ಠವಾದ ಅಲಂಕಾರದ ಸಾಬೂನುಗಳು.

ಕಾಮಿನಿಯಾ ಟ್ಯಾಲೆಟ್ ಸಾಬೂನುಗಳು (ರಿಜಿಸ್ಟರ್ಡ್)

ಸಂಪೂರ್ಣವಾದ ಆರೋಗ್ಯದಾಯಕ ಶಕ್ತಿಯಲ್ಲಿಯೂ, ಅಪ್ರತೀಯವಾದ ಸುವಾಸನೆಯಲ್ಲಿಯೂ ಇದರ ಸರಿಸಮಾನವಿಲ್ಲವೆಂದು ನಿದರ್ಶನಕ್ಕೆ ಬಂದಿರುವ ಅತ್ಯಂತ ಸೊಗಸಾದ ಸಾಬೂನುಗಳಿವು. ಅತ್ಯುತ್ಕೃಷ್ಟವಾದ ಹಲವು ಬಗೆಯ ಪರಿಮಳಗಳಿಂದ ಕೂಡಿ ಮಾರಾಟಕ್ಕೆ ದೊರೆಯುತ್ತವೆ. ಅವುಗಳಲ್ಲಿ ಕೆಲವು ಇವು—ವೈಟ್‌ರೋಸ್, ಸ್ಯಾಂಡಲ್, ಲೆವೆಂಡರ್, ಬಿಲ್‌ಬಹಾರ್, ಗ್ಲಿಸರಿನ್ (ಟ್ರಾನ್ಸ್‌ಪೇರೆಂಟ್) ಮೊದಲಾದುವು. ಮನಮೋಹಕವಾದ ಇವುಗಳ ಸುಗಂಧವು ಸ್ನಾನಕಾಲದಲ್ಲಿ ಮಹದಾನಂದವನು ಉಂಟುಮಾಡುತ್ತದೆ. ಮೂರು ತುಂಡು ಸಾಬೂನುಗಳ ಒಂದು ಪೆಟ್ಟಿಗೆ ರೂ. 1—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಸೋಲ್ ಏಜಂಟ್ಸ್:—**ಆಂಗ್ಲೊ-ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕೊ., 285, ಜುಮ್ಮಾ ಮಸೀದಿ, ಬೊಂಬಯಿ ನಂ. 2.**

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ

ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ

ವಿಜಯನಗರಂ ಔಷಧ.

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರ ದ್ದಾಗಿದ್ದರೂ ಫಲಕಾರಿಯಾಗಿ ಗುಣವಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯ ಪಾತ್ರುಡು ಮತ್ತು ಸಹೋದರ,

(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),

98—99 ಬ್ರೋಡೀಸ್ ರೋಡ್, ಮೈಳಾಪುರ್, :: ಮದ್ರಾಸು.

(ರಾಮಕೃಷ್ಣ ಪುಸ್ತಕದ ಎದುರು).

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಕ್ಲೈಮ್ ಹಣ ರೂ. 300,000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟು ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಠೇವಣಾತಿ (Deposit) ಇಟ್ಟು, ಅದರ ನಿಯಮಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಮತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ವರ್ಷ ಒಂದಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯಾದ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90% ರಷ್ಟು ಸಾಲ ಪಡೆಯುವಿಕೆ. (3) ಇಮ್ಮಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಅಶಕ್ತತೆಯ ರಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮಕ್ಕಳ ಹೆಸರಿನಲ್ಲಿ 5000 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ ವಿಮಾ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

ಹೆಚ್ಚಿನ ವಿವರಗಳಿಗೆ ಬರೆಯಿರಿ.

ತಿರುಪತಿ ಬಲಿಜಾ ಅಂಡ್ ಕಂಪೆನಿ,

ಮ್ಯಾನೇಜಿಂಗ್ ಏಜಂಟರುಗಳು.

ಅಖಿಲ ಹಿಂದುಸ್ಥಾನದಲ್ಲಿ ಪ್ರಖ್ಯಾತಿಪಟ್ಟ

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್‌ರವರ ತ್ರಿಲೋಕ (ನಾರದ) ಮಾರ್ಕಿನ

ಸ್ಟೀಲು ಟ್ರಂಕುಗಳು, ಮತ್ತು ಸೂಟ್ ಕೇಸುಗಳು

ಅನೇಕ ವರ್ಷಗಳ ಮಾಹಿತಿಯಿಂದಲೂ, ಒಳ್ಳೇ ಕೆಲಸಗಾರರಿಂದಲೂ ಬಹಳ ನಾಜೂಕಾಗಿ ತಯಾರಿಸಲ್ಪಡುತ್ತಿವೆ. ನಮ್ಮಲ್ಲಿ ನಿಮ್ಮ ಬಟ್ಟೆಗಳು ಕೆಟ್ಟುಹೋಗದಂತೆಯೂ, ಬಹುಕಾಲ ಬಾಳಿಕೆ ಬರುವಂತೆಯೂ, ಮನಸ್ಸಿಗೆ ತೃಪ್ತಿಕರವಾಗುವ ರೀತಿಯಲ್ಲಿ ನಾನಾ ತರದ



ಸ್ಟೀಲು ಟ್ರಂಕುಗಳೂ, ಸೂಟ್ ಕೇಸುಗಳೂ, ಕ್ಯಾಬಿನ್ ಸೂಟ್ ಕೇಸುಗಳೂ, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳೂ, ಅಭರಣಗಳನ್ನಿರಿಸುವ ಕೈಪೆಟ್ಟಿಗೆಗಳೂ, ಕ್ಯಾಷ್‌ಬೋಕ್ಸ್ ಇವೇ ಮೊದಲಾದುವುಗಳು ವಿಕ್ರಯಕ್ಕೆ ಸಿದ್ಧವಿರುವವು. ತ್ರಿಲೋಕ (ನಾರದ) ಟ್ರೇಡ್‌ಮಾರ್ಕಿನ ಮುದ್ರೆಯು ಮತ್ತು ಒಳಗಡೆ ಲೇಬಲ್ ನಮ್ಮ ಪ್ರತಿಯೊಂದು ಪೆಟ್ಟಿಗೆಯಲ್ಲೂ ಇರುವುದು. ಕ್ರಯಕ್ಕೆ ತಕ್ಕ ಮ್ಹಾಲು ಬೇಕಾದಲ್ಲಿ ಈ ಟ್ರೇಡ್‌ಮಾರ್ಕುಗಳಿರುವ ಪೆಟ್ಟಿಗೆಗಳನ್ನು ಪರೀಕ್ಷಿಸಿ ಪಡಕೊಂಡು ಸಂತೋಷ ಪಡೆಯಿರಿ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೊ' ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ, ನಿಮಗೆ ಖಚಿತವಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈಕೆಳಗಿನ ವಿಳಾಸಕ್ಕೆ ಬರೆಯಿರಿ:—

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಪ್ರೊಪ್ರೈಟರ್:—ಜೆ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು: 22, ಬೇಕರ್ ಸ್ಟ್ರೀಟ್. ಜಿ. ಟಿ. ಮದ್ರಾಸು. ಬ್ರಾಂಚ್ ಆಫೀಸು: ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

'ಕಂಠೀರವ' ಪತ್ರಿಕೆಗೆ ಇಂದೇ ಚಂದಾದಾರರಾಗಿರಿ!

ಅಶಕ್ತ ಮಕ್ಕಳು

ಡೋಂಗರೆ

ಇವರ

ಬಾಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷಚಿತ್ತರೂ ಆಗುವರು.

ಕೆ. ಟೀ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

GOOD NEWS

We on behalf of our customers, **undertake** to register from the Government of **India** Patent, Design & Trade Names, Mark, **Labels** etc.

Please write for terms to:—

The Star Commercial Agency,

10, Collin Street, CALCUTTA.

ಖಾತ್ರಿಯಾದ ತೃಪ್ತಿಯೂ, ವಿಜಯವೂ ಉಂಟೆಂದು ಗ್ಯಾರಂಟಿ.

ಜಾಹೀರಾತಿನಂತೆ ಇಲ್ಲವೆಂದು ಕಂಡುಬಂದರೆ, ಕೊಟ್ಟ ಹಣ ಹಿಂದೆ.

ಇಂದ್ರಜಾಲದ ಉಂಗುರ

ಅತ್ಯದ್ಭುತವಾದ ಈ 'ಮೆಸ್ಮರಿಜಮ್ಮಿನ' ಉಂಗುರವು, ಬಹಳ ಪರಿಶ್ರಮದೊಡನೆ ತಯಾರಿಸಲಾಗಿದೆ. ಇದರಲ್ಲಿ ಆಶ್ಚರ್ಯಕರವಾದ, ಸೂಜಿ

ಕಲ್ಲಿನ ಗುಣಗಳುಳ್ಳ, ವಿದ್ಯುಚ್ಛಕ್ತಿಯುಳ್ಳ ಪದಾರ್ಥಗಳಿವೆ. ವಿಸ್ಮಯಜನಕವಾದ ಈ ಉಂಗುರದಲ್ಲಿ, ವಿಚಿತ್ರವಾದ ಇಂದ್ರಜಾಲ ಶಕ್ತಿಯು ತುಂಬಿದೆ. ಈ ಉಂಗುರದ ಮೂಲಕ, ಕ್ಷಣಮಾತ್ರದಲ್ಲಿ, ವರ್ತಮಾನ, ಭೂತ, ಭವಿಷ್ಯತ್ತಿನ ವಿಷಯಗಳನ್ನು ಬಹಳ ಸುಲಭವಾಗಿ ನಿರ್ಧರಿಸಬಹುದು. ಸತ್ತವರನ್ನು ಅಥವಾ ಇದ್ದವರನ್ನು ಸಂದರ್ಶಿಸುವುದು, ಸಾವಿರಾರು ಮೈಲುಗಳ ದೂರದ ಸಂಗತಿಗಳನ್ನು ತಿಳಿದುಕೊಳ್ಳುವುದು, ಹುಗಿದ ನಿಧಿಯ ಶೋಧನೆ, ರೋಗಿಯ ಕಾಹಿಲೆಯ ವಾರ್ತೆ, ಕಳೆದು ಹೋದ ಪದಾರ್ಥ ತಿರುಗಿ ದೊರಕೋಣ, ಬಂದು ಮಾಡಿದ ಕವರಿನ ವಿಚಾರ ತಿಳಿಯೋಣ, ಅಲ್ಲದೆ ಸೋಡ್ತಿಯಲ್ಲಿ ಬಹುಮೂಲ ಸಿಕ್ಕುವ ಸಂಬರು, ಗುಪ್ತ ದ್ರವ್ಯದ ಕುರುಹು, ಗುಪ್ತ ಪ್ರಶ್ನೆಗಳಿಗೆ ಉತ್ತರಗಳು—ಇವೇ ಮೊದಲಾದ ಇತರ ಸಾವಿರಾರು ಆಶ್ಚರ್ಯಕರವಾದ ಕಾರ್ಯಗಳೂ ಈ ಉಂಗುರದ ಮೂಲಕ ಕ್ಷಣಕಾಲದಲ್ಲಿ ಸಾಧ್ಯವಾಗುತ್ತದೆ. ಪ್ರತಿ ಉಂಗುರದೊಡನೆ ಸೂಚೀಪತ್ರವೂ. ಬೆಲೆ ರೂ. 2/- ಪೋಸ್ಟೇಜ್ ಆಣೆ 8. ಸಿಕ್ಕುವ ವಿಳಾಸ:—

KRISHNA MAGICAL HOUSE,

No. 2, Aligarh, U. P.

ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ಬೆಲೆ ಬಹು ಸುಲಭ! | ಒಂದೇ ದರ!! | ಹೊಸ ಜವುಳಿಗಳು!!!

ಮ್ಹಾಲುಗಳ ಬಣ್ಣ, ಮೊಳ ಮುಂತಾದ ನಿಜಸ್ಥಿತಿಗಳನ್ನು ಹೇಳಿಯೇ ಮಾರಲ್ಪಡುತ್ತದೆ.

ಒಮ್ಮೆ ದಯಮಾಡಿ ಬಂದು ನಮ್ಮ ಮಳಿಗೆಯನ್ನು ಸಂದರ್ಶಿಸಿದ್ದಲ್ಲಿ ಮನಸ್ಸಿಗೆ ಸಮಾಧಾನ ಕಂಡೀತು.

ಈಗಿನ ಹೊಸ ಹೊಸ ಫೇಶನುಗಳಿಗೂ, ಮದುವೆ ಮೊದಲಾದ ಶುಭಕಾರ್ಯಗಳಿಗೂ ಬೇಕಾದ ನಮೂನೆವಾರು ರೇಶ್ಮೆ ಜರಿ ಶೀರೆಗಳೂ, ಬೇರೆ ಬೇರೆ ಪ್ರಾಂತದ ಕೈಮಗ್ಗಗಳಲ್ಲಿ ತಯಾರಾದ ಅನೇಕ ವಿಧದ ಸ್ವದೇಶಿ ಶೀರೆಗಳೂ, ಮಂಗಳೂರು ಉಡ್ಪಿಯಲ್ಲಿ ತಯಾರಾದ ಮಿಶನ್ ಮಗ್ಗದ ಶೀರೆಗಳೂ ರಖಂ ಮತ್ತು ಚಿಲ್ಲರೆಯಾಗಿ ದೊರೆಯುತ್ತವೆ.

ಸಿಲ್ಕು, ಜರಿ ಮತ್ತು ನೂಲಿನ ನಾಜೂಕಾದ ಧೋತಿಗಳು, ಶಾಲು, ರುಮಾಲುಗಳು, ಮಡಿಗಳು, ಕೋಟಿಂಗ್ ಮತ್ತು ಶರ್ಟಿಂಗ್ ಬಟ್ಟೆಗಳೂ, ಇನ್ನೂ ಅನೇಕಾನೇಕ ನಮೂನೆವಾರು ಜವುಳಿಗಳೂ ಕೂಡಾ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕಿವೆ.

☞ವಿ. ಸೂ:— ನಮ್ಮಲ್ಲಿ ಪಡೆದ ಮ್ಹಾಲು ಬೇರೆ ಕಡೆಗಳಿಗಿಂತ ಬೆಲೆ ಸುಲಭವಲ್ಲವೆಂತ ಕಂಡುಬಂದಲ್ಲಿ ಯಾ ಇತರ ಕಾರಣಗಳಿಂದಾಗಲಿ ಬೇಡವೆಂತ ತೋರಿದ್ದಲ್ಲಿ ಹಾಳು ಮಾಡದೆ 8 ದಿವಸದೊಳಗೆ ವಾಪಾಸು ಮಾಡಬಹುದು.

ಸೇಲಂಕಾರ್ ಎ. ವರದರಾಜು ಚೆಟ್ಟಿಯಾರ್, ಜವುಳಿ ಅಂಗಡಿ, ಕೋರ್ಟ್‌ಟು ರಸ್ತೆ, ಮಂಗಳೂರು.

ಜಗತ್ತಿನ ಹೆಸರಾಂತ ಬಾಲನಟಿ

ಶರ್ಲೆ ಟೆಂಪಲ್

(ಲೇಖಕ:—ಮಾಸ್ಟರ್ ವೆಂಕಣ್ಣ.)

ಜಗತ್ತಿನ ನಾಟಕರಂಗಭೂಮಿಯಲ್ಲಾಗಲೀ, ಚಲಚ್ಚಿತ್ರ ಪ್ರಪಂಚದಲ್ಲಾಗಲೀ ಯಾರೂ ಪಡೆಯದಂತಹ ಮೆಚ್ಚುಗೆಯನ್ನು ಪಡೆದು, ಜಗತ್ತೇ ಪ್ರೀತಿಸುವಂತೆ ಮಾಡಿಕೊಂಡ ಬಾಲನಟಿ ಯಾದ ಶರ್ಲೆಯು ಇವೀಗ ಏಳು ವರುಷಗಳ ಹಿಂದೆ 'ಸಂತಾ ಮೊನಿಕಾ' ಎಂಬಲ್ಲಿ ಎಪ್ರಿಲ್ ತಿಂಗಳ ೨೩ನೇ ತಾರೀಕಿಗೆ ಜನ್ಮ ವೆತ್ತಿದಳು. ತನ್ನ ಬಾಲನಟನೆಯಿಂದ ಅಬಾಲವೃದ್ಧರ ಮನವನ್ನೆಲ್ಲ ಸೂರೆಗೊಂಡ ಈಕೆಯ ತಂದೆತಾಯಿಗಳಾದರೊ ಅಭಿನಯಕಲೆಯನ್ನಾಗಲೀ, ರಂಗಭೂಮಿ–ಚಲಚ್ಚಿತ್ರಪ್ರಪಂಚವನ್ನಾಗಲೀ ಅರಿಯದಿರುವವರು. ತನ್ನ ಹಿರಿಯರಿಂದ ಅಭಿನಯದ ಗಂಧವು ಅಂಟದೇ ಇದ್ದರೂ ಕೂಡ ಈಕೆಗೆ ಸ್ವಾಭಾವಿಕವಾಗಿ ಅಭಿನಯ ಕಲೆಯು ತಿಳಿದು–ಅದೊಂದು ದೈವಿಕವಾದ ಚಾತುರ್ಯವು–ಕಲಾ ದೇವಿಯ ಲೀಲೆಯು—ಅವಳಲ್ಲಿ ಪ್ರವೇಶಿಸಿ, ಅವಳನ್ನು ಜಗತ್ಪ್ರ ಖ್ಯಾತಳನ್ನಾಗಿ ಮಾಡಿಬಿಟ್ಟಿತು.

ಈಕೆಗೆ ತನ್ನ ಪ್ರತೀತಿಯ ಭಾವವು ಮನದಲ್ಲಿನ್ನೂ ಮೂಡಲಿಲ್ಲವಾದುದರಿಂದಲೇ ಈಕೆಯು ಇನ್ನೂ ಇನ್ನೂ ಪ್ರಖ್ಯಾತಳಾಗುತ್ತಾಳೆ. ಯಾರಿಗೆ ತಾನು ಜಗತ್ಪ್ರಖ್ಯಾತನೆಂಬುದು ತಿಳಿಯಬರುವುದೋ ಆತನು ಆ ತಿಳುವಳಿಕೆ ಹೊಂದಿದಂದಿನಿಂದ ಅಪ್ರಖ್ಯಾತನಾಗುವುದು ಸ್ವಾಭಾವಿಕ. ಆದರೆ ಶರ್ಲೆಯಲ್ಲಿ ಆ ಭಾವವು ಇನ್ನೂ ಮೂಡಿಲ್ಲ, ಅನುಕರಣೆಗಳ ರೋಗವು ಅಂಟಿಲ್ಲ. ಅದರಿಂದಲೇ ಬಾಲಲೀಲೆಯ ನೈಜ ನಟನೆಯನ್ನಾಕೆ ನಟಿಸಬಲ್ಲವಳಾಗಿರುವಳು.

ಅವಳನ್ನು ಕಂಡರೆ ಚಿಕ್ಕ ಮಕ್ಕಳಿಗೆ ಬಹಳ ಅಕ್ಕರೆ. ಶರ್ಲೆ ಇದ್ದಳಿಂದಾದರೆ ಮಕ್ಕಳಿಗೆ (ಅಮೇರಿಕೆಯಲ್ಲಿ) ತಮ್ಮ ಬೈಬಲ ಗ್ರಂಥವು ಬೇಕಿಲ್ಲ, ತಿಂಡಿತೀರ್ಥಗಳ ಯೋಚನೆಯಿಲ್ಲ. ತಂದೆ ತಾಯಂದಿರ ಭಯವಿಲ್ಲ. ಅಂತೂ ಶರ್ಲೆಯು ಬಂದಳೆಂದರೆ ಎಲ್ಲರೂ ಆನಂದದಿಂದ ಕಾಲ ಕಳೆಯುವರು. ಅವಳಿಗೆ ಹಾಗೆ ಹೆಚ್ಚಿಗೆ ಆನಂದದಿಂದ ಕಾಲ ಕಳೆಯಲೂ ಸನುಯವಿಲ್ಲ. ತನ್ನ ಹೆಚ್ಚಿನ ಸಮಯವೆಲ್ಲ ಚಲಚ್ಚಿತ್ರಕಲಾಮಂದಿರದಲ್ಲೇ (Studio) ಕಳೆದುಹೋಗುವುದು. ಆದಿತ್ಯವಾರಗಳಲ್ಲಿ ಮಾತ್ರ ಕೊಂಚ ಸಮಯ—ಆ ದಿನ ಆಕೆಗೆ ಆನಂದ.

ಅವಳ ಪ್ರತೀತಿಯನ್ನು ಆಕೆಗೆ ಪ್ರತಿ ದಿನ ಬರುವ ಪತ್ರಗಳ ಸಂಖ್ಯೆಯಿಂದಲೇ ತಿಳಿದುಕೊಳ್ಳಬಹುದು. ಶರ್ಲೆಗೆ ಪ್ರತಿ ದಿನವೂ ಸರಾಸರಿ ಎರಡು ಸಾವಿರದಂತೆ ಪತ್ರವು ಬರುವುದು. ಅಲ್ಲದೆ ವಾರಕ್ಕೆ ಸುಮಾರು ಮೂರು ಸಾವಿರದಷ್ಟು ಆಕೆಯ ಚಿತ್ರದ ಮೇಲೆ ಸಹಿಹಾಕಿ ಕೊಡಬೇಕಾದ ಬೇಡಿಕೆಗಳು. ಹಾಗಿರಲು ಆಕೆಯನ್ನು ಜನರೆಷ್ಟು ಪ್ರೀತಿಸುವರೆಂಬುದಾದರೂ ವ್ಯಕ್ತವಾಗಬಹುದಷ್ಟೆ! ಇಂತಹ ಪತ್ರಗಳೆಲ್ಲ ಹೆಚ್ಚಾಗಿ ಅಮೇರಿಕೆಯ—ಸಂಘಗಳಿಂದಲೋ, ಶಾಲೆಯ ಮಂಡಲಿಗಳಿಂದಲೋ, 'ಕ್ಲಬ್ಬು'ಗಳಿಂದಲೋ, ವಾಚನಾಲಯಗಳಿಂದಲೋ ಆಕೆಯನ್ನು ಬರಬೇಕಾಗಿ ಬೇಡಿರುವ ಪತ್ರಗಳು. ಇನ್ನು ಕೆಲವು ಪ್ರಶಂಸಾ ಪತ್ರಗಳು ಇತ್ಯಾದಿ. ಆದರೆ ಅದಕ್ಕೆಲ್ಲ ಉತ್ತರಗಳೆಂದರೆ ಹೆಚ್ಚಾಗಿ ಒಂದೇ,–ತಮ್ಮ ಸಂಘ-ಸಂಸ್ಥೆಗಳನ್ನು ಸಾಂಗಗೊಳಿಸಲು ನನಗೆ ಸಮಯವಿಲ್ಲ, ಕ್ಷಮಿಸಿ–ಎಂದು. ಅಲ್ಲದಿದ್ದಲ್ಲಿ ಅದೆಷ್ಟು ಕಡೆಗೆ ಆಕೆ ತೆರಳಬಹುದು?–ಅದೆಷ್ಟು ಜನರನ್ನು ಹರ್ಷಚಿತ್ತರನ್ನಾಗಿ ಮಾಡಬಹುದು?

ಶರ್ಲೆಗೆ ಮೂರು ವರ್ಷ ತುಂಬಿದಾಗ ಆಕೆಯನ್ನು ನರ್ತನ ಶಾಲೆಗೆ ಕಳುಹಿಸಿದರು. ಅಲ್ಲಿ ನರ್ತನದ ಬೆಡಗಿನಿಂದ ಎಲ್ಲರಿಗೂ ಚೋದ್ಯವನ್ನುಂಟುಮಾಡಿದಳು. ನರ್ತನವು ಆಕೆಗೆ ಸ್ವಾಭಾವಿಕವಾಗಿಯೇ ಬಂದಿತು. ಆಕೆಯು ನರ್ತನವನ್ನು ಪ್ರೀತಿಸುತಿದ್ದುದರಿಂದಲೇ ನರ್ತನದಲ್ಲಿ ಪ್ರವೀಣಳಾದಳು.

ಆಕೆಯನ್ನು ಆಕೆಯ ಸಹ–ಬಾಲಕಿಯರೊಡನೆ,–ಆಗಿನ್ನೂ ಆಕೆಗೆ ಮೂರು ವರ್ಷಪ್ರಾಯವಾಗಿದ್ದಾಗ, ಅದೊಂದು ಹಾಸ್ಯ ಚಿತ್ರಕ್ಕೆ ಆಕೆಯನ್ನಾರಿಸಿದರು. ಅದರಲ್ಲಿ ಆಕೆಯು ತೋರಿದ ಕೌಶಲ್ಯವು ಚಲಚ್ಚಿತ್ರಸಂಸ್ಥೆಗಳನ್ನೆಲ್ಲಾ ಸೆಳೆದುವು.

'ಪೆರಮೌಂಟ್' ಕಂಪೆನಿಯ ಒಂದು ಚಿತ್ರದಲ್ಲಿ ಅಭಿನಯಿಸಿದನಂತರದಲ್ಲಿ ಆಕೆಯು 'ಫೋಕ್ಸ್' ಕಂಪೆನಿಯನ್ನು ಸೇರಿದಳು. ಅವರ 'ಸ್ಟೇಂಡಪ್ ಎಂಡ್ ಚಿಯರ್' (Stand up and Cheer) ಎಂಬ ಚಿತ್ರದಲ್ಲಿ ಅಭಿನಯಿಸಿ ಯಾವ ನಟನಾಗಲೀ ನಟಿಯಾಗಲೀ ಪಡೆಯದ ಪ್ರತೀತಿಯನ್ನು ಪಡೆದಳು. ಈ ಚಿತ್ರದ ಪ್ರತೀತಿಯಿಂದ ಅವಳ ಜೀವನವು ಬೆಳಗಿತು. ಆಕೆಗೆ ವಾರಕ್ಕೆ ೧೫೦ ಡಾಲರುಗಳ ಸಂಬಳವು ದೊರೆಯಿತು.

ಇದರಿಂದ ಆಕೆಗೆ ಸರಿಯಾದ ವಿರಾಮವೂ—ಕೊಂಚ ಮಟ್ಟಗೆ—ದೊರೆಯಲಾರಂಭಿಸಿತು. ಅವಳಿಗಾಗಿಯೇ ಕಲಾ ಮಂದಿರದಲ್ಲೇ (Studio) ಒಬ್ಬ ಉಪಾಧ್ಯಾಯಿನಿಯು ನೇಮಿಸಲ್ಪಟ್ಟಳು. ದಿವಸದಲ್ಲಿ ಮೂರು ತಾಸುಗಳ ವಿದ್ಯಾಭ್ಯಾಸವೂ ಆರಂಭವಾಯಿತು. ಅವಳ ಉಪಾಧ್ಯಾಯಿನಿಯಳೇ ಅವಳ ಮೇಲ್ವಿಚಾರಕಳಾದಳು,—ಕಲಾಮಂದಿರದಲ್ಲಿನ ಅವಳ ತಾಯಿಯಾದಳು.

ಸಿನೆಮಾ ಪುಟ

ಶರ್ಲೆಗೆ ಆಕೆಯು ಹಲವು ಭಾಷೆಗಳನ್ನು ಕಲಿಸಿದಳು. ಬಾಲನಟಿಯು ತನ್ನ ಭಾಷೆಯಾದ ಇಂಗ್ಲೀಷ್ ಮಾತ್ರವಲ್ಲದೆ ಫ್ರೆಂಚ್, ಸ್ಪೇನಿಶ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳನ್ನು ಮಾತಾಡಬಲ್ಲಳು. ಅಲ್ಲದೆ ಅಮೇರಿಕೆಯ ಮೂಲ ನಿವಾಸಿಗಳ ಜಾನಪದಸಾಹಿತ್ಯವನ್ನೂ ಅಭ್ಯಾಸಿಸಿ ಅದನ್ನೂ ಹಾಡಬಲ್ಲವಳಾಗಿರುವಳು.

ಆಕೆಯು ಆಟದ ಸಾವಾನುಗಳನ್ನು ತುಂಬಾ ಪ್ರೀತಿಸುವಳು. ಅಲ್ಲದೆ ಆಕೆಯ ಪ್ರೀತಿಯ ಪ್ರಾಣಿಗಳು ಹಲವಿವೆ. ಆಕೆಯ ಮನೆಯಲ್ಲಂತೂ ಆಕೆಯದೇ ಆದ 'ರಿಡೀ' ಎಂಬ ಪ್ರೀತಿಯ ನಾಯಿಯೂ, 'ಕೋರ್ಕಿ' ಎಂಬ ಇನ್ನೊಂದು ನಾಯಿಯೂ ಇದೆ. ಅಲ್ಲದೆ ಕೆಂಗಾರು, ಬೆಕ್ಕು, ದನದ ಕರು, ಹಕ್ಕಿಗಳು ಮುಂತಾದವು ಆಕೆಯ ಪ್ರೀತಿಯ ಪ್ರಾಣಿಗಳು. ಆಕೆಯ ಅತ್ಯಂತ ಪ್ರೀತಿಯ ಪ್ರಾಣಿಯು ಆಕೆಯ ತಾಯಿಯಿತ್ತ ಒಂದು ಕುದುರೆ ಮರಿ!

ಜೊನ್ ಕ್ರಾಫೋರ್ಡ್.

ಪ್ರತಿ ವರುಷವೂ ಚಲಚ್ಚಿತ್ರಸಂಸ್ಥೆಯವರು ಆಕೆಗೆ ಒಂದು ವರೆ ತಿಂಗಳ ರಜೆಯನ್ನು ಕೊಡುವರಲ್ಲದೆ ಪ್ರತಿಯೊಂದು ಚಿತ್ರವನ್ನು ಪೂರೈಸಿದನಂತರದಲ್ಲಿ ಎರಡು ಖಾರಗಳ ವಿರಾಮವನ್ನೀಯುವರು. ಆಕೆಯ ಅತೀ ಉತ್ತಮ ಚಿತ್ರದಲ್ಲಿ ಆಕೆಗೆ ಅನೇಕ ಸಲಹೆಗಳನ್ನಿತ್ತು ಸಹಾಯಕನಾದ 'ಲಯನಲ್ ಬೆರಿಮೋರ್'ನೇ ಆಕೆಯ ಪ್ರೀತಿಯ ನಟ. ಆತನೂ ಆ ಮಗುವನ್ನು ಅತಿಯಾಗಿ ಪ್ರೀತಿಸುವನು.

ಶರ್ಲೆಯ ತಾಯಿಗೆ ಶರ್ಲೆಯು ಪ್ರಖ್ಯಾತಳು ಹೇಗಾದಳು ಎಂಬ ಕುರಿತಾಗಿ ಸಾವಿರಾರು ಪತ್ರಗಳು ಬರುತ್ತಿರುತ್ತಿವೆ. ಅವಕ್ಕೆಲ್ಲ ಆಕೆಯು ಉತ್ತರವನ್ನೂ ಬರೆಯುತ್ತಿಲ್ಲವಂತೆ. ಆದರೆ ನಿಜವಾದ ಉತ್ತರವೆಂದರೆ ಇಷ್ಟೆ!—'ಆಕೆಯನ್ನು ತನ್ನಷ್ಟಕ್ಕೆ ತನಗಿಷ್ಟ ಬಂದಂತೆ ಇರಲು ತಂದೆತಾಯಂದಿರು ಬಿಟ್ಟರು—ಅದರಿಂದ ತನ್ನ ನೈಜ ಕಲೆಯನ್ನು ತಾನೇ ಬೆಳೆಸಿಕೊಂಡಳು' ಎಂಬುದು.

ಆಕೆಯ ಅಭಿನಯದಲ್ಲಿ–ಚಿತ್ರದಲ್ಲಿ–ಏನೂ ಮರೆ ಇಲ್ಲ. ಆಕೆಯ ಪ್ರತೀತಿಯ ಪ್ರಭಾವವು ಆಕೆಯನ್ನಾಕ್ರಮಿಸಿ ಅವಳನ್ನು ಹಾಳುಮಾಡಿಲ್ಲ. ಅನುಕರಣೆಯ ನಟನೆಯವಳನ್ನು ಸೋಕಿಲ್ಲ. ನೈಜ ಬಾಲನಟನೆಯು ಆಕೆಯನ್ನು ಜಗತ್ಪ್ರಖ್ಯಾತಳನ್ನಾಗಿ ಮಾಡಿತು. ಅದರಿಂದಲೇ ಜಗತ್ತು ಆಕೆಯನ್ನು ಪ್ರೀತಿಸುತ್ತಿದೆ; ಆಕೆ ಅಭಿನಯಿಸಿದ ಚಿತ್ರಗಳಿಗಾಗಿ ಹಾತೊರೆಯುತ್ತಿದೆ.

WANTED

Candidates for Telegraph and **Station** Master_ Class. Allowance Rs. 28. **Uniform,** passage and quarter free. Service **essential.** Rules and entrance form on annas **eight.** Director, Royal Telegraph and Rly. **Duties** College.

6, 2-6. Bombay **No. 14.**

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

"ಗೋನೋಕಿಲರ್"
(ರಿಜಿಸ್ಟರ್ಡ್)

ಡಾ. ಜಸಾನಿಯವರ
ಜಗತ್ಪ್ರಸಿದ್ಧ
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಮು ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆಳುಪು ಹರಿಯುವಿಕೆ ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಜೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

THE NEDUNGADI BANK, LIMITED.
ದಿ ನೆಡುಙ್ಙಾಡಿ ಬೇಂಕ್, ಲಿಮಿಟೆಡ್,
ಹೆಡ್ ಆಫೀಸ್:—ಕಲ್ಲಿಕೋಟೆ.

ಯಾವತ್ತೂ ಬಗೆಯ ಬೇಕಿಂಗಿನ ವಹಿವಾಟುಗಳು
ಆಕರ್ಷಣೀಯವಾದ ದರಗಳು.
ಐದು ರೂಪಾಯಿಗಳ ಒಂದೇ ನೋಟು ಒಂದು ಸೇವಿಂಗ್ಸ್ ಬೇಂಕ್ ಎಕೌಂಟನ್ನು ತೆರೆಯುತ್ತದೆ.
ಇಂದೇ ಅದನ್ನು ಆರಂಭಿಸಬಾರದೆ?
ನಿರಖು ಠೇವಣಾತಿ.

3 ತಿಂಗಳ ಠೇವಣಾತಿಯ ಮೇಲೆ ವರ್ಷಕ್ಕೆ 3½%
6 " " " " 5½%
12 ತಿಂಗಳ ಠೇವಣಾತಿಯ ಮೇಲೆ ವರ್ಷಕ್ಕೆ 6 %
24 " " " " 6½%
ಸೇವಿಂಗ್ಸ್ ಬ್ಯಾಂಕ್ 4½%ಯಂತೆ. ಚಾಲ್ತಿ ಲೆಕ್ಕ 2½%ಯಂತೆ.

"ನಸುನಗೆಯೊಡನೆ ನಿಮ್ಮ ಸೇವೆ."

ಚಹಾದ ಸಂಕ್ಷೇಪ ಚರಿತ್ರೆ.

(ವೃದ್ಧಿಸಾಧನೆಯ ಒಂದು ಶತಮಾನ)

ಭಾರತೀಯ ಚಹಾವು ತನ್ನ ವೃದ್ಧಿಸಾಧನೆಯ ಪ್ರಥಮ ಮಹೋತ್ಸವವನ್ನು ೧೯೩೪ರಲ್ಲಿ ಆಚರಿಸಿತು. ೧೮೩೪ರಲ್ಲಿ ಲಾರ್ಡ್ ವಿಲ್ಲಿಯಮ್ ಬೆಂಟಿಂಕ್‌ರವರ ಸರಕಾರವು ಭಾರತದಲ್ಲಿ ಚಹಾವನ್ನು ಬೆಳೆಸುವ ಪ್ರಶ್ನೆಯನ್ನು ಎತ್ತಿಕೊಂಡಿತು. ಕನಿಷ್ಟಪಕ್ಷ, ಇದಕ್ಕೂ ೨೦ ವರ್ಷಗಳಿಗೂ ಮೊದಲಾಗಿಯೇ ಭಾರತದಲ್ಲಿ ಚಹಾ ಸಸಿಯು ಕಂಡುಹಿಡಿಯಲ್ಪಟ್ಟಿದ್ದಿತು. ಅದು ಹೇಗಾದರೂ, ಭಾರತೀಯ ಚಹಾವನ್ನು ವ್ಯಾಪಾರದ ಪ್ರಮಾಣಕ್ಕೆ ಬೇಕಾಗುವಷ್ಟು ಮಟ್ಟಿಗೆ ಒದಗಿಸಿಕೊಡಲು ಆ ಕೆಲವು ವರ್ಷಗಳ ಪರಿಶೋಧನೆಯಿಂದ ಯಾವ ಸಹಾಯವೂ ದೊರಕಿದಂತೆ ತೋರಲಿಲ್ಲ. ೧೮೫೫ನೇ ಇಸ್ವಿಯಷ್ಟು ಪೂರ್ವದಲ್ಲಿಯೇ ಅಸಾಮಿನ ಇಂಗ್ಲೀಷ್ ನಿವಾಸಿಯೊಬ್ಬನು, ಈ ಕುರಿತಾಗಿ ಪ್ರಸ್ತಾವವೆತ್ತಿದುದು, ದಾಖಲೆಗಳಲ್ಲಿಯೇ ಇರುವುದಾದರೂ ಪುನಃ ೧೮೩೪ರಲ್ಲಿ ಮಿ। ಬ್ರೂಸ್ ರೆಂಬವರು ಸಾದಿಯೆಯ ಸ್ವಂತ ತೋಟದಲ್ಲಿಯೇ ಅದನ್ನು ಬೆಳೆಸಿದರೆಂದು ಹೇಳಲಾಗಿದೆಯಾದರೂ, ಕಲ್ಕತ್ತೆಯ ಸಸ್ಯಶಾಸ್ತ್ರ ಪಂಡಿತರು, ಈ ಚಹಾ ಸಸಿಯು ಭಾರತದ್ದು, ಸ್ವದೇಶೀಯವಾದುದೆಂದು, ಮೊದಮೊದಲು ಒಪ್ಪಲು ಹಿಂಜರಿದೇ ಇದ್ದರು. ೧೮೩೪ನೇ ಇಸ್ವಿ ನವೆಂಬರಿನಲ್ಲಿ, ಅಸಾಮಿನಿಂದ ಕಲ್ಕತ್ತೆಗೆ ಕಳುಹಿಸಲಾದ ಮೊದಲನೆಯ ಚಹಾ ಸಸಿಯು, ಚೀನದ ಸಸಿಯ ಹಾಗೆಯೇ ಇದೆ ಎಂದು ಖಂಡಿತವಾಗಿ ಗುರುತಿಸಲ್ಪಟ್ಟಿತು. ಅಲ್ಲಿಂದತ್ತ, ಅನೇಕ ಕಷ್ಟ, ವಿಪತ್ತುಗಳೊದಗಿದರೂ, ಭಾರತೀಯ ಚಹಾ ಕೈಗಾರಿಕೆಯು ಕ್ರಮವಾಗಿ ವೃದ್ಧಿಗೊಳ್ಳುತ್ತ ಬಂದಿದೆ. ಅದು ಇಂದು, ಸಮಗ್ರ ಭಾರತದಲ್ಲೆಲ್ಲ, ಅತ್ಯಂತ ಸುವ್ಯವಸ್ಥೆಗೊಳಗಾಗಿ ನಡೆಯುತ್ತಿರುವ ದೊಡ್ಡ ಉದ್ಯಮಗಳಲ್ಲಿ ಒಂದಾಗಿದೆ.

ಭಾರತೀಯ ಚಹಾ ಕೈಗಾರಿಕೆಯ ಜನನವು, ಕೆಲವೊಂದು ಬಾಲಾರಿಷ್ಟಗಳಿಗೆ ಒಳಗಾಗದಿರಲಿಲ್ಲ. ಆರಂಭದೆಶೆಯಲ್ಲಿ, ಭಾರತದಲ್ಲಿ ಚಹಾವನ್ನು ಯಶಸ್ವಿಯಾಗಿ ಬೆಳೆಯಬಹುದೋ, ಕೂಡದೋ ಎಂಬ ವಿಷಯದಲ್ಲಿ ಸಂಶಯಗಳೂ, ಬೆದರಿಕೆಗಳೂ ಇದ್ದೇ ಇದ್ದುವು. ಚೀನದಿಂದ ಬೀಜಗಳನ್ನು ಮಾತ್ರವಲ್ಲದೆ, ಚೀನದ ಕೃಷಿಕರನ್ನೂ ಇಲ್ಲಿಗೆ ಕರೆತರುವ ಹಾಗೆ, ಇಲ್ಲಿಂದ ಒಂದು ಮಿಶನ್ ಅಲ್ಲಿಗೆ ಕಳುಹಿಸಲ್ಪಟ್ಟಿತು. ಸಿಂಗಪೂ ಗುಡ್ಡಗಳ ನಿವಾಸಿಗಳ ದೇಶವಾದ ಮೇಲಿನ ಅಸಾಮಿನಲ್ಲಿ, ಚಹಾವು, ಕಾಡಿನ ಹಾಗೆ ವಿಪುಲವಾಗಿ ಬೆಳೆಯುತ್ತಿದ್ದುದು ಕಂಡುಬರುತ್ತಿದ್ದರೂ ಕೂಡ, ವಸ್ತುತಃ ಆಗ ಅಸಾಮು, ಈ ಚಿತ್ರದಲ್ಲಿರಲಿಲ್ಲ. ಅಸಾಮಿನ ಕವಿಾಶನರರಾದ ಮಿ. ಡೇವಿಡ್ ಸ್ಕಾಟ್‌ರವರು, ೧೮೨೦ ಸುಮಾರಿನಲ್ಲಿ, ಕಲ್ಕತ್ತೆಗೆ ಕಳುಹಿಸಿಕೊಟ್ಟ ಕೆಲವು ಚಹಾದ ಎಲೆಗಳು, ಲಂಡನಿನ ಲಿನ್‌ಯೆನ್ ಸಂಘದ ವನಸ್ಪತ್ಯಾಲಯದಲ್ಲಿ ಈಗಲೂ ಸುರಕ್ಷಿತವಾಗಿರಿಸಲ್ಪಟ್ಟಿವೆ. ಇವುಗಳು, ನಾವಿಂದು ತಿಳಿದಿರುವ ಅಸಾಮ್ ಸಸಿಗಳವೇ; ಬೇರೆಯಲ್ಲ. ಇಷ್ಟಾದರೂ ಅನೇಕ ವರ್ಷಗಳ ವರೆಗೆ, ಚೀನಾದಿಂದ ಇಲ್ಲಿಗೆ, ಬೀಜಗಳು ಕ್ರಮವಾಗಿ ಸಾಗಿ ಬರುವುದು ತಪ್ಪಲಿಲ್ಲ. ಆದರೆ, ಅಲ್ಲಿಂದ ಇಲ್ಲಿಗೆ ಸಸಿಗಳನ್ನು ತರುವ ಈ ಉತ್ಸಾಹಕಾರ್ಯವು, ಅವಜಯದಲ್ಲಿ ಕೊನೆಗೊಳ್ಳಬೇಕಾಯಿತು. ಅಂತ್ಯದಲ್ಲಿ ಸ್ವದೇಶೀಯವಾದ ಅಸಾಮಿನ ಸಸಿಯನ್ನು ಸಮರ್ಥಿಸಿದವರ ಕೊರಳಿಗೇ ವಿಜಯದ ಬಹುಮಾನದ ಮಾಲೆ ಬಿದ್ದಿತು.

ಕಲ್ಕತ್ತೆಗೆ ಕಳುಹಿಸುವಷ್ಟು ಉತ್ತಮವಾದ ಅಸಾಮಿನ ಮೊದಲಿನ ಚಹಾ, ೧೮೫೬ನೇ ಇಸ್ವಿಯಲ್ಲಿ ನಿರ್ಮಾಣಮಾಡಲ್ಪಟ್ಟಿತು. ಅಸಾಮಿನ ಸಸಿಯಿಂದ ಉತ್ತಮ ಚಹಾವನ್ನು ತಯಾರಿಸಬಹುದೆಂದು, ಹೀಗೆ ಆ ಪ್ರಶ್ನೆಯ ನಿರ್ಣಯವು ಕಾರ್ಯತಃ ಆಯಿತು. ಮರು ವರ್ಷ, ಹಿಂದಿನ ಚಹಾಕ್ಕಿಂತ ಹೆಚ್ಚಾದ ಮತ್ತೂ ಉತ್ತಮವಾದ ಚಹಾವನ್ನು ತಯಾರುಮಾಡಲಾಯಿತು; ಹಾಗೂ ಅಸಾಮ್ ಚಹಾವು ವ್ಯಾಪಾರಕ್ಕೆ ತಕ್ಕ ಸಾಮುಗ್ರಿ ಎಂದು ಕೊನೆಯಲ್ಲಿ ಅಂಗೀಕರಿಸಲ್ಪಟ್ಟಿತು. ಅಸಾಮಿನ ಸರಕಾರೀ ಚಹಾತೋಟಗಳಿಂದ, ಇಂಗ್ಲೆಂಡಿಗೆ, ೧೮೫೯ರಲ್ಲಿ, ಪ್ರಥಮತಃ ಭಾರತೀಯ ಚಹಾ ಕಳುಹಿಸಲ್ಪಟ್ಟಿತು. ಹೀಗೆ ಕೃಷಿ ಆರಂಭವಾಗಿ ನಾಲ್ಕು ವರ್ಷಗಳ ಮೇಲೆ, ಮಾರ್ಕೆಟಿನಲ್ಲಿ ಭಾರತೀಯ ಚಹಾವನ್ನು ಇರಿಸಿದ ದಾಯ್ತು.

ಮತ್ತೂ ಆ ನಿಮಿಷದಿಂದಲೇ ಭಾರತೀಯ ಚಹಾ ಕೈಗಾರಿಕೆಯೂ ಆರಂಭವಾಯಿತು. ವ್ಯವಹಾರಜ್ಞರು, ಕ್ರಮಶಃ ಪರಿಶೋಧನಾಕರ್ಮಗಳನ್ನು ಬದಲಾಯಿಸುತ್ತ ಬಂದರು. ವ್ಯಾಪಾರದೃಷ್ಟಿಯಿಂದ ಈ ಸಾಹಸೋದ್ಯಮವನ್ನು ವಾಣಿಜ್ಯವಿಜಯವೆನ್ನಿಸಬೇಕಾಗಿದ್ದರೆ, ಅದೆಷ್ಟೋ ದೂರಪ್ರಯಾಣದ ಮಾತೇ ನಿಜ; ಆದರೂ ಇದರಲ್ಲಿ ಕಾಲನ್ನು ಹಿಂದಿಕ್ಕುವ ಮಾತಿರಲಿಲ್ಲ. ಪ್ರಕೃತದ ಅಸಾಮ್ ಕಂಪೆನಿಯು, ಲಕ್ಷ್ಮೀಪುರದ ಸರಕಾರೀ ಪರಿಶೋಧನಾರ್ಥವಾದ ತೋಟವನ್ನು ೧೮೪೦ರಲ್ಲಿ ತೆಗೆದುಕೊಂಡಿತು. ಗುಡ್ಡಗಳ ಬುಡದಲ್ಲಿಯೇ ಚಹಾವನ್ನು ಬೆಳೆಯಬೇಕೆಂಬ ಮನೋಮುದ್ರೆಯೊಂದು ಪ್ರಬಲವಾಗಿದ್ದುದರಿಂದ, ಈ ಕೈಗಾರಿಕೆಯು, ಹೆಚ್ಚೂ ಕಡಿಮೆ, ಮೇಲಿನ ಅಸಾಮಿನೊಳಗೇ ಸುಳಿದಾಡುತ್ತಿದ್ದಿತು. ೧೮೫೬ರಲ್ಲಿ ಕಾಚಾರ್, ಸಿಲ್ಹೆಟ್ ಮತ್ತೂ ಬಹ್ಮಪುತ್ರಾ, ಸುರ್ಮಾ ಕಣಿವೆಗಳ ಇತರ ಕಡೆಗಳಲ್ಲಿಯೂ ಚಹಾದ ತೋಟಗಳು ಪ್ರಾರಂಭವಾದುವು. ದಾರ್ಜಿಲಿಂಗ್ ಜಿಲ್ಲೆಯಲ್ಲಿ ಚಹಾದ ಬೆಳವಣಿಗೆಗೆ ಸುಮಾರು ೧೮೫೫-೫೯ರಲ್ಲಿ ಮೊದಲಾಯಿತು. ಅದರ ಉದಾಹರಣೆಯನ್ನೇ ತೇರಾಯಿ ಹಾಗೂ ಪೂರ್ವ ಪಶ್ಚಿಮ ದುಹಾರಾಗಳೂ ಅನುಸರಿಸಿದುವು. ಇದೇ ರೀತಿ ಮುಂಬರಿಯಿತು.

ಭಾರತೀಯ ಚಹಾದ ವೃದ್ಧಿಗತಿಯ ಆ ಶತಮಾನವು, ಇಂಡಿಯದ ಅತ್ಯಂತ ಪ್ರಬಲವಾದುದೊಂದು ಕೈಗಾರಿಕೆಯನ್ನು ರಚಿಸಿ, ವೃದ್ಧಿಗೊಳಿಸಲು ಮಾಡಿದ ನಿರಂತರವಾದ ಸ್ಥಿರ ಸಾಹಸದ ಒಂದು ದಾಖಲೆಯಾಗಿದೆ. ಈಗ ಇಂಡಿಯದ ಚಹಾದ ಉತ್ಪತ್ತಿಯು ೪೦೦ ಮಿಲ್ಯ ಪೌಂಡಿಗೂ ಹೆಚ್ಚಿದೆ. ಸಾಮಾನ್ಯವಾದ ಒಂದು ಸಸ್ಯಶಾಸ್ತ್ರದ ಪರೀಕ್ಷಾಪ್ರಯೋಗದಿಂದ, ಬರೇ ನೂರು ವರ್ಷಗಳ ಹಿಂದೆ ಮಾಡಿದ ಒಂದು ಊಹಾಪರವಾದ ಅಲ್ಪಾರಂಭದಿಂದ, ಚಹಾವು ಇಡೀ ಜಗತ್ತಿನ ಜೀವನಕ್ಕೇ ಅತ್ಯಾವಶ್ಯಕವಾಗಿರುವ ಒಂದು ಮುಖ್ಯ ಸಾಧನವಾಗಿ ಪರಿಣಮಿಸಿದೆ.

ಚಹಾದ ಆದಿಕಾಲದ ಚರಿತ್ರೆಯು ಪುರಾತನತ್ವದಲ್ಲಿ ಕಳೆದುಹೋಯಿತು. ಭಾರತೀಯ ಐತಿಹ್ಯದ ಮೇರೆಗೆ, ಮೋಕ್ಷಸಾಧನೆಗಾಗಿ, ಸಂಪೂರ್ಣ ಆತ್ಮಿಕ ಮುಕ್ತಿಗಾಗಿ, ನಿದ್ರೆ ಇಲ್ಲದೆ, ಒಂಭತ್ತು ವರ್ಷಗಳ ಕಾಲ ಕಳೆದ ಬುದ್ಧಿಧರ್ಮನೆಂಬ ಒಬ್ಬ ಹಿಂದೂ ಸನ್ಯಾಸಿಯಿಂದಲೇ ಈ ಚಹಾ ಸಸಿಯ ಪರಿಶೋಧನೆಯಾಯಿತೆಂದು, ಈ ಶೋಧನೆಯು ಅವನಿಗೆ ಅನ್ವಯಿಸಲ್ಪಟ್ಟಿದೆ. ಒನೆಯ ವರ್ಷದಲ್ಲಿ, ಅವನು ಆಕಳಿಸಲಾರಂಭಿಸಿದ ಹಾಗೂ, ಆಗಲೇ ಅವನು ಸಮಾಪದಲ್ಲಿದ್ದ ಪೊದೆಯ ಎಲೆಗಳನ್ನು ಕಿತ್ತು ಅಗಿದು ತಿನ್ನಲು ಮೊದಲುಮಾಡಿದ ಹಾಗೂ ತಿಳಿದುಬರುತ್ತಿದೆ. ಇದರಿಂದ, ಅವನಿಗೆ ಪುನಃ ಪೂರ್ಣ ಜಾಗ್ರದಾವಸ್ಥೆಯು ಉಂಟಾಯಿತು; ಮತ್ತೂ ಈ ಎಲೆಗಳನ್ನು ಅಗಿದು, ತಿನ್ನುವುದರಿಂದಲೇ ಅವನ ಸಾಧನೆಯು ಅಂತ್ಯಗೊಂಡಿತು. ಬುದ್ಧನ ಸಂಪೂರ್ಣತೆಯನ್ನು ಸ್ವಾನುಭವಕ್ಕೆ ತಂದುಕೊಂಡವನಾಗಿ, ಬುದ್ಧಧರ್ಮನು ಚೀನಕ್ಕೆ ಧರ್ಮಪ್ರಸಾರಕ್ಕೆ ಹೊರಟನು; ಜತೆಯಲ್ಲಿ 'ಆಶ್ಚರ್ಯಕರವಾದ ಈ ವನಸ್ಪತಿಯನ್ನೂ ತೆಗೆದುಕೊಂಡನು. ಈ ರೀತಿ, ಇಡೀ ಬೌದ್ಧ ಪ್ರಪಂಚದಲ್ಲಿ, ಕ್ರಮಶಃ ಚಹಾ ಕುಡಿಯುವ ಅಭ್ಯಾಸವು ಹರಡಿತೆಂದು ಭಾರತೀಯರ ದಂತಕಥೆ ಹೇಳುತ್ತದೆ.

೧೭ನೆಯ ಶತಮಾನಕ್ಕೆ ಮೊದಲು ಯುರೋಪಿಗೆ ಚಹಾದ ಸಂಗತಿ ತಿಳಿದಿರಲಿಲ್ಲ; ಈ ಶತಮಾನದ ಆದಿಯಲ್ಲಿ ಡಚ್ಚರು ಇದನ್ನು ಪ್ರವೇಶಗೊಳಿಸಿದರು. ಆದರೆ ಅನೇಕ ವರ್ಷಗಳ ವರೆಗೆ ಇದರ ಕ್ರಮವಾದ ವ್ಯಾಪಾರವು ಅಸ್ತಿತ್ವಕ್ಕೆ ಬರಲಿಲ್ಲ. ಅಷ್ಟರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಲಂಡನಿಗೆ ಇದರ 'ಸ್ಯಾಂಪಲ್'ಗಳನ್ನು ತಂದಿತು. ಈ ಕಂಪೆನಿಯ ಒಬ್ಬ ಏಜೆಂಟನಾದ ಮಿ. ವಿಕ್ಕಿಂ ಎಂಬಾತನು, ಜಪಾನಿನಿಂದ ೧೬೩೯ನೇ ಇಸ್ವಿ ಜೂನ್ ೨೭ರಲ್ಲಿ, ಮಕಾವ್‌ದಲ್ಲಿನ ಅದೇ ಕಂಪೆನಿಯ ಮತ್ತೊಬ್ಬ ಆಫೀಸರ್ ಮಿ. ಈಟನ್ ಎಂಬಾತನಿಗೆ ಬರೆದ ಪತ್ರದಲ್ಲಿ, ಇಂಗ್ಲಿಷ್ ಮಂದಿಯು ಚಹಾದ ವಿಷಯದಲ್ಲಿ ಪ್ರಥಮತಃ ಮಾಡಿದ ಉಲ್ಲೇಖವು ಕಂಡುಬರುತ್ತದೆ. ಸಾಮ್ಯುವೇಲ್ ಪೆಪ್ಯೀಸ್ ಎಂಬಾತನು, ಇದನ್ನು ಚೀನೀಯರ ಪಾನೀಯವೆಂದು ಪ್ರಸ್ತಾವಿಸಿ, ಅದು ಸರ್ವಸಾಮಾನ್ಯವಾದ ಪಾನೀಯವೆನ್ನುವುದರಿಂದಲೂ ಅದು ವಾಡಿಕೆಯಾದ ಶೀತ, ನೆಗಡಿಗಳನ್ನು ಪರಿಹರಿಸಲುಳ್ಳ, ಔಷಧವ್ಯಾಪಾರಿಗಳ ವೈದೇಶಿಕ ಸೃಷ್ಟಿನೆಯ ಸಾಧನವೆಂದರೆ ಮೇಲೆಂದು ಹೇಳಿರುತ್ತಾನೆ. ೧೭ನೆಯ ಶತಮಾನದ ಆರಂಭದೊಂದಿಗೆ, ಚಹಾವು, ನೂತನ ಪರಿಷ್ಕಾರಗಳ ಸಭ್ಯ ಆಂಗ್ಲ ಸಮಾಜದಲ್ಲಿ ಪ್ರವೇಶಗೊಂಡಿತು. ಮಹಾ ಲೇಖಕರಾದ ಡಾ॥ ಜಾನ್‌ಸನ್‌ರಂತಹವರು, ಚಹಾವನ್ನು ಧಾರಾಳವಾಗಿ ಕುಡಿದರು.

ಮೊದಲು ಕೌತುಕವಿಷಯವಾಗಿ, ಆ ಮೇಲೆ ಬಹು ವ್ಯಯದ ವಿಲಾಸಸಾಮುಗ್ರಿಯಾಗಿ, ಚಹಾವು ಒಂದು ಅಭ್ಯಾಸವಾಗಿ ಏರ್ಪಟ್ಟಿತು. ಬ್ರಿಟಿಷ್ ಜನರು, ಈ ಅಭ್ಯಾಸವನ್ನು, ೧೭ನೆಯ ಶತಮಾನದ ಅಂತ್ಯದೊಳಗಾಗಿ ರೂಢಿಸಿಕೊಂಡಿದ್ದರು. ಆಗ, ಇಂಗ್ಲೆಂಡಿನಲ್ಲಿ ಅಲ್ಲಿನ ಜನಸಂಖ್ಯೆಯ ಪ್ರತಿಯೊಬ್ಬರಿಗೂ, ಚಹಾವು ಸರಾಸರಿ ಒಂದು ಪೌಂಡು ಬೇಕಾಯಿತು. ಕ್ವೀನ್ ಎಲಿಜಬೆತ್ ಶಕವು ಉದಯವಾದಾಗ, ಚಹಾದ ಕೈಗಾರಿಕೆಯು ಸಾಮ್ರಾಜ್ಯದ ಒಂದು ಉದ್ಯಮವಾಗಿ, ಎಲ್ಲೆಲ್ಲಿಯೂ ಪೂರ್ಣವಾಗಿ ಮೇಲಕ್ಕೆದ್ದು ಮುನ್ನಡೆಯಲು ತೊಡಗಿದ್ದಿತು. ಆದರೆ ಇಂಗ್ಲಿಷ್ ಗೃಹಗಳಲ್ಲಿ, ಚಹಾಕ್ಕೆ ಪಾನೀಯವೆಂಬ ಅಷ್ಟೊಂದು ವಿಶೇಷ ಪ್ರಾಶಸ್ತ್ಯವು ದೊರಕಲೂ, ಆ ಪ್ರಾಮುಖ್ಯತೆ ಬೆಳೆಯಲೂ ಮುಖ್ಯ ಕಾರಣವು, ಇಂಡಿಯದಲ್ಲಿನ ಚಹಾಕೃಷಿಯ ವೃದ್ಧಿಯೇ. ೧೯ನೆಯ ಶತಮಾನದ ಮಧ್ಯದೊಳಗಾಗಿ, ಇಂಗ್ಲೆಂಡಿನಲ್ಲಿ ಚಹಾಕ್ಕೆ ಕೇಳಿಕೆಯು ಎಷ್ಟುಮಟ್ಟಿಗೆ ಹೆಚ್ಚಿತೆಂದರೆ,—ಆಯಾ ಋತುಗಳ ಬೆಳೆಯನ್ನು ಆದಷ್ಟು ಬೇಗನೇ ಇಂಗ್ಲೆಂಡಿಗೆ ಸಾಗಿಸಲು, ಪ್ರಸಿದ್ಧವಾದ ನಾವೆಗಳನ್ನು ಕಟ್ಟಬೇಕಾಯಿತು. ೧೮೫೫ನೇ ಇಸ್ವಿಯಲ್ಲಿ ಭಾರತೀಯ ಚಹಾದ ಹೊರ ದೇಶದ ವ್ಯಾಪಾರವು ೨೫೦ ಸಾವಿರ ಪೌಂಡುಗಳಿಗೆ ಮುಟ್ಟಿತು. ಶತಮಾನದ ಅಂತ್ಯದಲ್ಲಿ, ಇಂಗ್ಲೆಂಡಿನಲ್ಲಿ, ಪ್ರತಿಯೊಬ್ಬನಿಗೆ ವರ್ಷಕ್ಕೆ ಸರಾಸರಿ ಆರು ಪೌಂಡುಗಳಷ್ಟು ಚಾ ಬೇಕಾಯಿತು.* ಇಂಗ್ಲೆಂಡಿನ ಚಹಾ ಕುಡಿಯುವ ಅಭ್ಯಾಸದ ಬೆಳವಣಿಗೆಯು ಭಾರತೀಯ ಚಹಾ ಕೈಗಾರಿಕೆಯ ಕ್ರಮವಾದ ವಿಸ್ತಾರದಿಂದ ಸಾಧ್ಯವೆನ್ನಿಸಿತು.

ಶ್ರೀ. ಬಿ. ಎನ್. ಲಕ್ಷ್ಮಣ್ ಪೈಗಳವರಿಂದ ರಚಿತವಾದ ಪುಸ್ತಕಗಳು.

೧. ಸಚಿತ್ರ ಅಭಿನಯಗೀತಾವಳಿ—ಮದರಾಸು, ಮುಂಬಯಿ, ಮೈಸೂರು ಟಿಕ್‌ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿರುವುದಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರಿಂದ ತಯಾರಿತವಾದ ಪಾಠಪಟ್ಟಿಯಲ್ಲಿ ೧, ೨, ೩ನೆ ದರ್ಜೆಗಳ ಪದ್ಯಪಾಠಕ್ಕೆ ನಿಯಮಿತವಾಗಿದೆ. ಕ್ರಯ ೩ ಆಣೆ.

೨. ಸಚಿತ್ರ ಪದ್ಯರತ್ನಾವಳಿ (ಪ್ರಥಮ ಭಾಗ)—ಮದರಾಸು, ಮುಂಬಯಿ, ಮೈಸೂರು ಟಿಕ್‌ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿರುವದಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರಿಂದ ತಯಾರಿತವಾದ ಪಾಠಪಟ್ಟಿಯಲ್ಲಿ ೪, ೫ನೆ ದರ್ಜೆಗಳ ಪದ್ಯಪಾಠಕ್ಕೆ ನಿಯಮಿತವಾಗಿದೆ. ಕ್ರಯ ೩ ಆಣೆ.

೩. ಕೀರ್ತನಾಂಜಲಿ (ಪ್ರಥಮ ಭಾಗ)—ಮರಾಟಿ, ದಕ್ಷಿಣಾದಿ ಚಾಲುಗಳಿಂದ ಕೂಡಿದ ಭಜನಾ ಗೀತಗಳನ್ನುಳ್ಳ ಈ ಪುಸ್ತಕವು ಮಕ್ಕಳ 'ಪ್ರಾರ್ಥನೆ'ಯ ಪಾಠಕ್ಕೆ ಯೋಗ್ಯವಾಗಿದೆ. ಕ್ರಯ ೨ ಆಣೆ ೬ ಪೈ.

೪. ಯದ್ವಾತದ್ವ—ಒಂದು ಲಘುಕಥಾ ಪದ್ಯ. ಕ್ರಯ ೧ ಆಣೆ.

೫. ಕರ್ಣಾಟಕ ಸಂಗೀತ ಭಕ್ತವರೇಣ್ಯ ದಾಮಾಜಿಪಂತ ನಾಟಕ. (ಅಚ್ಚಿನಲ್ಲಿದೆ.)

ಹರಿಹರ ಪುಸ್ತಕಾಲಯ, ಪುತ್ತೂರು.

☞ ಎಲ್ಲಾ ಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲಿ ಪುಸ್ತಕದ ಪ್ರತಿಗಳು ಸಿಗುವವು.

ಕುಡಿಯಿರಿ ನಿಮ್ಮ ದಾಹವನ್ನು ನಿವಾರಿಸಿಕೊಳ್ಳಿ

ಕಣನ್ ದೇವನ್ ಟೀಯಿಂದ.

ಒತ್ತಾಯಪಡಿಸಿರಿ

ಕಣನ್ ದೇವನ್ ಟಿ

ಸಿಗುವಂತೆ.

ನೀವು ಯಂತ್ರ

ಪಶ್ಚಾತ್ತಪ ಪಡಲಾರಿರಿ

SOLE S. K. AGENTS:

THE KERALA TEA SYNDICATE,

PONANI-MALABAR.

ಮಂಗಳೂರು ಪೇಟೆಯ ಚಾಲತಿ ಧಾರಣೆ.

ರಾಶಿ	...	3— 8	3—12
ಹುಚ್ಚಕ್ಕಿ ಅಕ್ಕಿ ಮುಡಿ ೧ಕ್ಕೆ	...	3—14	4— 8
ಹೊಡ್ಡು	...	3—10	3—14
ಅಚ್ಚುಕಟ್ಟು ಬೆಳ್ತಿಗೆ ,, ೧,,	...	4— 4	4—12
ಗುಡ್ಡು ಬೆಳ್ತಿಗೆ ,, ,,	...	3—10	3—12
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	6— 0	7— 0
ಗೋದಿ ಗೋಣಿ ೧ಕ್ಕೆ	...	8— 8	10— 4
ಹುರುಳಿ ,, ,,	...	5—10	6— 0
ಕಡಲೆ ,, ,,	...	7—10	9— 0
ತೊಗರಿ ,, ,,	...	9— 0	9— 8
ತೊಗರಿಬೇಳೆ ಗೋಣಿ ೧ಕ್ಕೆ	...	11— 0	19— 0
ಉದ್ದು ಮುಡಿ ೧ಕ್ಕೆ	...	4— 6	—
ಹೆಸರು ,, ,,	...	4— 4	—
ರಾಗಿ ಗೋಣಿ ೧ಕ್ಕೆ	...	5— 0	6— 4
ಊರು ಬೆಲ್ಲ ಖಂಡಿ ೧ಕ್ಕೆ	...	30— 0	35— 0
ಉಪ್ಪು ಗೋಣಿ ,,	...	4— 8	4—12
ಪೊಬ್ರಿ ಖಂಡಿ ,,	...	60—	70— 0
ಪೊಬ್ರಿ ಹಿಂಡಿ ಖಂಡಿ ೧ಕ್ಕೆ	...	26— 0	26— 8
ಎಳ್ಳಿಂಡಿ ಖಂಡಿ ೧ಕ್ಕೆ	...	26— 4	28—12
ಪೊಬ್ರಿ ಎಣ್ಣೆ ಮಣ ೧ಕ್ಕೆ	...	4—12	5—12
ಎಳ್ಳೆಣ್ಣೆ ಡಬ್ಬಿಗೆ	...	—	6— 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	—	6— 5
ಮೋರಿಸ್ ಸಕ್ಕರೆ ಮಣ ೧ಕ್ಕೆ	...	3— 9	—
ಮೆಣಸಿನ ಕಾಯಿ ಮಣ ೧ಕ್ಕೆ	...	2— 8	3— 2
ಸಾಸಿವೆ ಮುಡಿ ೧ಕ್ಕೆ	...	5— 4	6— 0
ಕೊತ್ತಂಬರಿ ಮುಡಿ ೧ಕ್ಕೆ	...	2— 8	3— 0
ಸೇಟಿನ ಕಾಫಿ ಖಂಡಿ ೧ಕ್ಕೆ	...	145— 0	150— 0
ಸೇಟಿನ ಪೀಬರಿ ಕಾಫಿ ಖಂಡಿ ೧ಕ್ಕೆ	...	165— 0	175— 0
ಮೂನ್‌ಸೂನ್ ಏ ಏ ಕಾಫಿ ಖಂಡಿ ೧ಕ್ಕೆ...		170— 0	175— 0
ಬಿಳಿ ಗೋಟು ಅಡಿಕೆ ಖಂಡಿ ೧ಕ್ಕೆ (ಹಳ್ತು)		100— 0	115— 0
ಕಾಳುಮೆಣಸು ಖಂಡಿ ೧ಕ್ಕೆ	...	95— 0	102— 8
ಯೂಲಕ್ಕಿ ಮಣ ೧ಕ್ಕೆ ಕೊಡಗು	...	40— 0	45— 0
,, ,, ,, ಸಕಲೇಶಪುರ	...	30— 0	35— 0
,, ,, ,, ಬೀಜ	...	40— 0	50— 0
ಸೀರುಬೀಜ ಮುಡಿ ೧ಕ್ಕೆ	...	3— 8	4— 4
ಬತ್ತ ಮುಡಿ ೧ಕೆ	...	1— 8	1—10
ಎಳ್ಳು ಮುಡಿ ೧ಕ್ಕೆ	...	5— 2	5— 4
ತುಪ್ಪ ಮಣ ೧ಕ್ಕೆ	...	17— 0	18— 0
ಕಬ್ಬಿಣ ಖಂಡಿ ೧ಕ್ಕೆ	...	35— 0	37— 8
ತಾಂಬ್ರ ತಗಡು ಮಣ ೧ಕ್ಕೆ	...	9—12	9—14
ಪವನು ೧ಕ್ಕೆ	...	22— 8	—
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	12— 8	14— 0
ಚೀನ ಬೆಳ್ಳಿ ಸೇರು ೧ಕ್ಕೆ	...	17— 8	18— 0
ಹಿತ್ತಾಳೆ ತಗಡು ಮಣ ೧ಕ್ಕೆ	...	10— 0	10— 0
ಹೊಸತ್ತು ಬಿಳಿಗೋಟು ಖಂಡಿ ೧ಕ್ಕೆ	...	75— 0	85— 0
ಮಂಗಳೂರು ಹಂಚು I ಕ್ವಾಸ್—1000ಕ್ಕೆ		ರೂ. 26ರಿಂದ	30
,, ದಂಬೆಗಳು ,, ,,		ರೂ. 70ರಿಂದ	80
ನೆಲಕ್ಕೆ ಹಾಸುವ ಇಟ್ಟಿಗೆಗಳು ,, ,,		ರೂ. 35ರಿಂದ	40

GUARANTEED

HYGIENIC RUBBER GOODS

(PROPHYLACTIC)

Of superior quality. Dozen Rs. 3/12. Six annas postage stamps will get you one as sample.

K. Agency,
(Dept. C),
MANGALORE No. 13.

ಕಂಠೀರವ

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾ ಪತ್ರಿಕೆ.

ಚೆಂದಾ ವಿವರ.

	ಸ್ಥಳದವರಿಗೆ	ಪರಸ್ಥಳದವರಿಗೆ
೧ ವರ್ಷಕ್ಕೆ	ರೂ. ೨—೮—೦	ರೂ. ೪— ೨—೦
೬ ತಿಂಗಳುಗಳಿಗೆ	ರೂ. ೧—೪—೦	ರೂ. ೨— ೧—೦

ಬಿಡಿ ಸಂಚಿಕೆ ಬೆಲೆ ಮಂಗಳವಾರ ೦—೧—೦.
ಶುಕ್ರವಾರ ೦—೨—೬.

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಲ್ಪಡುವವು.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

Circulation Manager,
THE KANTEERAVA,
MANGALORE.

ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ	ಘಂಟೆ	ತಲಪುವ	ಘಂಟೆ
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-20
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಿಗ್ಗೆ	9-20

ಅಪೂರ್ವ ಲಾಭ! ಒಳ್ಳೆ ಸಮಯ!!
ಎಂದಿಗೂ ದೊರೆಯಲಾರದು!!!

ವಿವಾಹ ಜಾತಕ ಕುಂಡಲಿ ಪದಕ ಗ್ರಂಥ.

ಈ ಅಪೂರ್ವ ಗ್ರಂಥವನ್ನು ಸಣ್ಣ ಹುಡುಗರು, ಹೆಣ್ಣು ಹುಕ್ಕಳು ನೋಡಿ ೫ ನಿಮಿಷಗಳಲ್ಲಿ ಗುರುಬಲ, ಶನಿಬಲ ಹೇಳಲಿಕ್ಕೆ ಬರುತ್ತೆ. ಹೆಂದು ಪಾವು ಪುಡಿಯಲ್ಲೆ ಗ್ರಹ ರಾಶಿ ಕುಂಡಲಿಯನ್ನು ಹಾಕಿ ಲಗ್ನ ಸಾಧಿಸಿ, ಜನ್ಮಲಗ್ನ ಕುಂಡಲಿ, ಅಂಶ ಕುಂಡಲಿ, ನಕ್ಷತ್ರ, ಅಷ್ಟಮಂತ ಇಷ್ಟಕಾಲ, ಚಂದ್ರಚಾರ, ಗ್ರಹದಶಾನಿರ್ಣಯ, ಶಿಶುವು ಹುಟ್ಟಿದ ನಕ್ಷತ್ರ ದೋಷ, ಯಾರ್ಯಾರಿಗೆ ಅರಿಷ್ಟವಾಗುವುದು, ಶಾಂತಿ ದಾನಕೊಡುವ ಕ್ರಮ, ಶಿಶುವಿಗೆ ಇಷ್ಟನೆ ವರುಷಗಳಲ್ಲಿ ಬಾಲಾರಿಷ್ಟವುಂಟಾಗುವದು, ಇಡರ ಪರಿಹಾರಕ್ಕೆ ಶಾಂತಿಕ್ರಮ, ಶಿಶುವಿಗೆ ಜನನಾದಿಯಾಗಿ ಆಯುಷ್ಯದ ವರೆಗೂ ಇಪ್ಪತ್ತಪ್ಪನೇ ವರುಷಗಳಲ್ಲಿ ಇಂಥಾ ಕಂಟಕಗಳು ಜರುಗುವ ವಿಷಯ, ಇಷ್ಟೆ ವರುಷ ಆಯುಷ್ಯವನ್ನು ತಿಳಿದು ಜಾತಕಪತ್ರಿಕೆಯನ್ನು ಬರೆಯಲಿಕ್ಕೆ ಬರುತ್ತೆ. ಬೇಕಾದ ಮಾಸದಲ್ಲಿ ಬಲವಾದ ವಿವಾಹಲಗ್ನವನ್ನು ತೆಗೆದು;— ಸುಮುಹೂರ್ತಕಾಲವನ್ನು, ತಾರಾಬಲ, ಚಂದ್ರಬಲವನ್ನು ಕಂಡುಹಿಡಿದು, ಲಗ್ನಪತ್ರಿಕೆಯನ್ನು ಬರೆದು ಕಂಕಣಧಾರಣ, ಮಾಂಗಲ್ಯಧಾರಣ ಮುಂತಾದ ಎಲ್ಲಾ ವಿವಾಹಕಾರ್ಯಗಳನ್ನು ಆಯಾಯ ಮಂತ್ರಗಳಿಂದ ಮಾಡಿಸುವ ವಿವಾಹವಿಧಿಯನ್ನು ಚೆನ್ನಾಗಿ ಬರೆದಿರುತ್ತೆ. ೨ ನಿಮಿಷದಲ್ಲೆ ಗಂಡು ಹೆಣ್ಣಿನ ಸಾಲಾವಳಿಯಲ್ಲಿ ಇಷ್ಟು ಗುಣಗಳು ಬರುತ್ತವೆಂಬುವದನ್ನು ತಿಳಿಯುತ್ತೆ. ಮನೆ ಕಟ್ಟುವ, ಆಯ, ಧನ, ಋಣ, ಆಯುಷ್ಯ ಮುಂತಾದ ಯಾವತ್ತು ಬರತಕ್ಕ ಉದ್ದ ಅಗಲದ ಮೊಳಗಳ ಸಂಖ್ಯೆಯನ್ನು ಹಾಕಿರುತ್ತೆ. ಬೇರೆ ಗುಣಿಸುವ ಅವಶ್ಯಕವಿಲ್ಲ. ಬೆಲ್ಲ, ಅಡಿಕೆ, ಅಕ್ಕಿ, ಬೆಳ್ಳಿ, ಭಂಗಾರ ಮುಂತಾದ ಯಾವತ್ತೂ ಪದಾರ್ಥಗಳಿಗೆ ಪ್ರತಿದಿನವು ತೇಜಿ ಮಂದಿ ಆಗುವ ವಿಷಯವನ್ನು ಸುಲಭವಾಗಿ ತಿಳಿಯುವ ಕ್ರಮ, ವೇದಮಂತ್ರಗಳಿಂದ ನವಗ್ರಹಶಾಂತಿ ಮಾಡುವ ಕ್ರಮ, ಶನಿ ಜಪ ಕ್ರಮ ಇನ್ನೂ ಅನೇಕ ಅಪೂರ್ವ ವಿಷಯಗಳನ್ನೂ ಹಾಕಿರುತ್ತೆ. ಮೇಲ್ಕುಂಡ ಎಲ್ಲಾ ಮರ್ಮಗಳನ್ನು ತಿಳಿಯಲಿಕ್ಕೆ ಒಂದು ಶ್ಲೋಕವನ್ನು ಕಲಿಯಬೇಕಿದೂ ಗಣಿತ ಮಾಡುವದೂ ಅವಶ್ಯಕವಿಲ್ಲ. ಯಾರ ಸಹಾಯ ಬೇಕಿಲ್ಲ. ಹಾಗಿಲ್ಲದಿದ್ದರೆ ವಾಪಸು ಮಾಡಿರಿ. ಈ ಅಪೂರ್ವ ಗ್ರಂಥವನ್ನು ಪ್ರತಿಯೊಬ್ಬರು ತರಿಸಿಕೊಂಡು ತಮ್ಮ ಸಂಸಾರದಲ್ಲಿ ಸುಖ ಹೊಂದಿರಿ.

ಕ್ರಯ ಪ್ರತಿ ೧ಕ್ಕೆ ರೂ. ೧-೦-೦.

ವಿಳಾಸ:— ಮೇನೇಜರ್,
ಟಿ. ಹೆಚ್. ಎಂ. ಅಂಡ್ ಕೊ.,
ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

For all kinds of
NEAT AND ACCURATE PRINTING,
please consult
The Saraswathi Printing Works, Ltd.,
MANGALORE, S. K.

ಶಕ ೧೮೫೭ ಧಾತು ಸಂ। ೧೯೩೬-೩೭ನೇ ಇಸವಿ ಜುಲಾಯಿ। ಮಾಹೆ ಪಂಚಾಂಗ

ತಾರೀಖು	ವಾರಗಳ ಹೆಸರು	ಚಾಂದ್ರಮಾನ ಮಾಸ	ತಿಥಿ	ಕಾಲ	ಸೌರಮಾನ ಮಾಸ	ತೇದಿ	ನಕ್ಷತ್ರಗಳು ಹೆಸರು	ಕಾಲ	ಸೂರ್ಯ ಉದಯ	ಅಸ್ತ
1	2	3	4	5	6	7	8	9	10	11
				ಘ.ವಿ.				ಘ. ವಿ.	ಗಂ. ನಿ.	ಗಂ.ನಿ.
8	ಬುಧವಾರ	ಅಷಾಢ ಬಹುಳ	4	30 2	ಕರ್ಕಾಟಕ	25	ಧನಿಷ್ಠ	13 32	6 3	6 52
9	ಗುರುವಾರ		5	25 6		26	ಶತಭಿಷ	11 37	6 3	6 52
10	ಶುಕ್ರವಾರ		6	19 34		27	ಪೂಭಾ.	8 5	6 3	6 52
11	ಶನಿವಾರ		7	13 39		28	ಉಭಾ.	5 29	6 4	6 52
12	ಆದಿತ್ಯವಾರ		8	7 29		29	ರೇವತಿ	1 39	6 4	6 52
13	ಸೋಮವಾರ		9	1 17	ಸಿಂಹ	30	ಅಶ್ವಿನಿ	52 45	6 4	6 52
14	ಮಂಗಳವಾರ		10	49 47		31	ಭರಣಿ	49 21	6 4	6 52

ರಾಹುಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ
ಭಾನು	ಸಾಯಂಕಾಲ	4½	6
ಸೋಮ	ಬೆಳಿಗ್ಗೆ	7½	9
ಮಂಗಳ	ಸಾಯಂಕಾಲ	3	4½
ಬುಧ	ಬೆಳಿಗ್ಗೆ	12	1½
ಗುರು	ಸಾಯಂಕಾಲ	1½	3
ಶುಕ್ರ	ಬೆಳಿಗ್ಗೆ	10½	12
ಶನಿ	ಬೆಳಿಗ್ಗೆ	9	10½

ಗುಳಿಕಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ.
ಭಾನು	ಸಾಯಂಕಾಲ	3	4½
ಸೋಮ	,,	1½	3
ಮಂಗಳ	ಬೆಳಿಗ್ಗೆ	12	1½
ಬುಧ	,,	10½	12
ಗುರು	,,	9	10½
ಶುಕ್ರ	,,	7½	9
ಶನಿ	,,	6	7½

You know for certain:-

THAT AN ATTRACTIVE PHOTO WILL ALWAYS BE APPRECIATED BY EVERY PERSON.

You know also that a charming photo if taken at a moderate rate will be a bargain.

You know that nowadays any business should run so as to suit every man's pocket.

YOU KNOW THAT

Messrs. "ISHWAR PHOTO STUDIO"

GANAPATHY TEMPLE STREET,

have reduced their rates to suit you.

So we request you to kindly try us once before you place **Your orders elsewhere.**

THANKS!

ಶ್ರೀ ದುರ್ಗಾಪರಮೇಶ್ವರೀ ಮೋಟರ್ ಸರ್ವೀಸ್, ಮಂಗಳೂರು.

ಸ್ಥಾಪಿತವಾದುದು 1927ರಲ್ಲಿ!

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತಿನಿತ್ಯವೂ ಮಂಗಳೂರಿಂದ ಮರವೂರು, ಬಜಪೆ; ಕಟೀಲ್, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಬಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ, ಮರವೂರು, ಬಜಪೆ, ಕಟೀಲ್ ಮತ್ತು ಮುಲ್ಕಿಪ್ಯೂರಿಗಾಗಿ ಬೆಳ್ಮಣ್ಣಿಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಬಂಟ್ವಾಳಕ್ಕೂ; ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಕಾರ್ಕಳಕ್ಕೂ; ಕಾರ್ಕಳದಿಂದ ಬೆಳ್ಮಣ್ಣು, ಮಂಚಿ ಕಲ್ಲು ಮಾರ್ಗವಾಗಿ ಉಡುಪಿಗೂ ಚಲನವಲನೆಯಾಗುವುವು.

ನಮ್ಮ ಹೊಸ ಲೈನುಗಳು.

ಮೂಲ್ಕಿ — ಕಿನ್ನಿಗೋಳಿ — ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ನೀಡಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ — ತೀರ್ಥಹಳ್ಳಿ — ಕೊಪ್ಪ — ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ತುಂಬ ಅನುಕೂಲ.

ವಿ. ಸೂ. — ಮಂಗಳೂರು, ಮೂಲ್ಕಿ, ಮಂಚಕಲ್, ಉಡ್ಪಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಗಿನ ಮತ್ತೂ ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯೋದ್ದೇಶ!
ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

ಮಾರ್ಗೊ ಸೋಪ್

ಬೇಸಿಗೆಯ ಕಾಲಕ್ಕೂ ಚರ್ಮದ ಮೃದುತ್ವಕ್ಕೂ
ಅತ್ಯುತ್ಕೃಷ್ಟವಾದುದು.

ಇದೇ ಪ್ರಥಮವಾದ ಮತ್ತೂ ಅಗಿರತಕ್ಕ ಒಂದೇ ಒಂದು "ನೀಮ್" ಸಾಬೂನು.

ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಮತ್ತು ಸ್ಥಳೀಯ ಸ್ಟೋಕಿಸ್ಟರಲ್ಲಿ ದೊರೆಯುತ್ತದೆ.

"ನೀಮ್" ಟೂತ್‌ಪೇಸ್ಟ್

ಭಾರತೀಯರು ಅನಾದಿಕಾಲದಿಂದಲೂ ಹಲ್ಲು ಜುಜ್ಜುವುದಕ್ಕೆ ಉಪಯೋಗಿಸುವ "ನೀಮ್" ಬೇವಿನ ಕಡ್ಡಿಯ ವಿಷಹಾರಿಯಾದ ಮತ್ತು ಸ್ತಂಭಕವಾದ ಗುಣಗಳೆ ಅದರ ಆರೋಗ್ಯಕರವಾದ ಹಲ್ಲುಗಳ ಗುಟ್ಟೆಂದು ತಿಳಿಯಲಾಗಿದೆ.

ಕಾಲ್ಕೆಮಿಕೊ ನೀಮ್ ಟೂತ್‌ಪೇಸ್ಟ್

ಬೇವಿನ ಕಡ್ಡಿಯ ಎಲ್ಲಾ ಗುಣಗಳನ್ನು ಉಳ್ಳುದಾಗಿದೆಯಲ್ಲದೆ ಪರಿಣಾಮಕಾರಿಯಾಗಿ ಹಲ್ಲನ್ನು ಶುದ್ಧಗೊಳಿಸುವದಕ್ಕೆ ಆಧುನಿಕ ದಂತ ವೈದ್ಯ ಶಾಸ್ತ್ರಕ್ಕೆ ತಿಳಿದಿರುವ ಪದಾರ್ಥಗಳನ್ನು ಒಳಕೊಂಡಿದೆ.

ಸೀಸವಿಲ್ಲದ ಟಿನ್ನಿನ ಕೊಲ್ಲ್ಯಾಪ್ಸಿಬಲ್ ಟ್ಯೂಬುಗಳಲ್ಲಿದೆ.

ದಂತಸಂಜಸವನ್ನು ಅಪೇಕ್ಷಿಸುವವರ ಉಪಯೋಗಕ್ಕಾಗಿ ನಮ್ಮ

ಮಾರ್ಗೋಫ್ರಿಸ್ "ನೀಮ್" ಹಲ್ಲುಪುಡಿ"

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್.
ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ.
ಸ್ಕೂಲ್ ಬುಕ್ ಕೋ, ರಥಬೀದಿ.

ನಮ್ಮ ಬ್ಯಾಲೆನ್ಸ್ ಷೀಟುಗಳೇ ಇರುವ ವಿದ್ಯಮಾನಗಳನ್ನು ಪ್ರಕಟಿಸುತ್ತವೆ.

"ಸ್ವದೇಶಿ"ಯ ಜಾಗ್ರತಿಯ ಕಾಲದಲ್ಲಿ ಸ್ಥಾಪನೆಗೊಂಡ, ಕಲ್ಕತ್ತೆಯ "ನ್ಯಾಶನಲ್" ದಿನದಿನಕ್ಕೂ ಬಲಗೊಂಡು ಪುಷ್ಟಿಯಾಗಿ, ಪರಿಣಾಮದಲ್ಲಿ, ಅದು ಇಂದು ಪೂರ್ವದೇಶಗಳ ಜೀವವಿಮಾ ಕಾರ್ಯಾಲಯಗಳಲ್ಲಿ ಪ್ರಮುಖವೆನ್ನಿಸಿದೆ. ಈ ಸಂಸ್ಥೆಯು, ಈ ವ್ಯವಹಾರ ನಡೆಸಿರುವ ಸುಮಾರು 30 ವರ್ಷಗಳ ಕಾಲದಲ್ಲಿ, ಪಾಲಿಸಿದಾರರಿಗೂ, ಅವರ ಹಕ್ಕುದಾರರಿಗೂ ಇನ್ನೊಂದು ಅಲ್ಪಾವಧಿಯಲ್ಲಿಯೇ "ಕ್ಲೈಮುಗಳ" ಪ್ರಾವತಿಗಾಗಿ 1,30,00,000 ರೂಪಾಯಿಗಳಿಗೂ ಮಿಕ್ಕು ಸಲ್ಲಿಸಿರುವ ದಷ್ಟೇ ಅಲ್ಲದೆ, ಕಂಪೆನಿಯ ಆಸ್ತಿಯ ರೂಪದಲ್ಲಿ ರೂಪಾಯಿ 2,50,00,000ಗಳಿಗೂ ಹೆಚ್ಚಾಗಿ ಸಂಗ್ರಹಿಸಿಡಲೂ ಸಮರ್ಥವಾಗಿದೆ. ಜೀವನದಲ್ಲಿ ಉಳಿಸಲಾದ ಗಂಟಿನೊಡನೆ ಜೂಜಾಡಲು ಬಯಸದವರ ಆತುರಪೂರ್ವಕವಾದ ಆಲೋಚನೆಗೆ ಒಳಗಾಗಲು ಈ ನಿಜ ವಿದ್ಯಮಾನಗಳೇ ಸಾಕೆನ್ನಬಹುದಾಗಿದೆ. ಇದು ನಿಮ್ಮ ಪರ್ಯಾಲೋಚನೆಗೂ ಏತಕ್ಕೆ ಒಳಗಾಗಬಾರದು?

ನಿಮಗೆ ಬೇಕಾದುದೇನೆಂದು ನೀವು ನಮಗೆ ತಿಳಿಸಿದರೇ ಸಾಕು; ಮಿಕ್ಕ ವಿಚಾರಗಳನ್ನೆಲ್ಲ ನಾವೇ ನೋಡಿಕೊಳ್ಳುವೆವು.

ನ್ಯಾಶನಲ್ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್,

ಹೆಡ್ ಆಫೀಸು, ಕಲ್ಕತ್ತ.

ಏಜನ್ಸಿಯ ಶರ್ತಗಳಿಗೆ ಬರೆದುಕೊಳ್ಳಿ:—

ಬ್ರಾಂಚ್ ಸೆಕ್ರಟರಿ, **ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,**
362, ಚೈನಾ ಬಜಾರ್ ರೋಡ್, ಎಸ್ಪ್ಲನೇಡ್, ಮದ್ರಾಸ್.

ಅಥವಾ

ದಿ ಆರ್ಗನೈಜಿಂಗ್ ಸೆಕ್ರಟರಿ,
ಸಬ್ ಆಫೀಸ್,
171, ನ್ಯೂ ಸ್ಟ್ರೀಟ್, ಮಧುರೆ.

ದಿ ಚೀಫ್ ಏಜೆನ್ಸಿ,
ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್,
ಬೆಂಗಳೂರು ಸಿಟಿ.

ಬೆಂಕಿ ಮತ್ತೂ ಮೋಟರ್ ಅವಗಡಗಳ ಇನ್ಶೂರೆನ್ಸಿಗಾಗಿ
ದಿ ಅಸೋಸಿಯೇಟೆಡ್ ನ್ಯಾಶನಲ್ ಫಯರ್ ಮತ್ತೂ ಜನರಲ್ ಇನ್ಶುರೆನ್ಸ್ ಕೋ., ಲಿಮಿಟೆಡ್,
ಎಂಬೀ ಸಂಸ್ಥೆಯೊಡನೆ ವಿಚಾರಿಸಿರಿ.

S. K. M.

ಸಿದ್ಧ ಕಲ್ಪ ಮಕರಧ್ವಜ

(ರಿಜಿಸ್ಟರ್ಡ್)

ನಿಶ್ಶಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು, ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಜಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೫೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೦ಕ್ಕೆ ರೂ. ೧೦.

THE MADRAS
AYURVEDIC PHARMACY (LTD.),
Madras—P. O. Box 151, 289 Esplanade,
180, Mount Rd., MADRAS.

THE BANK OF MANGALORE, LTD.,

Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.

ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

Authorised Capital ಅಧಿಕೃತ ಮೂಲಧನ	Rs. 2,00,000.	Subscribed Capital ಚಂದಾ ಅರ್ಪಿಸಿದ್ದು	Rs. 30,175.	Paid-up Capital ತೆತ್ತು ಬಂದದ್ದು	Rs. 6,915.

STATEMENT OF AFFAIRS AS ON 31ST DEC. 1935.

Capital ಖಾಲು ಮೂಲಿಕರಿಂದ ವಸೂಲಾದ ಧನ	ರೂ. 6,915— 0— 0	Furniture and Safe ಫರ್ನಿಚರ ವಗೈರೆ	ರೂ. 1,058— 0— 0
Reserve Fund ಕ್ಷೇಮ ನಿಧಿ	ರೂ. 1,000— 0— 0	Authorised Investments ಜಿನ್ನಾಭರಣ, ವ ಇತರ ಜವಾಬ್ದಾರಿಯ ಮೇಲೆ	ರೂ. 112,508— 1— 8
Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಶೇವಣಾತಿಗಳು	ರೂ. 84,706— 9— 4	Bills per contra ಬಿಲ್ಸ್ ಜನೂ ಇರುವಂತೆ ಬಹಾ	ರೂ. 17,779—10— 5
Due to Bankers ಬೇಂಕರರಿಗೆ ಸಲ್ಲುತಕ್ಕದ್ದು	ರೂ. 21,996— 1— 6	Sundries ಸಾಧಿಲವಾರು	ರೂ. 1,642— 5— 7
Bills for Collection ಜಮಾ ಮಾಡುವರೆ ಇರುವ ಬೀಲುಗಳು	ರೂ. 17,779—10— 5	Cash in hand and with Bankers ಕೈಯಲ್ಲಿ ಇರತಕ್ಕ ವ, ಬೇಂಕರರಲ್ಲಿರತಕ್ಕ ನಗದಿ ಶಿಲ್ಕು	ರೂ. 1,787—14— 0
Sundries ಸಾಧಿಲವಾರು	ರೂ. 2,378—10— 5		
	ರೂ. 134,775—15— 8		ರೂ. 134,775—15— 8

Fixed Deposits ನಿರಖು ಶೇವಣಾತಿ.

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.
For 1 year 6% ಒಂದು ವರ್ಷ „ For 3 months 4½% ಮೂರು ತಿಂಗಳ „

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಶೇವಣಾತಿಗಳು ಸ್ವೀಕರಿಸಲ್ಪಡುವವು.
Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲ್ಲಿಕೋಟೆ, ಮತ್ತು ಬೆಂಗಳೂರುಗಳಿಗೆ ಡ್ರಿಫ್ಟ್‌ಗಳು ಕೊಡಲಾಗುವುವು. ಚಕ್ಸ್ ಮತ್ತು ಬಿಲ್ಸ್ ಒಫ್ ಎಕ್ಸ್‌ಚೆಂಜ್ ಹಿಂದೂಸ್ಥಾನದಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ವಟಾಯಿಸಿಕೊಡಲಾಗುವುವು. Savings Bank Deposits-Interest allowed on daily balances at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ದಿವಸಂಪ್ರತಿ ಶಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.
A FEW SHARES ARE STILL AVAILABLE AT PAR.
APPLY FOR PARTICULARS.

ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.
ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.
ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.